# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜನವರಿ 22, 2021

ಸಂಪುಟ : 47 ಸಂಚಿಕೆ : 263 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




ಚಿತ್ರ: ರಫೀಕ್, ಜನತಾವಾಣಿ

**ಫುಟ್‌ಪಾತ್‌ಗೆ ಬೇಲಿ ಪಾದಚಾರಿ ರಸ್ತೇಲಿ..**

ದಾವಣಗೆರೆ ನಗರದ ಪ್ರಮುಖ ರಸ್ತೆಗಳಲ್ಲೊಂದಾದ ಹದಡಿ ರಸ್ತೆಯ ನಿಟುವಳ್ಳಿ ವೃತ್ತದ ಸಮೀಪ ವ್ಯಾಪಾರಿಗಳು ಫುಟ್‌ಪಾತ್ ಅತಿಕ್ರಮಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ, ತಮ್ಮದೇ ಜಾಗ ಎಂಬಂತೆ ಬೇಲಿಯನ್ನೂ ನಿರ್ಮಿಸಿಕೊಂಡಿದ್ದಾರೆ. ಪರಿಣಾಮ ಪಾದಚಾರಿಗಳು ರಸ್ತೆಯಲ್ಲಿ ಓಡಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಸಂಬಂಧಿಸಿದ ಅಧಿಕಾರಿಗಳು ಗಮನ ಹರಿಸುವರೇ?

# ಮತ್ತೆ ಖಾತೆ ಕ್ಯಾತೆ

## ಹೊರಗಿನಿಂದ ಬಂದವರ ಖಾತೆಗಳಷ್ಟೇ ಮರು ಹಂಚಿಕೆ

## ಹೇಳಿದ್ದೊಂದು, ಕೊಟ್ಟಿದ್ದೊಂದು: ಭುಗಿಲೆದ್ದ ಅಸಮಾಧಾನ

ಬೆಂಗಳೂರು, ಜ. 21 - ನೂತನ ಸಚಿವರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಖಾತೆ ಹಂಚಿಕೆ ಮಾಡಿದ ಬೆನ್ನಲ್ಲೇ ಅಸಮಾಧಾನ ಭುಗಿಲೆದಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಬಳಿ ಇರುವ ಯಾವುದೇ ಹೆಚ್ಚುವರಿ ಖಾತೆಗಳನ್ನು ಹಂಚಿಕೆ ಮಾಡಿಲ್ಲ. ಅಷ್ಟೇ ಅಲ್ಲ, ತಮ್ಮ ಸಂಪುಟದ ಹಿರಿಯ ಸಚಿವರುಗಳ ಖಾತೆಗಳಿಗೂ ಕೈ ಹಾಕಿಲ್ಲ.

ಆದರೆ ಹೊರಗಿನಿಂದ ಬಂದ ಮಂತ್ರಿಗಳಲ್ಲಿದ್ದ ಹೆಚ್ಚುವರಿ ಖಾತೆಗಳನ್ನು ಹಿಂದಕ್ಕೆ ಪಡೆದು, ಮರು ಹಂಚಿಕೆ ಮಾಡಿದ್ದಾರೆ.

ಇದುವರೆಗೂ ಕಾನೂನು ಮತ್ತು ಸಂಸದೀಯ ಹಾಗೂ ಸಣ್ಣ ನೀರಾವರಿ ನೋಡಿಕೊಳ್ಳುತ್ತಿದ್ದ ಮಾಧುಸ್ವಾಮಿ ಅವರಿಂದ ಖಾತೆಗಳನ್ನು ಹಿಂದಕ್ಕೆ ಪಡೆದು, ಗೃಹ ಇಲಾಖೆ ಹೊಣೆ ಹೊತ್ತ ಬಸವರಾಜ್ ಬೊಮ್ಮಾಯಿ ಅವರಿಗೆ ಕಾನೂನು ಇಲಾಖೆಯ ಹೆಚ್ಚುವರಿ ಹೊಣೆಗಾರಿಕೆ ವಹಿಸಿದ್ದಾರೆ.

ಸುಧಾಕರ್ ಬಳಿ ಇದ್ದ ವೈದ್ಯಕೀಯ ಶಿಕ್ಷಣ ಖಾತೆಯನ್ನು ಮಾಧುಸ್ವಾಮಿ ಅವರಿಗೆ ನೀಡಿದ್ದಾರೆ. ಹೊಸಬರಿಗೆ ಖಾತೆ ನೀಡುವುದರ ಜೊತೆಗೆ ತಮ್ಮ ಮಂತ್ರಿ ಮಂಡಲದ ಹಿಂದಿನ ಹತ್ತು ಸಚಿವರಿಗೂ ಖಾತೆ ಬದಲಾವಣೆ ಮಾಡಿದ್ದಾರೆ.

ಉಪಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ, ಡಾ. ಸಿ.ಎನ್. ಅಶ್ವತ್ಥ ನಾರಾಯಣ, ಲಕ್ಷ್ಮಣ ಸವದಿ, ಹಿರಿಯ ಸಚಿವರಾದ ಆರ್. ಅಶೋಕ್, ಕೆ.ಎಸ್. ಈಶ್ವರಪ್ಪ, ಬಿ. ಶ್ರೀರಾಮುಲು, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ಸುರೇಶ್‌ಕುಮಾರ್, ವಿ. ಸೋಮಣ್ಣ ಅವರ ಖಾತೆಗಳನ್ನು ಬದಲಾವಣೆ ಮಾಡಿಲ್ಲ. ಹಣಕಾಸು, ಇಂಧನ, ಹಾಗೂ ಬೆಂಗಳೂರು ಅಭಿವೃದ್ಧಿ ಖಾತೆಗಳ ಮೇಲೆ ಕೆಲವು ಹಿರಿಯ (4ನೇ ಪುಟಕ್ಕೆ)

**ಮಾಧುಸ್ವಾಮಿಗೆ ವೈದ್ಯಕೀಯ, ಎಂಟಿಬಿಗೆ ಅಬಕಾರಿ, ತೋಟಗಾರಿಕೆಗೆ ಬಂದ ಗೋಪಾಲಯ್ಯ**

### ಮುಂದಿನ ದಿನಗಳಲ್ಲಿ ಖಾತೆ ಬದಲಾವಣೆ : ಸಿಎಂ ಭರವಸೆ

**ಖಾತೆ ಹಂಚಿಕೆ ನಂತರ ಕೆಲವು ಸಚಿವರು ಅಸಮಾಧಾನಗೊಂಡಿದ್ದಾರೆ. ಅವರನ್ನು ಕರೆದು, ಚರ್ಚೆ ಮಾಡಿದ್ದೇನೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ. ನನ್ನಲ್ಲಿ ಇರುವುದನ್ನೇ ಹಂಚಿದ್ದೇನೆ ಮತ್ತು ಜವಾಬ್ದಾರಿ ಹೊಣೆಗಾರಿಕೆ ನೀಡಿದ್ದೇನೆ. ಅವರು ಅಲ್ಲಿ ಕೆಲಸ ಮಾಡಲಿ. ಸರಿ ಹೋಗದಿದ್ದರೆ, ಮುಂದಿನ ದಿನಗಳಲ್ಲಿ ಬದಲಾವಣೆ ಮಾಡುವುದಾಗಿಯೂ ಅಸಮಾಧಾನ ಹೊಂದಿರುವವರಿಗೆ ತಿಳಿಸಿದ್ದೇನೆ ಎಂದರು.**

### ವಲಸಿಗರ ಅಸಮಾಧಾನ

ಬೆಂಗಳೂರು, ಜ. 21 - ಸರ್ಕಾರಕ್ಕೆ ಬಹುಮತ ಬಂದ ನಂತರ ನಮ್ಮನ್ನು ಕಡೆಗಣಿಸುತ್ತಿದ್ದಾರೆ ಎಂದು ಮಂತ್ರಿಮಂಡಲದಲ್ಲಿರುವ ಕೆಲ ವಲಸಿಗ ಸಚಿವರುಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೂತನ ಸಚಿವರುಗಳಿಗೆ ಖಾತೆ ಹಂಚಿಕೆ ಮಾಡಿ, ಕೆಲವು ಸಚಿವರ ಖಾತೆ ಬದಲಾವಣೆ ಮಾಡಿದ ನಂತರ ಅಸಮಾಧಾನಗೊಂಡವರು ಮುಖ್ಯಮಂತ್ರಿಯವರ ನಡವಳಿಕೆ ವಿರುದ್ಧ ಕಿಡಿಕಾರಿದ್ದಾರೆ. ಖಾತೆ ಹಂಚಿಕೆಯಾಗುತ್ತಿದ್ದಂತೆ ಆರೋಗ್ಯ ಇಲಾಖೆ ಹೊಣೆ ಹೊತ್ತಿರುವ ಡಾ. ಸುಧಾಕರ್ (2ನೇ ಪುಟಕ್ಕೆ)

### ಗಣಿಗೆ ಖುಷಿಯಾದ ನಿರಾಣಿ

ಬೆಂಗಳೂರು, ಜ. 21 - ನನಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನೀಡಿರೋದು ಸಂತೋಷ ತಂದಿದೆ ಎಂದು ಮುರುಗೇಶ್ ನಿರಾಣಿ ತಿಳಿಸಿದ್ದಾರೆ.

ಹೊಸದಾಗಿ ಗಣಿಗಾರಿಕೆ ಮಾಡುವವರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಅಧ್ಯಯನ ಮಾಡಿ ಪ್ರಯತ್ನಿಸುತ್ತೇನೆ. ಕೈಗಾರಿಕಾ ಖಾತೆ ಸೇರಿದಂತೆ ಯಾವುದೇ ಖಾತೆಗೆ ನಾನು ಬೇಡಿಕೆ ಇಟ್ಟಿರಲಿಲ್ಲ. ಮುಖ್ಯಮಂತ್ರಿಯವರು ಕೊಟ್ಟಿರುವ ಖಾತೆಯಲ್ಲಿ ಸಂತೋಷವಾಗಿದೆ ಎಂದವರು ತಿಳಿಸಿದ್ದಾರೆ.

ಕೆಲವರಿಗೆ ಅಸಮಾಧಾನವಾಗಿದೆ ಎಂದು ಕೇಳಲ್ಪಟ್ಟೆ. ಮುಂದಿನ ದಿನಗಳಲ್ಲಿ ಸಂಪುಟ ಪುನರ್‌ರಚನೆ ಆಗುವ ಸಾಧ್ಯತೆ (2ನೇ ಪುಟಕ್ಕೆ)

# ಕೃಷಿ ಕಾಯ್ದೆಗಳ ಅಮಾನತ್ತಿಗೆ ಮಣಿಯದ ರೈತ ಸಂಘಟನೆಗಳು

ನವದೆಹಲಿ, ಜ. 21 - ಮೂರು ಕೃಷಿ ಕಾಯ್ದೆಗಳನ್ನು 18 ತಿಂಗಳ ಕಾಲ ತಡೆ ಹಿಡಿಯುವ ಕೇಂದ್ರ ಸರ್ಕಾರದ ಪ್ರಸ್ತಾಪವನ್ನು ತಿರಸ್ಕರಿಸಿರುವ ಪ್ರತಿಭಟನಾ ನಿರತ ರೈತ ಸಂಘಟನೆಗಳು, ಕಾಯ್ದೆಗಳನ್ನು ಸಂಪೂರ್ಣವಾಗಿ ವಾಪಸ್ ಪಡೆಯಬೇಕೆಂಬ ತಮ್ಮ ಪಟ್ಟಿನಿಂದ ಹಿಂದೆ ಸರಿಯುವುದಿಲ್ಲ ಎಂದು ಹೇಳಿವೆ.

ಸಂಯುಕ್ತ ಕಿಸಾನ್ ಮೋರ್ಚಾದ ಸಂಪೂರ್ಣ ಸಾಮಾನ್ಯ ಸಭೆಯಲ್ಲಿ ಸರ್ಕಾರ ನಿನ್ನೆ ಮುಂದಿಟ್ಟ ಪ್ರಸ್ತಾಪದ ಕುರಿತು ಚರ್ಚಿಸಲಾಯಿತು. ಸರ್ಕಾರದ ಪ್ರಸ್ತಾಪವನ್ನು ತಿರಸ್ಕರಿಸಲಾಗಿದೆ. ಕೇಂದ್ರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ಸಂಪೂರ್ಣವಾಗಿ ವಾಪಸ್ ಪಡೆಯಬೇಕು ಹಾಗೂ ಕನಿಷ್ಠ ಬೆಂಬಲ ಬೆಲೆಗಾಗಿ ಶಾಸನವನ್ನು ಜಾರಿಗೆ ತರಬೇಕು ಎಂದು ಪ್ರತಿಭಟನಾ ನಿರತ ರೈತರ ಒಕ್ಕೂಟಗಳ ಸಂಘಟನೆಯಾದ ಸಂಯುಕ್ತ ಕಿಸಾನ್ ಮೋರ್ಚಾದ ಹೇಳಿಕೆಯಲ್ಲಿ ತಿಳಿಸಲಾಗಿದೆ.

**ಕಾಯ್ದೆ ಸಂಪೂರ್ಣ ವಾಪಸ್ ಪಡೆಯುವ ಪಟ್ಟು**

ಹತ್ತನೇ ಸುತ್ತಿನ ಮಾತುಕತೆ ನಡೆಸುವಾಗ ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳನ್ನು 1.5 ವರ್ಷಗಳವರೆಗೆ ತಡೆಯಲು ಹಾಗೂ ರೈತ ಸಮುದಾಯದ ಹಿತಕ್ಕಾಗಿ ಜಂಟಿ ಸಮಿತಿಯನ್ನು ರಚಿಸಲು ಪ್ರಸ್ತಾಪಿಸಿತ್ತು.

ಗುರುವಾರ ರೈತರು ಆಂತರಿಕ ಸಭೆ ನಡೆಸಿದ ನಂತರ ಸರ್ಕಾರ ಹಾಗೂ ರೈತ ಸಂಘಟನೆಗಳ ನಡುವೆ ಮತ್ತೊಂದು ಸುತ್ತಿನ ಮಾತುಕತೆ ನಡೆಸಲು ನಿರ್ಧರಿಸಲಾಗಿತ್ತು.

ನಾಲ್ಕು ಗಂಟೆಗಳ ಕಾಲ ರೈತ ಸಂಘಟನೆಗಳು ನಡೆಸಿದ ಆಂತರಿಕ ಸಭೆಯಲ್ಲಿ, (2ನೇ ಪುಟಕ್ಕೆ)

## ಅಧಿಕಾರಿಗಳ ಗ್ರಾಮ ಕಾರ್ಯ ಕಡ್ಡಾಯ : ಸಚಿವ

ಬೆಂಗಳೂರು, ಜ. 21 - ಜಿಲ್ಲಾಧಿಕಾರಿಯಿಂದ ಹಿಡಿದು, ಇಲಾಖೆಯ ಕೆಳಹಂತದ ಅಧಿಕಾರಿಗಳು ಹಳ್ಳಿಗಳಲ್ಲಿ ಹೋಗಿ ಕೆಲಸ ಮಾಡುವುದನ್ನು ಕಡ್ಡಾಯಗೊಳಿಸಿ ಸರ್ಕಾರ ಆದೇಶ ಮಾಡಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಂದಾಯ ಸಚಿವ ಆರ್. ಅಶೋಕ್, ಪ್ರತಿ ತಿಂಗಳು ಮೂರನೇ ಶನಿವಾರ ಜಿಲ್ಲಾಧಿಕಾರಿ, ತಹಶೀಲ್ದಾರ್ ಹಾಗು ಇತರೆ ಅಧಿಕಾರಿಗಳು ಯಾವುದಾದರೂ ಪಂಚಾಯಿತಿಗೆ ತೆರಳಿ, ಜನರ ದೂರು ದುಮ್ಮಾನಗಳನ್ನು ಆಲಿಸಿ, ಸ್ಥಳದಲ್ಲಿಯೇ ಪರಿಹರಿಸಬೇಕು ಎಂದಿದ್ದಾರೆ. (3ನೇ ಪುಟಕ್ಕೆ)

## 50 ಸಾವಿರದ ಗಡಿ ದಾಟಿದ ಷೇರು ಸೂಚ್ಯಂಕ

ಮುಂಬೈ, ಜ. 21 – ಮುಂಬೈ ಷೇರು ಸೂಚ್ಯಂಕ (ಬಿ.ಎಸ್.ಇ.) ಗುರುವಾರದಂದು ಮೊದಲ ಬಾರಿಗೆ 50 ಸಾವಿರದ ಗಡಿ ದಾಟಿದೆ. ಆರ್ಥಿಕತೆಯ ಆಶಾವಾದ ಹೆಚ್ಚಾಗಿರುವುದು ಹಾಗೂ ಜಾಗತಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಷೇರು ಪೇಟೆ ಚೇತರಿಕೆ ಕಂಡಿದೆ. ಆದರೆ, ಕೊನೆಯ ಹಂತದಲ್ಲಿ ಲಾಭಕ್ಕಾಗಿ ಷೇರುಗಳನ್ನು ಮಾರಿದ್ದರಿಂದ ಸೂಚ್ಯಂಕ ಕುಸಿತ ಕಂಡಿದೆ.

ಬ್ಯಾಂಕಿಂಗ್, ಹಣಕಾಸು ಹಾಗೂ ಮಾಹಿತಿ ತಂತ್ರಜ್ಞಾನದ ಷೇರುಗಳು ಮಾರಾಟ (3ನೇ ಪುಟಕ್ಕೆ)

## ತೆಲಂಗಾಣದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ

ಹೈದರಾಬಾದ್, ಜ. 21 – ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10ರ ಮೀಸಲಾತಿ ಕಲ್ಪಿಸಲು ಕೇಂದ್ರ ಸರ್ಕಾರ ಆದೇಶ ಹೊರಡಿಸಿದ ಎರಡು ವರ್ಷಗಳ ನಂತರ ತೆಲಂಗಾಣ ಸರ್ಕಾರ ಸಹ ಮೀಸಲಾತಿ ಜಾರಿಗೆ ತರಲು ನಿರ್ಧರಿಸಿದೆ.

ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ಮುಂದಿನ ಎರಡು ಮೂರು ದಿನಗಳಲ್ಲಿ ಉನ್ನತ ಮಟ್ಟದ ಸಭೆ ನಡೆಸಿ, ಮೀಸಲಾತಿ ಕುರಿತು ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಅಧಿಕೃತ (4ನೇ ಪುಟಕ್ಕೆ)

## ರೇಷ್ಮೆ ಮಾರುಕಟ್ಟೆಯಲ್ಲಿ ಇ-ಟೆಂಡರ್ ವಿಸ್ತರಣೆ

ಬೆಂಗಳೂರು, ಜ. 21 - ರೇಷ್ಮೆ ಮಾರುಕಟ್ಟೆಯಲ್ಲಿ ಹರಾಜು ಮತ್ತು ಮಾರಾಟ ವ್ಯವಸ್ಥೆಯಲ್ಲಿ ಇ-ಹಣ ಪಾವತಿ ತಂದು ಪಾರದರ್ಶಕ ವಹಿವಾಟು ನಡೆಸುವ ಯೋಜನೆಯ ಅನ್ವಯ ಇ - ಟೆಂಡರ್ ಪದ್ಧತಿ ಜಾರಿಗೆ ತರಲಾಗಿದೆ. ಇದರಿಂದಾಗಿ ಹಲವು ದಶಕಗಳಿಂದ ಸಂಕಷ್ಟ ಅನುಭವಿಸುತ್ತಿದ್ದ ರೈತರು ಈಗ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ನಗದು ವ್ಯವಹಾರ ಇದ್ದ ಕಾರಣ ರೈತರಿಗೆ ಸಾಕಷ್ಟು ಸಮಸ್ಯೆ ಆಗುತ್ತಿತ್ತು. ಅದೆಷ್ಟೋ ರೈತರು (2ನೇ ಪುಟಕ್ಕೆ)

## ಎರಡನೇ ಹಂತದಲ್ಲಿ 50 ವರ್ಷ ದಾಟಿದ ಜನಪ್ರತಿನಿಧಿಗಳಿಗೆ ಲಸಿಕೆ

ನವದೆಹಲಿ ಜ. 21 – ಎರಡನೇ ಹಂತದಲ್ಲಿ 50 ವರ್ಷಕ್ಕೂ ಹೆಚ್ಚಿನ ವಯಸ್ಸಿನ ಜನಪ್ರತಿನಿಧಿಗಳಿಗೆ ಕೊರೊನಾ ಲಸಿಕೆ ನೀಡಲು ನಿರ್ಧರಿಸಲಾಗಿದೆ. ಪ್ರಸಕ್ತ ಮೂರು ಕೋಟಿ ಆರೋಗ್ಯ ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲಾಗುತ್ತಿದೆ.

ಎರಡನೇ ಹಂತದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಅವರ ಸಂಪುಟದ ಬಹುತೇಕ ಸಚಿವರು ಹಾಗೂ ಉನ್ನತ ರಾಜಕಾರಣಿಗಳು, ಸಂಸದರು ಹಾಗೂ ಶಾಸಕರು ಲಸಿಕೆ ಪಡೆಯಲು ಸಾಧ್ಯವಾಗಲಿದೆ.

ಆದರೆ, ಉನ್ನತ ಹಂತದ ರಾಜಕಾರಣಿಗಳಿಗೆ ಲಸಿಕೆ ನೀಡಲು ಯಾವುದೇ ಕಾಲಮಿತಿ ಇಲ್ಲ ಎಂದು ಕೇಂದ್ರ ಸರ್ಕಾರದ ಮೂಲಗಳು ಸ್ಪಷ್ಟಪಡಿಸಿವೆ. ರಾಷ್ಟ್ರವ್ಯಾಪಿ ಲಸಿಕೆ



ಅಭಿಯಾನ ಆರಂಭಿಸುವುದಕ್ಕೆ ಮುಂಚೆ ಮುಖ್ಯಮಂತ್ರಿಗಳ ಜೊತೆ ಸಂವಾದ ನಡೆಸಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಆರೋಗ್ಯ ಕಾರ್ಯಕರ್ತರು ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ಈಗ ಲಸಿಕೆ ನೀಡಲಾಗುತ್ತಿದೆ. ರಾಜಕಾರಣಿಗಳು ಸರದಿ ಮೀರಿ ಲಸಿಕೆ ಪಡೆಯಬಾರದು ಎಂದು ಹೇಳಿದ್ದರು. ಮೊದಲ ಸುತ್ತಿನ ನಂತರ 50 ವರ್ಷಕ್ಕೂ ಹೆಚ್ಚಿನವರು (2ನೇ ಪುಟಕ್ಕೆ)

## ಹೆಣ್ಣು ಮಕ್ಕಳಿಗೂ ಅನುಕಂಪದ ನೌಕರಿ

ಬೆಂಗಳೂರು, ಜ. 21 - ಅನುಕಂಪದ ಆಧಾರದ ನೇಮಕದಲ್ಲಿ ಹೆಣ್ಣು ಮಕ್ಕಳಿಗೂ ನೌಕರಿ ನೀಡುವ ಸಂಬಂಧ ನಿಯಮಗಳಿಗೆ ತಿದ್ದುಪಡಿ ತರಲು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಅನುಕಂಪದ ಆಧಾರದ ನೇಮಕದಲ್ಲಿ ಹೆಣ್ಣು ಮಕ್ಕಳಿಗೆ ನೌಕರಿ ನೀಡಬಹುದು. ಮದುವೆಯಾದ ಹೆಣ್ಣು ಮಕ್ಕಳನ್ನೂ ಪರಿಗಣಿಸಬಹುದು. ಹಾಗೆಯೇ ಕುಟುಂಬದ ಸದಸ್ಯರಿಗೂ ನೀಡಬಹುದು ಎಂದು ಸಂಪುಟ ಸಭೆ ಬಳಿಕ ಗೃಹ, ಕಾನೂನು ಮತ್ತು ಸಂಸದೀಯ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಇದೇ ವೇಳೆ, ದಾವಣಗೆರೆ ಜಿಲ್ಲೆ ಹೊನ್ನಾಳಿ ವಿಧಾನಸಭಾ ಕ್ಷೇತ್ರದ 19 ಕೆರೆಗಳಿಗೆ ತುಂಗಭದ್ರಾದಿಂದ ನೀರು ತುಂಬಿಸುವ ಬೆನಕೇನಹಳ್ಳಿ ಏತ ನೀರಾವರಿ ಯೋಜನೆಗಾಗಿ ವಿಸ್ತೃತ ಯೋಜನಾ ವರದಿ ರೂಪಿಸಲು ಅನುಮೋದನೆ ನೀಡಲಾಗಿದೆ. ಈ ಯೋಜನೆ 48 ಕೋಟಿ ರೂ.ಗಳದ್ದಾಗಿದೆ.

**ಹೊನ್ನಾಳಿಯ 19 ಕೆರೆಗಳಿಗೆ ನೀರು ತುಂಬಿಸಲು 48 ಕೋಟಿ ರೂ.**

ಕೈಮಗ್ಗ ಅಭಿವೃದ್ಧಿ ನಿಗಮದ ದುಡಿಮೆ ಬಂಡವಾಳದ 24 ಕೋಟಿ ಸಾಲದ ಬ್ಯಾಂಕ್ ಖಾತರಿ 1 ವರ್ಷ ವಿಸ್ತರಣೆಯ ಪ್ರಸ್ತಾವನೆಗೂ ಸಂಪುಟದಲ್ಲಿ ಒಪ್ಪಿಗೆ ನೀಡಲಾಗಿದೆ.

ಆರ್‌ಡಿಪಿಆರ್‌ನಡಿ ಸ್ವಚ್ಛ ಭಾರತ್ ಮಿಷನ್-2ಕ್ಕೆ ಅನುಮೋದನೆ ನೀಡಲಾಗಿದ್ದು, ಇದರಡಿ ಮುಂದಿನ 5 ವರ್ಷದಲ್ಲಿ 5.5 ಲಕ್ಷ ಗೃಹ ಶೌಚಾಲಯ ನಿರ್ಮಾಣ ಮಾಡಲಾಗುವುದು.

ಗೃಹ ಮಂಡಳಿಯು ಸ್ಥಳೀಯ ಪ್ರಾಧಿಕಾರದ ಅನುಮೋದನೆಯಿಲ್ಲದೆ ನಿರ್ಮಿಸಿದ 65 ವಸತಿ ಬಡಾವಣೆಗಳಿಗೆ ಘಟನೋತ್ತರ ಅನುಮೋದನೆ. ಈ ಪೈಕಿ 59 ಬಡಾವಣೆ ಕಾಮಗಾರಿ ಪೂರ್ಣವಾಗಿದೆ. 6 ಬಡಾವಣೆ ಕಾಮಗಾರಿ ಪ್ರಗತಿಯಲ್ಲಿದೆ. ಈ ಎಲ್ಲ ಬಡಾವಣೆಗಳನ್ನೂ ಸಕ್ರಮಗೊಳಿಸಲಾಗುವುದು. 2000ನೇ ಇಸವಿಯಿಂದಲೂ ಈ ಪ್ರಕರಣಗಳು ಬಾಕಿಯಿದ್ದವು.

62,580 ಅಂಗನವಾಡಿ ಸಹಾಯಕಿಯರು ಹಾಗೂ 65,911 ಅಂಗನವಾಡಿ ಕಾರ್ಯಕರ್ತೆಯರಿಗೆ ಸಮವಸ್ತ್ರ ನೀಡಲು ಕೈಮಗ್ಗ ನಿಗಮದಿಂದ ಸೀರೆ ಖರೀದಿಸಲು ಸಮ್ಮತಿಸಲಾಗಿದೆ. ಒಂದು ಸೀರೆಗೆ 400 ರೂ.ಗಳಂತೆ ಪಾವತಿ ಮಾಡಲಾಗುವುದು. ಪ್ರತಿಯೊಬ್ಬರೂ ಎರಡು ಸೀರೆ ಪಡೆಯಲಿದ್ದಾರೆ. ಒಟ್ಟು ವೆಚ್ಚ10.27 ಕೋಟಿ ರೂ. ಆಗಲಿದೆ. ಪೋಷಣ್ ಅಭಿಯಾನದಡಿ ಅಂಗನವಾಡಿ ಸಹಾಯಕಿಯರಿಗೆ ಹೆಚ್ಚುವರಿ ಒಂದು ಜೊತೆ ಸಮವಸ್ತ್ರ ನೀಡಲೂ ಸಮ್ಮತಿಸಲಾಗಿದೆ ಎಂದು ಸಚಿವ ಬೊಮ್ಮಾಯಿ ಹೇಳಿದ್ದಾರೆ.

## ಜಲ ಜೀವನ್ ಮಿಷನ್ ಗ್ರಾಮೀಣರಿಗೆ ಹೊರೆ

### ತಾಲ್ಲೂಕು ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಯೋಜನೆಗೆ ಸದಸ್ಯರ ವಿರೋಧ

ದಾವಣಗೆರೆ, ಜ.21- ಜಲ ಜೀವನ್ ಮಿಷನ್ ಯೋಜನೆಯಾದ ಮನೆ ಮನೆಗೆ ಗಂಗೆ ಮುಖೇನ ನೀರಿಗಾಗಿ ಗ್ರಾಮೀಣ ಪ್ರದೇಶದ ಜನರಿಂದ ಹಣ ವಸೂಲಿ ಮಾಡಿ ಆರ್ಥಿಕ ಹೊರೆಯಾಗುವುದೆಂದು ವಿರೋಧ. ಆರ್‌ಟಿಇ ಮೂಲಕ ಆಯ್ಕೆಯಾದ ಮಕ್ಕಳಿಗೆ ಶಿಕ್ಷಣ ನೀಡದೇ ಕೆಲ ಖಾಸಗಿ ಶಾಲೆಗಳು ಶುಲ್ಕ ವಸೂಲಿಗಿಳಿದಿರುವುದಾಗಿ ಅಸಮಾಧಾನ. ತಾಲ್ಲೂಕಿನ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಮೂಲಭೂತ ಸೌಕರ್ಯದ ಕೊರತೆ ಮತ್ತು ಸರ್ವರ್ ಸಮಸ್ಯೆಗೆ ಆಕ್ಷೇಪ.

ಇಂದು ತಾಲ್ಲೂಕು ಪಂಚಾಯಿತಿಯಲ್ಲಿ ಅಧ್ಯಕ್ಷೆ ಮಮತಾ ಮಲ್ಲೇಶಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಸದಸ್ಯರುಗಳ ಅಸಮಾಧಾನ.

**ಮನೆ ಮನೆ ಗಂಗೆ ಗ್ರಾಮೀಣರಿಗೆ ಹೊರೆ:** ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಹತ್ವದ ಯೋಜನೆಯಾದ ಜಲ ಜೀವನ್ ಮೀಷನ್ ಮನೆ ಮನೆಗೆ ಗಂಗೆ ಉತ್ತಮ ಯೋಜನೆ ಆಗಿದ್ದರೂ, ಗ್ರಾಮೀಣ ಪ್ರದೇಶದ ಜನರಿಗೆ ಆರ್ಥಿಕ ಹೊರೆಯಾಗಲಿದೆಯಲ್ಲದೇ, ಮುಂದಿನ ದಿನಗಳಲ್ಲಿ ನೀರಿಗಾಗಿಯೇ ಹೆಚ್ಚು ಹಣ ವ್ಯಯಿಸಬೇಕಾಗಲಿದೆ ಎಂಬ ಆತಂಕದೊಂದಿಗೆ ಯೋಜನೆಯನ್ನು ಬಗ್ಗೆ ಪಂಚಾಯತ್ ಸದಸ್ಯರುಗಳು ವಿರೋಧಿಸಿದರು.

ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಅಧಿಕಾರಿ ಯೋಜನೆಯ ಬಗ್ಗೆ ಮಾಹಿತಿ ನೀಡುತ್ತಾ, ಪ್ರತಿ ವ್ಯಕ್ತಿಗೆ ನಿತ್ಯ 55 ಲೀಟರ್ ನೀರು ಬಳಸುವಂತೆ ಪ್ರತಿ ಮನೆಗೆ ಪ್ರತ್ಯೇಕವಾಗಿ ನಳ, ಮೀಟರ್ ಅಳವಡಿಸಲಾಗುವುದು. ನೀರು ಬಳಸಿದ್ದಕ್ಕೆ ಶುಲ್ಕ ನಿಗದಿ ಮಾಡಲಾಗುವುದು. ಪ್ರಾಯೋಗಿಕವಾಗಿ ತಾಲ್ಲೂಕಿನ ಆಲೂರು ಗ್ರಾಮದಲ್ಲಿ ಯೋಜನೆ ಶುರು ಮಾಡಿದ್ದು, ಯಶಸ್ಸು ಕಂಡಿದೆ. ಆದ್ದರಿಂದ ತಾಲ್ಲೂಕಿನ ಪ್ರತಿ ಗ್ರಾಮಗಳಲ್ಲೂ ಹಂತ ಹಂತವಾಗಿ ಜಾರಿ ಮಾಡಲಾಗುವುದೆಂದರು.



**ಆರ್‌ಟಿಇ ಮಕ್ಕಳಿಂದ ಶುಲ್ಕ ವಸೂಲಿ: ಸದಸ್ಯೆಯೋರ್ವರ ಅಸಮಾಧಾನ**

**ಸಬ್ ರಿಜಿಸ್ಟರ್ ಕಚೇರಿಯಲ್ಲಿನ ಮೂಲ ಸೌಕರ್ಯ ಕೊರತೆ: ಆಕ್ಷೇಪ**

ಇದಕ್ಕೆ ಆಕ್ಷೇಪಿಸಿದ ಶಿರಮಗೊಂಡನಹಳ್ಳಿ ಕ್ಷೇತ್ರದ ಸದಸ್ಯ ಮಂಜಪ್ಪ ಮತ್ತು ಚಿಕ್ಕತೊಗಲೇರಿ ಸದಸ್ಯ ಅಶೋಕ್, ಈ ಯೋಜನೆ ಗ್ರಾಮೀಣ ಪ್ರದೇಶದ ಜನರು, ರೈತರಿಗೆ ಅಸಮರ್ಪಕವಾಗಿದ್ದು, ನೀರು ಕೊಳ್ಳಲು ದುಡಿದ ಹಣವನ್ನು ವ್ಯಯಿಸುವುದರಿಂದ ದುಬಾರಿಯಾಗಲಿದೆ. ಜಾನುವಾರುಗಳಿಗೆ ನಿತ್ಯ ನೂರಾರು ಲೀಟರ್ ನೀರಿನ ಅವಶ್ಯಕತೆ ಇದ್ದು, ಈ ಯೋಜನೆಯಿಂದ ಅದು ಸಾಧ್ಯವಾಗುವುದಿಲ್ಲ. ಆರಂಭದಲ್ಲಿ 2 ರೂ. ಇದ್ದ ಶುದ್ಧ ಕುಡಿಯುವ ನೀರಿನ ಪ್ರತಿ ಕ್ಯಾನಿಗೆ ಇದೀಗ 5 ರೂ. ನೀಡಬೇಕಾಗಿದೆ. ಮುಂದೆ ಮನೆ ಮನೆ ಗಂಗೆಯೂ ಸಹ ಹೀಗೆ (4ನೇ ಪುಟಕ್ಕೆ)

## ಜಗಳೂರು: ಭದ್ರಾ ಮೇಲ್ದಂಡೆ ಯೋಜನೆಗೆ 2.4 ಟಿಎಂಸಿ ನೀರು

### ಸರ್ಕಾರದಿಂದ ಆದೇಶ: ಶಾಸಕ ಎಸ್.ವಿ. ರಾಮಚಂದ್ರ

ಜಗಳೂರು, ಜ.21- ಬರಪೀಡಿತ ಜಗಳೂರು ಕ್ಷೇತ್ರದ ಕನಸಿನ ಭದ್ರಾ ಮೇಲ್ದಂಡೆ ಯೋಜನೆಗೆ 2.4ಟಿಎಂಸಿ ನೀರು ಹಂಚಿಕೆ ಮಾಡಿ ಸರ್ಕಾರ ಆದೇಶದ ಹೊರಡಿಸಿದೆ ಎಂದು ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದರು.

ಪಟ್ಟಣದ ಗುರುಭವನದಲ್ಲಿ ತಾಲ್ಲೂಕು ನಿವೃತ್ತ ನೌಕರರ ಸಂಘದಿಂದ 75 ವರ್ಷ ಪೂರ್ಣಗೊಂಡ ನಿವೃತ್ತ ನೌಕರರಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭ ಹಾಗೂ ವಾರ್ಷಿಕ ಸಭೆಯಲ್ಲಿ ಅವರು ಮಾತನಾಡಿದರು.

ಜ.20ನೇ ಬುಧವಾರ ಸರ್ಕಾರ ಈ ಬಗ್ಗೆ ಅಧಿಕೃತ ಆದೇಶ ನೀಡಿದೆ. 2.4 ಟಿಎಂಸಿ ನೀರು ಹರಿದು ತಾಲ್ಲೂಕಿನ 11 ಕೆರೆಗಳು ಭರ್ತಿಯಾಗಲಿವೆ. ಶೀಘ್ರ ಟೆಂಡರ್ ಪ್ರಕ್ರಿಯೆ ನಡೆದು, ಕಾಮಗಾರಿ ಶಂಕುಸ್ಥಾಪನೆ ಕಾರ್ಯಕ್ರಮ ನಡೆಸಲಾಗುವುದು ಎಂದು ಹೇಳಿದರು.

ಭದ್ರಾ ಮೇಲ್ದಂಡೆ ಯೋಜನೆ



ರಾಷ್ಟ್ರೀಯ ಯೋಜನೆಯಾಗಿದೆ. ನಿರೀಕ್ಷೆಯಂತೆ ಸಂಗೇನಹಳ್ಳಿ ಕೆರೆ ಮೂಲಕವೇ ತಾಲ್ಲೂಕಿಗೆ ಭದ್ರೆ ಹರಿದುಬರಲಿದೆ ಎಂದು ಶಾಸಕರು ತಿಳಿಸಿದರು.

ಸಮುದಾಯ ಭವನ ನಿರ್ಮಾಣಕ್ಕೆ ವೈಯಕ್ತಿಕ ಧನಸಹಾಯ ನೀಡಲಾಗು ವುದು. ವೃದ್ಧಾಪ್ಯ ಜೀವನದಲ್ಲಿ ನೆಮ್ಮದಿಯ ಬದುಕು ಸಾಗಿಸಬೇಕು. ಸರ್ಕಾರದಿಂದ ದೊರೆಯುವ ಸೌಲಭ್ಯ ಸದ್ಬಳಕೆ ಮಾಡಿಕೊಳ್ಳಿ ಎಂದು ನಿವೃತ್ತ ನೌಕರರಿಗೆ ಕರೆ ನೀಡಿದರು.

ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಶಾಂತಕುಮಾರಿ ಮಾತನಾಡಿ, ನಿವೃತ್ತ ನೌಕರರನ್ನು ಮಕ್ಕಳು ಗೌರವಿಸಬೇಕು ಮತ್ತು ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದರು.

ತಾಲ್ಲೂಕಿನಲ್ಲಿನ ಪದವೀಧರ ನಿರುದ್ಯೋಗಿಗಳಿಗೆ ಅನುಕೂಲವಾಗಲು ಉದ್ಯೋಗ ತರಬೇತಿ ಕೇಂದ್ರ ತೆರೆಯಲು ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದು ಹೇಳಿದರು. (4ನೇ ಪುಟಕ್ಕೆ)

# ವಿದ್ಯಾರ್ಥಿ ವೇತನ, ಉಚಿತ ಬಸ್ ಪಾಸ್‌ಗೆ ಒತ್ತಾಯ

## ಹರಪನಹಳ್ಳಿಯಲ್ಲಿ ಎನ್.ಎಸ್.ಯು.ಐ. ಪ್ರತಿಭಟನೆ



ಹರಪನಹಳ್ಳಿ, ಜ.21 - ವಿದ್ಯಾರ್ಥಿ ವೇತನ, ಉಚಿತ ಬಸ್ ಪಾಸ್‌ನೀಡುವಂತೆ ಒತ್ತಾಯಿಸಿ ಎನ್.ಎಸ್.ಯು.ಐ ವತಿಯಿಂದ ಇಂದಿಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಡಿ. ಜೀಷಾನ್ ಮಾತನಾಡಿ, ಶಾಲಾ-ಕಾಲೇಜು ವಿದ್ಯಾರ್ಥಿಗಳು ಸಂಕಷ್ಟದಲ್ಲಿದ್ದಾರೆ. ಇಲ್ಲಿಯವರೆಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಜಾರಿ ಮಾಡಲಾಗಿದ್ದ ವಿದ್ಯಾರ್ಥಿ ವೇತನ, ಉಚಿತ ಬಸ್ ಪಾಸ್ ಯೋಜನೆಗಳನ್ನು ತಡೆ ಹಿಡಿಯಲಾಗಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಹಾಗೂ ತಾಂತ್ರಿಕ ಕ್ಷಮತೆ ಹೆಚ್ಚಿಸಲು ರೂಪಿಸಲಾಗಿದ್ದ ಲ್ಯಾಪ್ ಟಾಪ್ ಯೋಜನೆಯನ್ನೂ ಕೂಡ ಮೊಟಕುಗೊಳಿಸಲಾಗಿರು ತ್ತದೆ. ಇವುಗಳಿಗೆಲ್ಲ ಸರ್ಕಾರ ಆರ್ಥಿಕ ಸಂಕಷ್ಟದ ನೆಪ ಹೇಳುತ್ತಿದೆ. ಆದರೆ ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಹಾಗೂ ವಿಧಾನ ಪರಿಷತ್ ಸದಸ್ಯರುಗಳ ಸಂಬಳ ಮತ್ತು ಖರ್ಚುಗಳು ಯಾವುದೇ ಸಂಕಷ್ಟಗಳಿಲ್ಲದೇ ಭರಿಸಲಾಗುತ್ತಿದೆ. ಆದರೆ ನಾಡಿನ ಉಜ್ವಲ ಭವಿಷ್ಯದ ಜವಾಬ್ದಾರಿ ಹೊತ್ತ ವಿದ್ಯಾರ್ಥಿಗಳ ಶೈಕ್ಷಣಿಕ ಸಹಕಾರಗಳ ಬಗ್ಗೆ ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಎನ್.ಎಸ್.ಯು.ಐ ತಾಲ್ಲೂಕು ಅಧ್ಯಕ್ಷ ಶ್ರೀಕಾಂತ್ ಯಾದವ್ ಮಾತನಾಡಿ, ಉಚಿತ ಬಸ್‌ಪಾಸ್ ಯೋಜನೆ ಹಾಗೂ ಲ್ಯಾಪ್ ಟಾಪ್ ಯೋಜನೆಯನ್ನು ಹಿಂಪಡೆದಿರುವ ಕಾರಣಕ್ಕೆ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ಕುಂದಿಸಿರುತ್ತದೆ ಎಂದು ಹೇಳಿದರು.

ಕೋವಿಡ್ ಮಹಾಮಾರಿ ಸೃಷ್ಟಿಸಿರುವ ಆರ್ಥಿಕ ಸಂಕಷ್ಟಗಳ ಸಂದರ್ಭದಲ್ಲಿಯೇ ಕೇರಳ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯ ಸರ್ಕಾರಗಳು ಸಮಾಜದ ಎಲ್ಲ ವರ್ಗಗಳಲ್ಲಿನ ಆರ್ಥಿಕವಾಗಿ ಹಿಂದುಳಿದಿರುವ ಬಡ ಕುಟುಂಬಗಳನ್ನು ಪ್ರತಿನಿಧಿಸುವ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಯೋಜನೆಯನ್ನು ಜಾರಿ ಮಾಡಿವೆ. ಲ್ಯಾಪ್ ಟಾಪ್ ಯೋಜನೆಯನ್ನು ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ವಿಸ್ತರಿಸಿವೆ. ಜೊತೆಗೆ ವಿದ್ಯಾರ್ಥಿ-ವಿದ್ಯಾರ್ಥಿನಿಯರ ವಸತಿ ನಿಲಯಗಳನ್ನು ಮೇಲ್ದರ್ಜೆಗೇರಿಸಿ ಆಧುನಿಕರಣಗೊಳಿಸಿವೆ. ರಾಜ್ಯದ ಆದಾಯದ ಶೇ. 30 ರಷ್ಟನ್ನು ಶಿಕ್ಷಣಕ್ಕಾಗಿಯೇ ಮೀಸಲಿಡುವ ಚಿಂತನೆಯನ್ನೂ ಕೂಡ ವಿಧಾನಸಭೆಗಳಲ್ಲಿ ಚರ್ಚೆಗೆ ಇಡಲಾಗಿದೆ. ಕರ್ನಾಟಕ ಸರ್ಕಾರವೂ ಕೂಡ ಈ ನಿಟ್ಟಿನಲ್ಲಿ ಆಲೋಚಿಸುವಂತಾಗಲಿ ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎನ್.ಎಸ್.ಯು.ಐ ಪದಾಧಿಕಾರಿಗಳಾದ ಲಾಟಿ ಅಮೀರ್ ಸೊಹೈಲ್, ಟಿ.ಕುಶಾಲ್, ಸಾಲಮೂರಹಳ್ಳಿ ಸಾಧಿಕ್, ಬಿ.ಮೋಹನ್ ನಾಯ್ಕ, ಮಹಮ್ಮದ್ ರಿಹಾನ್, ಎಲ್.ಗಣೇಶ್, ಡಂಕಿ ವಾಸೀಂ, ದೊರೆ ಬಂಜಾರ, ಶಂಶು ಕೋಲಕಾರ, ಹೆಚ್. ಮುಖೀದ್, ಉಳ್ಳಂಗಿ ಗಾಂಧಿ, ಎಸ್.ಎಂ.ಡಿ ವಾಸೀಂ, ಮಂಜುನಾಥ, ಎಂ.ಎಸ್.ನಫಾಸ್, ಆರ್.ನವೀನ್, ಗೌಸ್ ಎಂ, ಎಂ.ನಾಗರಾಜ, ಅಬು ಸಾಲೇಹ, ರಶೀದ್, ಸಮೀರ್.ಪಿ, ಹಡಗಲಿ ಅಬುಸಾಲೇಹ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಜಾಗೃತಿಯಿಂದ ಕಾರ್ಯ ನಿರ್ವಹಿಸುವ ಪೊಲೀಸ್ ವೃತ್ತಿ



ಗ್ಯಾಲಾಕ್ಸಿ ಯುವಕ ಸಂಘದ ವತಿಯಿಂದ ರಾಷ್ಟ್ರಪತಿ ಪದಕ ಪುರಸ್ಕೃತ ಎಸಿಪಿ ರುದ್ರಪ್ಪ ಅವರಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಪ್ರಶಾಂತ್ ಮುನೋಳಿ

ಸಂತೇಬೆನ್ನೂರು, ಜ. 21- ಪೊಲೀಸ್ ವೃತ್ತಿ ಎಂಬುದು ಜಾಗೃತಿಯಿಂದ ಕಾರ್ಯ ನಿರ್ವಹಿಸುವ ವೃತ್ತಿಯಾಗಿದ್ದು, ಅತಿಯಾದ ಮುಂಜಾಗ್ರತಾ ಕ್ರಮದೊಂದಿಗೆ ಕಾರ್ಯ ನಿರ್ವಹಿಸಬೇಕಾಗುತ್ತದೆ. ಅದಕ್ಕೆ ಪೂರಕವಾದ ತಾಳ್ಮೆ, ಸಂಯಮ, ಸಮಯ, ಸಂದರ್ಭಗಳಲ್ಲಿನ ನಿರ್ಧಾರಗಳ ಅವಶ್ಯಕತೆ ವೃತ್ತಿಯಲ್ಲಿ ಮೇಳೈಸಿಕೊಂಡು ಕಾರ್ಯ ನಿರ್ವಹಿಸುವುದು ಕಷ್ಟದ ಕೆಲಸ ಎಂದು ಚನ್ನಗಿರಿ ಡಿವೈಎಸ್ಪಿ ಪ್ರಶಾಂತ್ ಮುನೋಳಿ ತಿಳಿಸಿದರು.

ನಗರದ ಗ್ಯಾಲಾಕ್ಸಿ ಯುವಕ ಸಂಘದ ವತಿಯಿಂದ ರಾಷ್ಟ್ರಪತಿ ಪದಕ ಪಡೆದ ನಿವೃತ್ತ ಎಸಿಪಿ ಎಂ.ಎನ್.ರುದ್ರಪ್ಪ ಅವರಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಅವರು ಮಾತನಾಡಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಎಂ.ಎನ್. ರುದ್ರಪ್ಪ, ವೃತ್ತಿ ಜೀವನವನ್ನು ಹೆಚ್ಚಾಗಿ ಪ್ರೀತಿಸುವ ನನಗೆ, ನಿವೃತ್ತಿಯ ನಂತರ ನಾಲ್ಕು ದಿನ ಪುನಃ ಯೂನಿಫಾರಂ ಹಾಕುವ ಅವಕಾಶ ಸಿಕ್ಕಿದ್ದು ರಾಷ್ಟ್ರ ಪತಿ ಪದಕ ಪಡೆದ ನಿಮಿತ್ತವಾಗಿ ಎಂದರು.

ಹಾವೇರಿ ಲೋಕಾಯುಕ್ತ ಎಸಿಪಿ ಚಂದ್ರಶೇಖರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಚನ್ನಗಿರಿ ತಾಲ್ಲೂಕು ವೃತ್ತ ನಿರೀಕ್ಷಕ ಆರ್.ಆರ್. ಪಾಟೀಲ್, ಪಿಎಸ್‌ಐ ಶಿವರುದ್ರಪ್ಪ ಮೇಟಿ, ನಿವೃತ್ತ ಡಿವೈಎಸ್ಪಿ ಅಬ್ದುಲ್ ರೆಹಮಾನ್, ಮಾಯಕೊಂಡ ಎಸ್.ಐ. ಮೋಹನ್ ಕುಮಾರ್, ಗ್ರಾಮದ ಹಿರಿಯರಾದ ಎಂ.ಸಿದ್ದಪ್ಪ, ಎಜಾಜ್ ಅಹ್ಮದ್, ಜಿ. ರಂಗಸ್ವಾಮಿ, ಸದಾಶಿವ ಆರಾಧ್ಯ, ಎಂ.ಜೆ. ಸಾಧಿಕ್, ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು. ಕೆ. ವೀರೇಶ್ ಅಧ್ಯಕ್ಷತೆ ವಹಿಸಿದ್ದರು. ಕೆ.ಸಿ. ನಾಗರಾಜ್ ಸ್ವಾಗತಿಸಿದರು. ಮಾರುತಿ ನಿರೂಪಿಸಿದರು.

# ಅಂಬಿಗರ ಚೌಡಯ್ಯನವರ ವಚನಗಳಲ್ಲಿ ವೈಚಾರಿಕತೆ ಇದೆ



ಕೂಡ್ಲಿಗಿ ತಾಲ್ಲೂಕು ಕಚೇರಿಯಲ್ಲಿ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಮಹಾಬಲೇಶ್ವರ

ಕೂಡ್ಲಿಗಿ, ಜ. 21- ಅಂಬಿಗರ ಚೌಡಯ್ಯ 12ನೇ ಶತಮಾನದಲ್ಲಿ ಬಸವಾದಿ ಶರಣರಲ್ಲಿ ಪ್ರಮುಖರಾಗಿದ್ದು, ಇವರು ತಮ್ಮ ಕಠೋರ ವಚನಗಳ ಮೂಲಕ ಸಮಾಜದಲ್ಲಿದ್ದ ಮೂಢನಂಬಿಕೆ, ಮೋಸ, ವಂಚನೆಗಳನ್ನು ಬಯಲಿಗೆಳೆದವರಾಗಿದ್ದು, ಇವರ ವಚನಗಳಲ್ಲಿ ವೈಚಾರಿಕತೆ ಇದೆ ಎಂದು ಕೂಡ್ಲಿಗಿ ತಹಶೀಲ್ದಾರ್ ಮಹಾಬಲೇಶ್ವರ ಅಭಿಪ್ರಾಯಪಟ್ಟರು.

ಅವರು ಈಚೆಗೆ ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಅವರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಅಂಬಿಗರ ಚೌಡಯ್ಯ ಅವರು ಶೋಷಿತ ಸಮುದಾಯಗಳ ಪ್ರತಿನಿಧಿಯಾಗಿ 12ನೇ ಶತಮಾನದಲ್ಲಿ ತುಳಿತಕ್ಕೊಳಗಾಗಿರುವ ಸಮುದಾಯಗಳ ಜನತೆಯಲ್ಲಿದ್ದ ಮೂಢನಂಬಿಕೆಗಳನ್ನು ತೊರೆಯುವಂತೆ ತಮ್ಮ ವಚನಗಳ ಮೂಲಕ ಜಾಗೃತಿ ಮೂಡಿಸಿದವರು.

ವೃತ್ತಿಯಲ್ಲಿ ದೋಣಿ ನಡೆಸುವ ಅಂಬಿಗನಾಗಿದ್ದರೂ ಚೌಡಯ್ಯ ತಮ್ಮ ವಚನಗಳ ಮೂಲಕ ಭವವೆಂಬ ಸಾಗರವನ್ನು ದಾಟಿಸಿದ ಪರಿ ಮಾತ್ರ ಸೋಜಿಗ ಮೂಡಿಸುತ್ತದೆ ಎಂದರು.

ಕೂಡ್ಲಿಗಿ ತಾಲ್ಲೂಕು ಗಂಗಾಮತಸ್ಥರ ಸಂಘದ ಅಧ್ಯಕ್ಷ ಗುಡೇಕೋಟೆ ಶ್ರೀನಿವಾಸ್ ಮಾತನಾಡಿ, ಅಂಬಿಗರ ಚೌಡಯ್ಯ ತಳಸಮುದಾಯಗಳ ಧ್ವನಿಯಾಗಿ, ಅನುಭವ ಮಂಟಪದಲ್ಲಿ ತಮ್ಮ ವಚನಗಳ ಮೂಲಕ ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡುವಲ್ಲಿ ಶ್ರಮಿಸಿದ್ದರು ಎಂದರು.

ಈ ಸಂದರ್ಭದಲ್ಲಿ ಗಂಗಾಮತ ಸಂಘದ ಮಹಿಳಾ ಮುಖಂಡರಾದ ವಿಜಯಲಕ್ಷ್ಮಿ, ಗಂಗಾಮತ ಸಂಘದ ತಾಲ್ಲೂಕು ಮಾಜಿ ಅಧ್ಯಕ್ಷ ಬೇಕರಿ ಸುರೇಶ್, ಕೂಡ್ಲಿಗಿಯ ಪ್ರಕಾಶ, ಎಂ.ಬಸವರಾಜ, ಗುಡೇಕೋಟೆ ಪವನ್ ಮತ್ತಿತರರು ಹಾಜರಿದ್ದರು.

## 50 ವರ್ಷ ದಾಟಿದ ಜನ ಪ್ರತಿನಿಧಿಗಳಿಗೆ ಲಸಿಕೆ

(1ನೇ ಪುಟದಿಂದ) ಹಾಗೂ ಇತರೆ ರೋಗಗಳಿಂದ ಬಳಲುತ್ತಿರುವವರ ಸರದಿ ಬರಲಿದೆ ಎಂದು ಪ್ರಧಾನಿ ತಿಳಿಸಿದ್ದರು.

ಸರ್ಕಾರ ಲಸಿಕೆಗಾಗಿ ಯಾವುದೇ ಕಾಲಮಿತಿ ನಿಗದಿ ಪಡಿಸಿಲ್ಲ. ಆದರೆ, ಮುಂದಿನ ಕೆಲ ತಿಂಗಳಲ್ಲಿ 50 ವರ್ಷಕ್ಕೂ ಹೆಚ್ಚಿನ 30 ಕೋಟಿ ಜನರಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಜನವರಿ 16ರಿಂದ ದೇಶಾದ್ಯಂತ ಲಸಿಕಾ ಅಭಿಯಾನ ಆರಂಭಿಸಲಾಗಿದೆ.

## ವಲಸಿಗರ ಅಸಮಾಧಾನ

(1ನೇ ಪುಟದಿಂದ) ನಿವಾಸದಲ್ಲಿ ಸಭೆ ಸೇರಿದ ಕೆ. ಗೋಪಾಲಯ್ಯ, ಎಂಟಿಬಿ ನಾಗರಾಜ್ ಹಾಗೂ ಇತರರು ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ.

ಸರ್ಕಾರ ರಚನೆ ಸಂದರ್ಭದಲ್ಲಿ ಯಡಿಯೂರಪ್ಪನವರು ನಮಗೆ ನೀಡಿದ್ದ ಭರವಸೆ ಬೇರೆ, ಈಗ ಅವರು ನಡೆದುಕೊಳ್ಳುತ್ತಿರುವ ರೀತಿಯೇ ಬೇರೆ ಎಂದಿದ್ದಾರೆ.

ಅದರಲ್ಲೂ ಕೆ. ಗೋಪಾಲಯ್ಯ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯಲ್ಲಿ ನಾನು ಉತ್ತಮ ಕೆಲಸ ಮಾಡುತ್ತಿದ್ದೆ. ಇಲಾಖೆಯನ್ನು ಹತೋಟಿಗೂ ತೆಗೆದುಕೊಂಡಿದ್ದೆ. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದ್ದೆ. ಇಲಾಖೆ ಬಗ್ಗೆ ನಾನು ಹೆಚ್ಚು ಮಮತೆ ಹೊಂದಿದ್ದೆ. ಆದರೆ, ಮುಖ್ಯಮಂತ್ರಿಯವರು ನನ್ನ ಇಲಾಖೆ ಕಸಿದುಕೊಂಡಿದ್ದಾರೆ ಎಂದು ಸುಧಾಕರ್ ಮುಂದೆ ಗಳಗಳನೆ ಅತ್ತಿದ್ದಾರೆ.

ಅಲ್ಲಿಯೇ ಇದ್ದ ಎಂಟಿಬಿ ನಾಗರಾಜ, ನನಗೆ ಬೇರೆ ಖಾತೆ ನೀಡುತ್ತೇನೆ ಎಂದು ಇದೀಗ ಅಬಕಾರಿ ಇಲಾಖೆ ನೀಡಿದ್ದಾರೆ. ನಾನು ವಸತಿ ಇಲಾಖೆ ಬಿಟ್ಟು ಬಂದವನು. ಏನು ಈ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇನ್ನೂ ಪ್ರವಾಸದಲ್ಲಿದ್ದ ನಾರಾಯಣಗೌಡ ಕೂಡಾ ಈ ಅತೃಪ್ತರನ್ನು ಸಂಪರ್ಕಿಸಿ, ತಮ್ಮ ಅಸಮಾಧಾನವನ್ನು ಹೊರ ಹಾಕಿದ್ದಾರೆ.

ಆ ನಂತರ ಕೆ. ಗೋಪಾಲಯ್ಯ ಮತ್ತು ಎಂಟಿಬಿ ನಾಗರಾಜ, ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ತಮ್ಮ ಖಾತೆ ಬದಲಾವಣೆಗೆ ಮನವಿ ಮಾಡಿಕೊಂಡಿದ್ದಾರೆ.

## ಖುಷಿಯಾದ ನಿರಾಣಿ

(1ನೇ ಪುಟದಿಂದ) ಇದೆ.ಕೆಲವು ತಿಂಗಳಾದ ಬಳಿಕ ಅವರ ಸಾಮರ್ಥ್ಯ ಗುರುತಿಸಿ ಖಾತೆ ಬದಲಾವಣೆ ಮಾಡಿಕೊಡುವ ಸಾಧ್ಯತೆ ಇದೆ. ಹಾಗಾಗಿ ಅಸಮಾಧಾನ ಕೈ ಬಿಟ್ಟು, ಸಿಎಂ ಜತೆ ಸಹಕರಿಸಿಕೊಂಡು ಹೋಗಬೇಕೆಂದು ಅವರಿಗೂ ಮನವಿ ಮಾಡುತ್ತೇನೆ ಎಂದು ಅವರು ಹೇಳಿದ್ದಾರೆ.

## ದೇವಾಂಗ ವಿದ್ಯಾರ್ಥಿಗಳಿಗೆ ಪುರಸ್ಕಾರ

ದಾವಣಗೆರೆ, ಜ.21- ನಗರದ ದೇವಾಂಗ ಸಂಘದ ವತಿಯಿಂದ ಇದೇ ದಿನಾಂಕ 24 ರ ಭಾನುವಾರ ಬೆಳಿಗ್ಗೆ 11.30 ಕ್ಕೆ ಶ್ರೀ ದೇವಾಂಗ ವಿದ್ಯಾರ್ಥಿ ನಿಲಯದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ.

ಎಸ್ಸೆಸ್ಸೆಲ್ಸಿಯಲ್ಲಿ ಶೇ.90 ಕ್ಕಿಂತ ಹೆಚ್ಚು ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ. 85 ಕ್ಕಿಂತ ಹೆಚ್ಚು ಅಂಕ ಪಡೆದ ಜಿಲ್ಲೆಯ ದೇವಾಂಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸುವುದು. ವಿವರಕ್ಕೆ ಮೊಬೈಲ್ : 9972801195, 9448812703ರಲ್ಲಿ ಸಂಪರ್ಕಿಸಲು ಸಂಘದ ಅಧ್ಯಕ್ಷ ಜಿ.ಹೆಚ್. ರಾಮಚಂದ್ರ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಸಂಧ್ಯಾವಂದನೆ


ಅಖಿಲ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ (ಬೆಂಗಳೂರು) ಮತ್ತು ಅಖಿಲ ಕರ್ನಾಟಕ ಅರ್ಚಕರು ಮತ್ತು ಪುರೋಹಿತರ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ಬಂಧುಗಳಿಗೆ ಸಂಧ್ಯಾವಂದನೆ ಮತ್ತು ನಿತ್ಯ ದೇವತಾರ್ಚನೆ ಶಿಬಿರವನ್ನು ಇಂದಿನಿಂದ ಫೆಬ್ರವರಿ 15 ರವರೆಗೆ ಪ್ರತಿದಿನ ಸಂಜೆ 5.30 ರಿಂದ 6.30 ರವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಕೂಡಲಿ ಶಂಕರ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪುರೋಹಿತರ ಸಂಘದ ಅಧ್ಯಕ್ಷ ಪವನ್ ಕುಮಾರ್ ಭಟ್ (9886212889, 9611165426) ತಿಳಿಸಿದ್ದಾರೆ.


ಏಳನೇ ವರ್ಷದ ಸವಿನೆನಪು




ದಿ|| ಎಂ.ಆರ್. ಮಂಜುನಾಥ ಶೆಟ್ಟಿ
ನೀವು ನಮ್ಮನ್ನಗಲಿ (22-1-2014) ಏಳು ವರ್ಷಗಳು ಕಳೆದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
✦ ಪುತ್ರ : ಎಂ.ಎಂ. ರವಿಚಂದ್ರ ✦ ಸೊಸೆ : ಶ್ರೀಮತಿ ವಿದ್ಯಾಶ್ರೀ ರವಿಚಂದ್ರ
✦ ಶ್ರೀಮತಿ ಛಾಯಾ ರಜತ್ ✦ ಶ್ರೀಮತಿ ರಾಜಲಕ್ಷ್ಮಿ ಪವನ್
✦ ಶ್ರೀಮತಿ ಸರಸ್ವತಿ ರುದ್ರೇಶ್ ✦ ಮೊಮ್ಮಕ್ಕಳಾದ : ಆರ್ವಿ ಎಂ.ಆರ್. ರಿಷನ್‌ವಿಷ್ಣು ಜಿ.ಆರ್. ವಿವಾನ್ ಪಿ.ಎಸ್. ಸಾಯಿಪ್ರಣವ್ ಆರ್.ಬಿ.
ಎಂ.ಆರ್. ಮಂಜುನಾಥ ಶೆಟ್ಟಿ ಅಂಡ್ ಸನ್
DURBY
667/4, ಕೆನರಾ ಬ್ಯಾಂಕ್ ಎದುರು, ಕೆ.ಆರ್. ರಸ್ತೆ, ದಾವಣಗೆರೆ-577 001. ಫೋ. : 08192-276731

36ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಅಂದನೂರು ಕೊಟ್ರಪ್ಪನವರು
ಪತ್ರಕರ್ತರು ಹಾಗು ಪತ್ರಿಕಾ ಪ್ರತಿನಿಧಿಗಳು
15-05-1926 - 22-01-1985
ನಿಮ್ಮ ಅಚಲ ಹಾಗೂ ಸನ್ನಡತೆಯ ಜೀವನ
ನಮ್ಮ ಕನಸುಗಳನ್ನು ನನಸಾಗಿಸುವ ಛಲ
ಮತ್ತು ಧೈರ್ಯವನ್ನು ತುಂಬಿದೆ
ನಿಮ್ಮ ಆದರ್ಶ, ಸದಾ ನಮಗೆ ದಾರಿದೀಪ
ಸದಾ ನಿಮ್ಮ ಸ್ಮರಣೆಯಲ್ಲಿರುವ :-
ಅಂದನೂರು ರಾಜೇಶ್, ಪ್ರೀತಿ ರಾಜೇಶ್
ಅಕ್ಷಿತ್. ಆರ್. ಅಂದನೂರು
ಅಂದನೂರು ಚಿಟ್ಸ್ (ರಿ)
ಚರ್ಚ್ ರಸ್ತೆ, ಪಿ. ಜೆ. ಬಡಾವಣೆ, ದಾವಣಗೆರೆ.
98804 88688, 63622 54695, 99867 52539
ಸುಭದ್ರ ಹೂಡಿಕೆ, ಅನುಕೂಲಕರ ನಿಧಿ

|| ಶ್ರೀ ಕುಂಟೋಜಿ ಬಸವೇಶ್ವರ ಪ್ರಸನ್ನ ||
ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ, ಹೊಂಡದ ರಸ್ತೆ, ಕಳಸಪ್ಪನಗಲ್ಲಿ ವಾಸಿ
ಶ್ರೀಮತಿ ಸುವರ್ಣಮ್ಮ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 14.01.2021 ನೇ ಗುರುವಾರ ಬೆಳಿಗ್ಗೆ 8.30ಕ್ಕೆ ನನ್ನ ಪೂಜ್ಯ ಪತಿಯವರಾದ
ಶ್ರೀ ಮಹೇಶ್ ಧನ್ನೂರು
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಸಮಾರಾಧನೆಯನ್ನು
ದಿನಾಂಕ 22.01.2021ನೇ ಶುಕ್ರವಾರ ಮಧ್ಯಾಹ್ನ 12.00 ಕ್ಕೆ ದಾವಣಗೆರೆ ಸಿಟಿ, ಶಿವಾಜಿನಗರ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಎದುರು ಇರುವ ಶ್ರೀ ನಿಮಿಷಾಂಬ ದೇವಸ್ಥಾನದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಶ್ರೀಮತಿ ಸುವರ್ಣಮ್ಮ ಮತ್ತು ಮಕ್ಕಳು, ಧನ್ನೂರು ವಂಶಸ್ಥರು, ಪಟ್ಟಣಶೆಟ್ಟಿ ವಂಶಸ್ಥರು ಹಾಗೂ ಬಂಧು-ಮಿತ್ರರು. 98802 82567

ಸವಿನೆನಪು



ಟಿ.ಹೆಚ್. ಅಶೋಕ್‌ರಾಜ್
ಮಾಜಿ ನಿರ್ದೇಶಕರು, ಜನತಾ ಬಜಾರ್
ಜನನ : 03.11.1952, ಮರಣ : 22.01.2001
ನೀವು ನಮ್ಮನ್ನಗಲಿ ಇಂದಿಗೆ 21 ವರ್ಷಗಳಾದವು. ತಾವು ಹಾಕಿಕೊಟ್ಟ ಸನ್ಮಾರ್ಗ, ಸನ್ನಡತೆ ಹಾಗೂ ಸದಾ ತಮ್ಮ ನೆನಪಿನಲ್ಲಿರುವ
ಪತ್ನಿ : ಎ. ಚೆನ್ನಮ್ಮ, ಮಗ : ಎ. ಮಾರುತಿ (ಮಾರುತಿ ಸೊಸೈಟಿ)
ಹೆಣ್ಣುಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು.
ಶ್ರೀ ಮಾರುತಿ ಕಂಜ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿ

|| ಶ್ರೀ ಸದಳಗಿ ಶಿವಲಿಂಗೇಶ್ವರ ಪ್ರಸನ್ನ ||
ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿ|| ತಾ||, ದೊಡ್ಡಬೂದಿಹಾಳ್ ಗ್ರಾಮದ ವಾಸಿ ಶ್ರೀಮತಿ ರಾಯಪ್ಪರ ಈರಮ್ಮ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.
ದಿನಾಂಕ :14.01.2021ರ ಗುರುವಾರ ಸಂಜೆ 5.30ಕ್ಕೆ ನನ್ನ ಪೂಜ್ಯ ಪತಿಯವರಾದ
ಶ್ರೀ ರಾಯಪ್ಪರ ಶಿವಪ್ಪನವರು
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಸಮಾರಾಧನೆಯನ್ನು
ದಿನಾಂಕ: 22.01.2021ನೇ ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಗೃಹ, ದೊಡ್ಡ ಬೂದಿಹಾಳ್ ದಾವಣಗೆರೆ|| ತಾ|| ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು
ಶ್ರೀಮತಿ ಈರಮ್ಮ ಮತ್ತು ಮಕ್ಕಳು,ಸಹೋದರರು,ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ರಾಯಪ್ಪರ ವಂಶಸ್ಥರು, ದೊಡ್ಡಬೂದಿಹಾಳ್ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
98444 42212, 73377 77272
ಆಹ್ವಾನ ಪತ್ರಿಕೆ ತಲುಪದವರು ಇದನ್ನೆ ಆಹ್ವಾನವೆಂದು ಭಾವಿಸಿ ಆಗಮಿಸ ಬೇಕಾಗಿ ವಿನಂತಿ.


# ಅಮಾನತ್ತಿಗೆ ಮಣಿಯದ ರೈತ ಸಂಘಟನೆಗಳು

(1ನೇ ಪುಟದಿಂದ) ಕೃಷಿ ಕಾಯ್ದೆಗಳನ್ನು ಸಂಪೂರ್ಣವಾಗಿ ವಾಪಸ್ ಪಡೆಯುವವರೆಗೂ ಮನೆಗಳಿಗೆ ಮರಳದಿರಲು ನಿರ್ಧರಿಸಲಾಗಿದೆ.

ಹೋರಾಟದಲ್ಲಿ ಇದುವರೆಗೂ ಮೃತಪಟ್ಟಿರುವ 143 ರೈತರಿಗೆ ನಮನ ಸಲ್ಲಿಸುತ್ತೇವೆ. ಅವರ ತ್ಯಾಗ ವ್ಯರ್ಥವಾಗುವುದಿಲ್ಲ. ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯದೇ ವಾಪಸ್ ಹೋಗುವುದಿಲ್ಲ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಆದರೆ, ಈ ಬಗ್ಗೆ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. ಹಲವಾರು ರೈತ ಮುಖಂಡರ ಜೊತೆ ಈಗಲೂ ಸಭೆ ನಡೆಯುತ್ತಿದೆ ಎಂದು ಪ್ರತಿಭಟನಾ ನಿರತ 41 ಒಕ್ಕೂಟಗಳಲ್ಲಿ ಒಂದಾದ ಭಾರತೀಯ ಕಿಸಾನ್ ಯೂನಿಯನ್ (ಸಿಂಧುಪುರ) ನ ಜಗಜೀತ್ ಸಿಂಗ್ ದಾಲೆವಲ್ ಹೇಳಿದ್ದಾರೆ. ಆದರೆ, ಚರ್ಚೆಗಳು ಮುಗಿದಿದ್ದು, ಸರ್ಕಾರದ ಪ್ರಸ್ತಾವನೆ ತಿರಸ್ಕರಿಸುವ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಇನ್ನೂ ಕೆಲ ರೈತ ಮುಖಂಡರು ಹೇಳಿದ್ದಾರೆ.

ಈ ನಡುವೆ, ಜನವರಿ 26ರ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಟ್ರ್ಯಾಕ್ಟರ್ ರ್‍ಯಾಲಿ ನಡೆಸುವ ಕುರಿತು ಪ್ರತಿಭಟನಾ ನಿರತ ರೈತ ಒಕ್ಕೂಟಗಳು ಹಾಗೂ ಪೊಲೀಸರ ನಡುವಿನ ಸಭೆ ಅಪೂರ್ಣವಾಗಿದೆ. ದೆಹಲಿಯ ಜನನಿಬಿಡ ಹೊರ ರಿಂಗ್ ರಸ್ತೆಯಲ್ಲೇ ಟ್ರ್ಯಾಕ್ಟರ್ ರ್‍ಯಾಲಿ ನಡೆಸುವುದಾಗಿ ರೈತ ಮುಖಂಡರು ಪಟ್ಟು ಹಿಡಿದಿದ್ದಾರೆ.

ಕುಂಡ್ಲಿ - ಮನೇಸರ್ - ಪಲ್ವಾನಲ್ ಎಕ್ಸ್‌ಪ್ರೆಸ್‌ವೇನಲ್ಲಿ ರೈತರು ಟ್ರ್ಯಾಕ್ಟರ್ ರ್‍ಯಾಲಿ ನಡೆಸುವಂತೆ ರೈತ ಮುಖಂಡರ ಮನವೊಲಿಸಲು ಪೊಲೀಸ್ ಅಧಿಕಾರಿಗಳು ಪ್ರಯತ್ನ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ಸುಪ್ರೀಂ ಕೋರ್ಟ್ ಈಗಾಗಲೇ ಮೂರು ಕೃಷಿ ಕಾಯ್ದೆಗಳ ಜಾರಿಯನ್ನು ತಡೆದಿದೆ. ನ್ಯಾಯಾಲಯ ರಚಿಸಿರುವ ಸಮಿತಿಯು ಎಂಟು ರಾಜ್ಯಗಳ ಹತ್ತು ರೈತ ಒಕ್ಕೂಟಗಳ ಜೊತೆ ಈಗಾಗಲೇ ಚರ್ಚೆ ನಡೆಸಿದೆ.

## ಮಾರುಕಟ್ಟೆಯಲ್ಲಿ ಟೆಂಡರ್ ವಿಸ್ತರಣೆ

(1ನೇ ಪುಟದಿಂದ) ಮಾರುಕಟ್ಟೆಯಲ್ಲಿ ವ್ಯವಹಾರ ಮುಗಿಸಿ, ಹಣ ಪಡೆದು ಹೋಗುವಾಗ ಪಿಕ್ ಪಾಕೆಟ್ ಆಗಿರುವ ಉದಾಹರಣೆಯೂ ಸಾಕಷ್ಟಿತ್ತು. ಕೆಲವು ವೇಳೆ ಮಧ್ಯವರ್ತಿಗಳಿಂದಾಗಿ ರೈತರಿಗೆ ಕಡಿಮೆ ಹಣ ಲಭ್ಯವಾಗುತ್ತಿತ್ತು.

ಈ ಎಲ್ಲ ಕಾರಣಗಳಿಂದ ರೈತರು ಹೈರಾಣಾಗಿದ್ದರು. ಡಾ|| ನಾರಾಯಣ ಗೌಡ ರೇಷ್ಮೆ ಇಲಾಖೆ ಸಚಿವರಾಗಿ ಜವಾಬ್ದಾರಿ ವಹಿಸಿಕೊಂಡ ಮೇಲೆ ಮಾರುಕಟ್ಟೆಯಲ್ಲಿ ನಗದು ವ್ಯವಹಾರಕ್ಕೆ ಬ್ರೇಕ್ ಹಾಕುವಂತೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಪ್ರಾಯೋಗಿಕವಾಗಿ ಶಿಡ್ಲಘಟ್ಟ ರೇಷ್ಮೆ ಮಾರುಕಟ್ಟೆಯಲ್ಲಿ ಇ ಟೆಂಡರ್ ಹಾಗೂ ಇ ಹಣ ಪಾವತಿ ಆರಂಭಿಸಲಾಗಿತ್ತು. ಶಿಡ್ಲಘಟ್ಟದಲ್ಲಿ ನಡೆಸಿದ ಪ್ರಯೋಗ ಸಂಪೂರ್ಣ ಯಶಸ್ವಿಯಾಗಿದೆ.

ರೈತರು, ಡೀಲರ್‌ಗಳು ಸುಗಮವಾಗಿ ವ್ಯವಹಾರ ನಡೆಸಿದ್ದಾರೆ. ರಾಜ್ಯದ ಎಲ್ಲ ರೇಷ್ಮೆ ಮಾರುಕಟ್ಟೆಗೂ ಇದನ್ನ ವಿಸ್ತರಿಸಲಾಗಿದೆ.

ಜನವರಿ 20 ರಿಂದ ಶಿಡ್ಲಘಟ್ಟ ರೇಷ್ಮೆ ಮಾರುಕಟ್ಟೆಯಲ್ಲಿ ನಗದು ರಹಿತ (ಕ್ಯಾಶ್ ಲೆಸ್) ವ್ಯವಹಾರ ಆರಂಭವಾಗಿದೆ. ಮಾರುಕಟ್ಟೆಯಲ್ಲಿ ರೇಷ್ಮೆ ಗೂಡು ಖರೀದಿ ಇನ್ನು ಮುಂದೆ ನಗದು ರಹಿತವಾಗಿ ನಡೆಯಲಿದೆ. ಗೂಡು ಖರೀದಿಸಿದ ಡೀಲರ್‌ಗಳು ಮಾರ್ಕೆಟ್ ಆಫೀಸರ್ ಅಕೌಂಟ್‌ಗೆ ಹಣ ಜಮಾ ಮಾಡುತ್ತಾರೆ.

ಮಾರ್ಕೆಟ್ ಆಫೀಸರ್ ಅಕೌಂಟ್‌ನಿಂದ ರೇಷ್ಮೆ ಬೆಳೆಗಾರರ ಬ್ಯಾಂಕ್ ಅಕೌಂಟ್‌ಗೆ ಹಣ ನೇರವಾಗಿ ಜಮಾ ಆಗಲಿದೆ.

## ಬಿಸಲೇರಿ ಮರುಳಸಿದ್ದಪ್ಪ ಅವರ ಪತ್ನಿ ನಿಧನ




ದಾವಣಗೆರೆ, ಜ.21- ನಗರದ ಹೆಸರಾಂತ ಕಿರಾಣಿ ವರ್ತಕರಾಗಿದ್ದ ದಿ. ಬಿಸಲೇರಿ ಮರುಳಸಿದ್ದಪ್ಪ ಅವರ ಪತ್ನಿ ಶ್ರೀಮತಿ ರತ್ನಮ್ಮ ಅವರು ಇಂದು ಬೆಳಿಗ್ಗೆ 10.10ಕ್ಕೆ ನಿಧನರಾದರು. ಮೃತರಿಗೆ ಸುಮಾರು 78 ವರ್ಷ ವಯಸ್ಸಾಗಿತ್ತು.

ಓರ್ವ ಪುತ್ರ, ಸೊಸೆ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಇಂದು ಸಂಜೆ ನಡೆಯಿತು.

ರತ್ನಮ್ಮ ಅವರ ನಿಧನದ ವಿಷಯ ತಿಳಿದೊಡನೆ ಗಣ್ಯರು, ವರ್ತಕರು, ಬಂಧುಗಳು ಮೃತರ ನಿವಾಸಕ್ಕೆ ಭೇಟಿ ನೀಡಿ, ರತ್ನಮ್ಮ ಅವರ ಅಂತಿಮ ದರ್ಶನ ಪಡೆದರು.

## ಎಂ.ಟಿ. ತಿಪ್ಪೇಸ್ವಾಮಿ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ ಕೆನರಾ ಬ್ಯಾಂಕ್ ಹಿಂಭಾಗ ಅಜ್ಜಂಪುರ ಶೆಟ್ರು ಲೇಔಟ್ ವಾಸಿ ದಿ. ಮಾಯಾಕೊಂಡದ ಮೂಲೆಮನೆ ತಿಪ್ಪಣ್ಣ ಇವರ ಪುತ್ರ ಎಂ.ಟಿ. ತಿಪ್ಪೇಸ್ವಾಮಿ (80) ಅವರು ದಿನಾಂಕ 21.1.2021ರಂದು ಗುರುವಾರ ಬೆಳಿಗ್ಗೆ 8.20ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.01.2021 ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಮಾಯಕೊಂಡದ ಅವರ ಜಮೀನಿನಲ್ಲಿ ನೆರವೇರಲಿದೆ.

# ಹರಿಹರದಲ್ಲಿ ಮನೆಗಳ್ಳತನ : ಬಂಧನ

ಹರಿಹರ, ಜ.21- ನಗರದಲ್ಲಿ ನಡೆದಿದ್ದ ಮನೆ ಕಳ್ಳತನ ಪ್ರಕರಣವನ್ನು ಒಂದು ವಾರದೊಳಗೆ ಬೇಧಿಸಿರುವ ಹರಿಹರ ನಗರ ಪೊಲೀಸರು ಕಳ್ಳನನ್ನು ಬಂಧಿಸಿ, ಒಂದು ಲಕ್ಷಕ್ಕೂ ಅಧಿಕ ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ವಿಜಯನಗರ ಬಡಾವಣೆಯ 2ನೇ ಮೇನ್ 7ನೇ ಕ್ರಾಸ್ ನಲ್ಲಿ ಇದೇ ದಿನಾಂಕ 16 ರ ಬೆಳಗಿನ ಜಾವ ಶಕುಂತಲಾ ಬಾಯಿ ಎಂಬುವರ ಮನೆ ಬೀಗ ಒಡೆದು ಕಳ್ಳತನವಾಗಿತ್ತು.

ಪೊಲೀಸ್ ಉಪ ನಿರೀಕ್ಷಕ ಮಂಜುನಾಥ ಎಸ್. ಕಲ್ಲೇದೇವರ ಮತ್ತು ಬೆರಳು ಮುದ್ರೆ ತಜ್ಞರು ಬೆರಳು ಮುದ್ರೆ ಘಟಕ ಮತ್ತು ಸಿಬ್ಬಂದಿಯವರು ಕಳ್ಳತನ ಮಾಡಿದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಕೃತ್ಯ ನಡೆದ ಸ್ಥಳದಲ್ಲಿ ಆರೋಪಿತನ ಬೆರಳು ಮುದ್ರೆಯನ್ನು ಪತ್ತೆ ಮಾಡಿದ್ದರು. ನಂತರ ಎಎಸ್ಪಿ ರಾಜೀವ್, ಗ್ರಾಮಾಂತರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕ ನರಸಿಂಹ ತಾಮ್ರಧ್ವಜ ಮಾರ್ಗದರ್ಶನದಲ್ಲಿ ಹರಿಹರ ವೃತ್ತ ಸಿಪಿಐ ಸತೀಶ್ ಕುಮಾರ್ ನೇತೃತ್ವದಲ್ಲಿ ಪಿಎಸ್‌ಐಗಳಾದ ಲತಾ ವಿ. ತಾಳೇಕರ್ ಹಾಗೂ ಸುನೀಲ ಬಿ. ತೇಲಿ ಮತ್ತು ಸಿಬ್ಬಂದಿಗಳಾದ ಯಾಸೀನ್ ವುಲ್ಲಾ, ನಾಗರಾಜ ಸುಣಗಾರ, ದ್ವಾರಕೀಶ, ಶಿವರಾಜ, ಎಸ್.ಬಿ. ಸಿದ್ದರಾಜು, ಎಲ್. ತಿಪ್ಪೇಸ್ವಾಮಿ, ಹನುಮಂತಪ್ಪ ಗೋಪನಾಳ ಒಳಗೊಂಡ ತಂಡವು ಇಂದು ತೆಲಗಿ ಗ್ರಾಮದ ಬಳಿ ಹರಪನಹಳ್ಳಿ ತಾಲ್ಲೂಕಿನ ಇಂಗಳಗೊಂದಿ ಗ್ರಾಮದ ಭರಮಪ್ಪ ಅಲಿಯಾಸ್ ಗೊಣ್ಣೇರ ಭರಮಪ್ಪನನ್ನು ಬಂಧಿಸಲಾಗಿದೆ.

38.90 ಗ್ರಾಂ ತೂಕದ ಬಂಗಾರದ ಅವಲಕ್ಕಿ ಸರ, 250 ಗ್ರಾಂ ತೂಕದ ಯಲ್ಲಮ್ಮ ದೇವರ ಬೆಳ್ಳಿ ಮುಖವಾಡ ಒಟ್ಟು 1 ಲಕ್ಷದ 17 ಸಾವಿರ ಮೌಲ್ಯದ ಚಿನ್ನಾಭರಣಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

# ಕುಂದವಾಡ ಕೆರೆ ಅಭಿವೃದ್ಧಿ ಏಕೆ ? ಹೇಗೆ ?...



- ಹೆಚ್.ಎನ್. ಶಿವಕುಮಾರ್ ಬಿ.ಇ. (ಸಿವಿಲ್)
ಮಾಜಿ ಸದಸ್ಯರು, ಮಹಾನಗರಪಾಲಿಕೆ
ದಾವಣಗೆರೆ ಸಲಹಾ ಮಂಡಳಿ ಸದಸ್ಯರು,
ದಾವಣಗೆರೆ ಸ್ಮಾರ್ಟ್ ಸಿಟಿ ಪ್ರೈ.ಲಿ.
ommarket007@gmail.com

ಪರಿಸರದಿಂದ ಬಂದ ಜೀವ ಸಹಜವಾಗಿ ನೆಲ ಮತ್ತು ಜಲವನ್ನು ನಂಬಿಕೊಂಡು ಮನುಷ್ಯ ಜೀವನವನ್ನು ಸಾಗಿಸುತ್ತಾ ಬಂದಿದ್ದಾನೆ. ನದಿಗಳ ತಟದಲ್ಲಿ ತನ್ನ ನಾಗರಿಕತೆಯನ್ನು ಬೆಳೆಸಿಕೊಂಡಿದ್ದಾನೆ. ಜಗತ್ತಿನ ಯಾವ ಮೂಲೆಯಲ್ಲಿ ಹೋದರೂ ರಾಜ, ಮಹಾರಾಜರುಗಳು ತಮ್ಮ ತಮ್ಮ ರಾಜಧಾನಿಗಳನ್ನು ನದಿಯ ತಟಗಳಲ್ಲಿ ನಿರ್ಮಿಸಿರುವುದು ಕಂಡು ಬರುತ್ತದೆ. ಬದಲಾದ ಸನ್ನಿವೇಶಗಳಲ್ಲಿ ರಾಜ್ಯಗಳು ವಿಸ್ತರಣೆ ಆದಂತೆ, ನದಿಗಳಿಂದ ದೂರವಾದಾಗ ನೀರಿಗಾಗಿ ಕೆರೆ, ಕಟ್ಟೆಗಳನ್ನು ನಿರ್ಮಿಸಿರುತ್ತಾರೆ. ಆಧುನಿಕತೆ ಬೆಳೆದಂತೆ ನದಿ ಪಾತ್ರಗಳಿಗೆ ಅಡ್ಡವಾಗಿ ಅಣೆಕಟ್ಟುಗಳನ್ನು ಕಟ್ಟಿ, ನೀರನ್ನು ಹಾಯಿಸಿ ಬೆಳೆ ಬೆಳೆಯುವುದಕ್ಕಾಗಿ ಮತ್ತು ಕುಡಿಯುವ ನೀರಿಗಾಗಿ ರೂಪಾಂತರಗೊಳಿಸಿದ್ದಾರೆ. ಮನುಷ್ಯನಿಗಿಂತಲೂ ಮೊದಲೇ ಜನಿಸಿದ ಸಕಲ ಜೀವರಾಶಿಗಳು ಮತ್ತು ಸಸ್ಯರಾಶಿಗಳು ಕೂಡ ನೀರನ್ನೇ ಅವಲಂಬಿಸಿ ಬೆಳೆಯುತ್ತಾ ಬಂದಿರುತ್ತವೆ. ಆದರೆ ಅವುಗಳ ಅಳಿವನ್ನು ಕಂಡು, ಇತ್ತೀಚೆಗೆ ಅವುಗಳ ಉಳಿವಿಗೋಸ್ಕರ ಶತಪ್ರಯತ್ನ ಮಾಡುತ್ತಿರುವುದು ಕಂಡು ಬರುತ್ತಿದೆ. ನೀರಿನ ಅಗತ್ಯತೆಯನ್ನು ಕಂಡು, ನೀರಿನ ಸಂರಕ್ಷಣೆಯು ಕೂಡ ಬರದಿಂದ ಸಾಗಿದೆ. ಏತ ನೀರಾವರಿ ಮೂಲಕ ಕೆರೆಗಳಿಗೆ ನೀರನ್ನು ತುಂಬಿಸುವ ಕಾರ್ಯಗಳು ನಡೆದಿರುತ್ತವೆ. ಕುಡಿಯುವ ನೀರಿಗಾಗಿ ಕೆರೆ, ಕಟ್ಟೆಗಳನ್ನು ತುಂಬಿಸಿಕೊಳ್ಳುವ ಕಾಮಗಾರಿಗಳು ನಿರಂತರವಾಗಿ ನಡೆಯುತ್ತಿವೆ. ಗ್ರಾಮ, ಪಟ್ಟಣಗಳಲ್ಲಿ ಜನಸಂಖ್ಯೆ ಬೆಳೆದಂತೆ, ನೀರಿನ ಅಗತ್ಯತೆ ಹೆಚ್ಚಾಗುತ್ತಾ ಹೋಗುತ್ತದೆ. ಇರುವ ಕೆರೆ, ಕಟ್ಟೆಗಳಲ್ಲಿ ನೀರನ್ನು ಹೆಚ್ಚು ಹೆಚ್ಚಾಗಿ ಹಿಡಿದು ಇಟ್ಟುಕೊಳ್ಳುವುದು ಅನಿವಾರ್ಯವಾಗಿದೆ, ಹಾಗೆಯೇ ನೀರು ಸೋರಿ ಹೊರಗೆ ಹೋಗದಂತೆ, ಅಶುದ್ಧ ನೀರು ಒಳಗೆ ಬರದಂತೆ ಏರಿಗಳನ್ನು ನಿರ್ಮಿಸಬೇಕಾಗಿದೆ. ಏರಿಗಳಲ್ಲಿ ಗಿಡ, ಗಂಟೆಗಳು ಬೆಳೆಯದಂತೆ ಮತ್ತು ಏರಿಯ ಮೇಲಿರುವ ಗಿಡ, ಮರಗಳು ಉಳಿಯುವಂತೆ ಗಮನ ಹರಿಸಿ, ಕೆರೆಯ ಆಕಾರ ಬದಲಾಗದಂತೆ ಏರಿಯನ್ನು ಎತ್ತರಿಸಿ, ಬಿಗಿಗೊಳಿಸುವ ಅಭಿವೃದ್ಧಿ ಕಾಮಗಾರಿಗಳು ಅವಶ್ಯಕವಾಗಿರುತ್ತವೆ.

ದಾವಣಗೆರೆ ಕುಡಿಯುವ ನೀರಿನ ವ್ಯವಸ್ಥೆಯನ್ನು ನೋಡಿದಾಗ ಹಳೇ ಊರಿನಲ್ಲಿ ಬೀದಿಗೆ ಒಂದೋ-ಎರಡೋ ಸಾರ್ವಜನಿಕ ಬಾವಿ ಮತ್ತು ಖಾಸಗಿ ಮನೆಗಳಲ್ಲಿ ಬಾವಿಗಳಿರುತ್ತಿದ್ದವು. 1917ರಲ್ಲಿ ದಾವಣಗೆರೆ ನಗರಕ್ಕೆ ತುಂಗಭದ್ರಾ ನದಿಯಿಂದ ನೀರು ತುಂಬುವ ಯೋಜನೆ ಜಾರಿಗೆ ಬಂದಿತು. ದಾವಣಗೆರೆ ನಗರಸಭೆ ಹಿಂದೆ ಇರುವ ಹಳೇ ಟ್ಯಾಂಕ್‌ನಲ್ಲಿ ನೀರು ಸಂಗ್ರಹಿಸಿ ನಲ್ಲಿಗಳ ಮೂಲಕ ಊರಿಗೆ ನೀರು ಸರಬರಾಜು ಮಾಡುವ ವ್ಯವಸ್ಥೆ ಮಾಡಲಾಯಿತು. ನಂತರ 1955-60 ರಲ್ಲಿ ಬಾತಿ ಕೆರೆಯಿಂದ ನೀರನ್ನು ಪೂರೈಕೆ ಮಾಡಲಾಯಿತು. ನಂತರ 1970 ರಲ್ಲಿ ಭದ್ರಾ ಚಾನಲ್‌ನಿಂದ ನೀರು ಸಂಗ್ರಹಿಸಿ 1972 ರಲ್ಲಿ ಟಿ.ವಿ. ಸ್ಟೇಷನ್ ಹತ್ತಿರ ನೀರು ಶುದ್ಧೀಕರಣ ಘಟಕದ ಕಾಮಗಾರಿ ಪ್ರಾರಂಭವಾಗಿ, 1977 ರಲ್ಲಿ ಶುದ್ಧೀಕರಿಸಿದ ನೀರನ್ನು ಪೂರೈಸಲಾಯಿತು. ತದನಂತರದಲ್ಲಿ 1998 ರಲ್ಲಿ ಹೊಸ ಯೋಜನೆ ರೂಪಗೊಂಡು ರಾಜನಹಳ್ಳಿ ಬಳಿ ತುಂಗಭದ್ರಾ ನದಿಗೆ ಜಾಕ್‌ವೆಲ್ ನಿರ್ಮಾಣ ಮಾಡಿ ಬಾತಿಗುಡ್ಡದ ಬಳಿ ನೀರು ಶುದ್ಧೀಕರಣ ಕೇಂದ್ರವನ್ನು ಸ್ಥಾಪಿಸಿ, ಅಲ್ಲಿಂದ ನೀರನ್ನು ಸರಬರಾಜು ಮಾಡಲಾಯಿತು. ಬೆಳೆಯುತ್ತಿರುವ ಜನಸಂಖ್ಯೆ, ನಗರ ವಿಸ್ತೀರ್ಣ ಮತ್ತು ನೀರಿನ ಬೇಡಿಕೆ ಮುಂದಿನ ಯೋಜನೆಗಳಿಗೆ ನಾಂದಿಯಾಯಿತು. ಆಗ ನೀರು ಸಂಗ್ರಾಹಕವಾಗಿ ಕುಂದವಾಡ ಕೆರೆಯನ್ನು ಆಯ್ಕೆ ಮಾಡಿಕೊಂಡು 2003 ರಲ್ಲಿ ಕುಂದವಾಡ ಕೆರೆಯನ್ನು ಜಲ ಸಂಗ್ರಹಕವಾಗಿ ಮಾಡಲಾಯಿತು. ಭದ್ರಾ ಚಾನಲ್‌ನಿಂದ ಸಿಮೆಂಟ್ ಪೈಪುಗಳ ಮೂಲಕ ನೀರನ್ನು ತರಲಾಗುತ್ತಿತ್ತು ಮತ್ತು ಬಹಳಷ್ಟು ನೀರು ಸೋರಿಕೆಯಾಗುತ್ತಿತ್ತು. ಅಲ್ಲಿಂದ ಒಟ್ಟಾರೆ ಪ್ರತಿ ದಿನ 60 ಮಿಲಿಯನ್ ಲೀಟರ್ ನೀರನ್ನು ದಾವಣಗೆರೆಗೆ ಸರಬರಾಜು ಮಾಡಲಾಗುತ್ತಿತ್ತು.

ಇನ್ನು ಹೆಚ್ಚಿನ ನೀರಿನ ಸಂಗ್ರಹ ಮತ್ತು ಸರಬರಾಜು ದೃಷ್ಟಿಯಿಂದ, ಹೆಚ್ಚಿನ ಓವರ್ ಹೆಡ್ ಟ್ಯಾಂಕ್‌ಗಳ ನಿರ್ಮಾಣ ಮತ್ತು ಸತತ ನೀರಿನ ಪೂರೈಕೆಗೆ ಕ್ರಮ ಕೈಗೊಳ್ಳಲಾಯಿತು. 2008-09 ರಲ್ಲಿ ಹೊಸ ಯೋಜನೆಯನ್ನು ರೂಪಿಸಿ ಇನ್ನು ಹೆಚ್ಚಿಗೆ ಪ್ರತಿ ದಿನ 40 ಮಿಲಿಯನ್ ಲೀಟರ್ ನೀರನ್ನು ನದಿಯಿಂದ ತರುವ ಪ್ರಯತ್ನದಲ್ಲಿ ಯಶಸ್ವಿಯಾದರು. ಪ್ರತಿ ದಿನ 20 ಮಿಲಿಯನ್ ಲೀಟರ್ ನೀರನ್ನು ನೇರವಾಗಿ ಕುಂದವಾಡ ಕೆರೆ ಮತ್ತು 20 ಮಿಲಿಯನ್ ಲೀಟರ್ ನೀರನ್ನು ಬಾತಿ ನೀರು ಶುದ್ಧೀಕರಣ ಕೇಂದ್ರಕ್ಕೆ ತರಲಾಯಿತು. ಈ ಎಲ್ಲಾ ಯೋಜನೆಗಳಿಂದ ಒಟ್ಟಾರೆ ಪ್ರತಿ ದಿನ ದಾವಣಗೆರೆ ನಗರಕ್ಕೆ 100 ಮಿಲಿಯನ್ ಲೀಟರ್ ನೀರನ್ನು ಈಗ ಇರುವ 31 ಓವರ್ ಹೆಡ್ ಟ್ಯಾಂಕ್‌ಗಳಿಗೆ ಭರ್ತಿ ಮಾಡಿ ಸರಬರಾಜು ಮಾಡುವುದರ ಜೊತೆಯಲ್ಲಿ ನೂತನವಾಗಿ ಜಲಸಿರಿ ಯೋಜನೆಯಲ್ಲಿ 18 ಓವರ್ ಹೆಡ್ ಟ್ಯಾಂಕರ್‌ಗಳನ್ನು ನಿರ್ಮಿಸಿ 24x7 ಅಂದರೆ ಪ್ರತಿ ದಿನದ 24 ಗಂಟೆಯು ನೀರು ಕೊಡುವ ಯೋಜನೆ ಪ್ರಗತಿಯಲ್ಲಿದೆ.



*ಆಧುನಿಕತೆ ಬೆಳೆದಂತೆ ನದಿ ಪಾತ್ರಗಳಿಗೆ ಅಡ್ಡವಾಗಿ ಅಣೆಕಟ್ಟುಗಳನ್ನು ಕಟ್ಟಿ, ನೀರನ್ನು ಹಾಯಿಸಿ ಬೆಳೆ ಬೆಳೆಯುವುದಕ್ಕಾಗಿ ಮತ್ತು ಕುಡಿಯುವ ನೀರಿಗಾಗಿ ರೂಪಾಂತರಗೊಳಿಸಿದ್ದಾರೆ. ಮನುಷ್ಯನಿಗಿಂತಲೂ ಮೊದಲೇ ಜನಿಸಿದ ಸಕಲ ಜೀವರಾಶಿಗಳು ಮತ್ತು ಸಸ್ಯರಾಶಿಗಳು ಕೂಡ ನೀರನ್ನೇ ಅವಲಂಬಿಸಿ ಬೆಳೆಯುತ್ತಾ ಬಂದಿರುತ್ತವೆ. ಆದರೆ, ಅವುಗಳ ಅಳಿವನ್ನು ಕಂಡು ಇತ್ತೀಚೆಗೆ, ಅವುಗಳ ಉಳಿವಿಗೋಸ್ಕರ ಶತಪ್ರಯತ್ನ ಮಾಡುತ್ತಿರುವುದು ಕಂಡು ಬರುತ್ತಿದೆ. ನೀರಿನ ಅಗತ್ಯತೆಯನ್ನು ಕಂಡು, ನೀರಿನ ಸಂರಕ್ಷಣೆಯೂ ಕೂಡ ಭರದಿಂದ ಸಾಗಿದೆ.*

**ಕೆರೆ ಅಭಿವೃದ್ಧಿ ಏಕೆ...?**


ನಮ್ಮ ದಾವಣಗೆರೆಯಲ್ಲಿ ಪ್ರಮುಖವಾಗಿರುವ ಕುಂದವಾಡ ಕೆರೆಯ ಅಭಿವೃದ್ಧಿಯೂ ಕೂಡ ಬಹಳಷ್ಟು ಅವಶ್ಯ ಇರುವುದನ್ನು ಅರಿತು 'ದಾವಣಗೆರೆ ಸ್ಮಾರ್ಟ್ ಸಿಟಿ' ವಿಶೇಷ ತಾಂತ್ರಿಕ ತಜ್ಞರ ಸಲಹೆಯೊಂದಿಗೆ ಕುಂದವಾಡ ಕೆರೆಯ ಏರಿ ಅಭಿವೃದ್ಧಿ ಕಾರ್ಯವನ್ನು ತೆಗೆದುಕೊಂಡಿರುತ್ತದೆ. 265 ಎಕರೆ ವಿಸ್ತೀರ್ಣವುಳ್ಳ ಕುಂದವಾಡ ಕೆರೆ ಸುತ್ತಲೂ 4.91 ಕಿಲೋಮೀಟರ್ ಏರಿಯನ್ನು ಹೊಂದಿರುತ್ತದೆ. 10 ಮೀಟರ್ ನಿಂದ 14 ಮೀಟರ್‌ವರೆಗೆ ಏರಿಯ ಮೇಲೆ ಅಗಲವಾದ ರಸ್ತೆ ಹೊಂದಿರುತ್ತದೆ, ಎರಡೂ ಬದಿಯಲ್ಲಿ ಮರಗಳು ಇದ್ದು ಏರಿಯ ಸೌಂದರ್ಯವನ್ನು ಹೆಚ್ಚಿಸಿರುತ್ತವೆ. ಪ್ರಸ್ತುತ ಕುಂದವಾಡ ಕೆರೆಯಲ್ಲಿ 1.1 Mcum (ಮಿಲಿಯನ್ ಕ್ಯೂಬಿಕ್ ಮೀಟರ್) ನೀರಿನ ಶೇಖರಣೆ ವ್ಯವಸ್ಥೆ ಇರುತ್ತದೆ. ಅದರಲ್ಲಿ 0.1415 Mcum ನೀರು ಸೋರಿಕೆಯಾಗುವುದು ಕಂಡುಬರುತ್ತಿದೆ. ಇದನ್ನು ಸರಿದೂಗಿಸಲು ತಜ್ಞರ ಸಮಿತಿ ಕೆರೆಯ ಏರಿಯನ್ನು 0.183 ಮೀಟರ್ ಎತ್ತರಿಸಲು ಸಲಹೆ ನೀಡುವುದರ ಜೊತೆಗೆ ಏರಿಯನ್ನು ಬಿಗಿಗೊಳಿಸುವ ಸಲಹೆಯನ್ನು ನೀಡಿರುತ್ತಾರೆ. ಜೊತೆಯಲ್ಲಿ ಸೈಕಲ್ ಟ್ರ್ಯಾಕ್ ಸಹ ನಿರ್ಮಿಸಲು ಹೇಳಿರುತ್ತಾರೆ.

ದಾವಣಗೆರೆ ಸ್ಮಾರ್ಟ್ ಸಿಟಿ ವತಿಯಿಂದ ಮಾಡುತ್ತಿರುವ 'ಕುಂದವಾಡ ಕೆರೆ ಅಭಿವೃದ್ಧಿ' ಯೋಜನೆಯನ್ನು ವಿವಿಧ ಭಾಗಗಳಾಗಿ ವಿಂಗಡಿಸಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

**ಕೆರೆಯ ಏರಿ ಅಭಿವೃದ್ಧಿ ಹೇಗೆ:**

ಕೆರೆ ಏರಿಯ ಒಳಭಾಗದಲ್ಲಿ ಈಗ ಇರುವ ಇಳುಕಲು ಹೆಚ್ಚುಗೊಳಿಸಲು ಮತ್ತು ಕಲ್ಲಿನ Revetment ಕಟ್ಟಲು ಅನುಕೂಲವಾಗಲು ಈಗ ಇರುವ ಕಲ್ಲುಗಳನ್ನು ತೆಗೆದು ಮಣ್ಣನ್ನು ಮಟ್ಟಗೊಳಿಸಿ ಗಟ್ಟಿಗೊಳಿಸುವುದು, ಹೀಗೆ ಒಟ್ಟು ಕೆರೆ ಒಳಭಾಗ 55031 ಚದುರ ಮೀಟರ್ ಕಾಮಗಾರಿ ತೆಗೆದುಕೊಳ್ಳಲಾಗಿದೆ. ನಂತರ ಹೊಸ ಗೊರಸು ಮಣ್ಣನ್ನು ಉಪಯೋಗಿಸಿ ಕೆರೆಯ ಒಳಭಾಗದ ಸುತ್ತಲೂ 84843 Cum (ಘನಮೀಟರ್) ಮಣ್ಣಿನಿಂದ ಏರಿಯನ್ನು ಅಗಲಗೊಳಿಸುವುದು ಮತ್ತು 34580 Cum ಮಣ್ಣಿನಿಂದ ಎತ್ತರಿಸುವುದು. ಸಿದ್ದಪಡಿಸಿದ ಒಳ ಭಾಗದ ಏರಿಯ ಮೇಲ್ಭಾಗಕ್ಕೆ ಏರಿಯ ಮೂಲಕ ನೀರು ಸೋರಿಕೆ ತಡೆಯಲು LDPE ತೆಳುವಾದ ಹಾಸನ್ನು **(4ನೇ ಪುಟಕ್ಕೆ)**

## ಶಿವು ಉಪ್ಪಾರ್ ಸಾವು ಸಿಬಿಐಗೆ ವಹಿಸಲು ರಾಮಸೇನೆ ಮನವಿ



ದಾವಣಗೆರೆ, ಜ.21- ಗೋ ಪ್ರೇಮಿ ಶಿವು ಉಪ್ಪಾರ್ ಸಾವಿನ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿ ಶ್ರೀರಾಮ ಸೇನೆಯಿಂದ ನಗರದಲ್ಲಿ ಇಂದು ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

2019 ಮೇ 25ರಂದು ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ಎಪಿಎಂಸಿ ಆವರಣದಲ್ಲಿ ಶಿವು ಉಪ್ಪಾರ್ ಶವ ಸಂಶಯಾಸ್ಪದವಾಗಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಪ್ರಕರಣದ ನಿಷ್ಪಕ್ಷಪಾತ ತನಿಖೆಗೆ ಆಗ್ರಹಿಸಿ ಹೋರಾಟ ಕೂಡ ನಡೆದಿತ್ತು. ಆದರೆ ಒಂದೂವರೆ ವರ್ಷ ಕಳೆದರೂ ಇನ್ನೂ ತನಿಖೆ ಪೂರ್ಣಗೊಂಡಿಲ್ಲ. ಶಿವು ಉಪ್ಪಾರ್ ಸಾವಿಗೆ ನಿಖರ ಕಾರಣವೂ ತಿಳಿದು ಬಂದಿಲ್ಲ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಶಿವು ಉಪ್ಪಾರ್ ಮಾಡಿದ ವಿಡಿಯೋದಲ್ಲಿ ಹೇಳಿದ ಗೋ ಹಂತಕ ಬೆಪಾರಿ 50 ಲಕ್ಷ ಸುಪಾರಿ ಕೊಟ್ಟು ಶಿವುನನ್ನು ಕೊಲ್ಲುವ ಬಗ್ಗೆ ಹೇಳಿದ್ದರೂ ಆತನ ಬಂಧನದ ಬಗ್ಗೆ ಮಾಹಿತಿಯಿಲ್ಲ. ಶಿವು ಹೇಳಿದ ಅನಧಿಕೃತ ಜಾನುವಾರು ಸಾಗಾಟದ ಬಗ್ಗೆ ತನಿಖೆಯಾಗಿಲ್ಲ. ಶಿವು ಉಲ್ಲೇಖಿಸಿದ ವಾಹನಗಳ ಜಪ್ತಿ ಸಹ ಆಗಿಲ್ಲ. ಇವೆಲ್ಲವೂ ಸೇರಿದಂತೆ ಇನ್ನೂ ಮುಂತಾದ ಅಂಶಗಳ ಬಗ್ಗೆ ತನಿಖೆ ನಡೆಯಬೇಕಿತ್ತು. ಆದರೆ ಪ್ರಕರಣವನ್ನು ಮುಚ್ಚಿ ಹಾಕಲು ಕಾಣದ ಕೈಗಳು ಪ್ರಯತ್ನಿಸುತ್ತಿವೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆ ಜಿಲ್ಲಾಧ್ಯಕ್ಷ ಮಣಿಕಂಠ, ರಾಜ್ಯ ಸಂಪರ್ಕ ಪ್ರಮುಖ್ ಪರಶುರಾಮ ನಡುಮನಿ, ಮುಖಂಡರಾದ ಡಿ.ಬಿ. ವಿನೋದ ರಾಜ್, ಶ್ರೀಧರ, ಕರಾಟೆ ರಮೇಶ, ಸಾಗರ್, ಮಾರ್ಕಂಡೇಯ, ರಾಜು ಸೇರಿದಂತೆ ಇತರರು ಭಾಗವಹಿಸಿದ್ದರು.

## ಅಧಿಕಾರಿಗಳ ಗ್ರಾಮ ಕಾರ್ಯ ಕಡ್ಡಾಯ : ಸಚಿವ

**ಜಿಲ್ಲಾಧಿಕಾರಿಯಿಂದ ಹಿಡಿದು ಎಲ್ಲಾ ಅಧಿಕಾರಿಗಳು ಹಳ್ಳಿಗಳಿಗೆ ಹೋಗಿ ಕೆಲಸ ಮಾಡಬೇಕು : ಸಚಿವ ಆರ್. ಅಶೋಕ್**

**(1ನೇ ಪುಟದಿಂದ)** ಗ್ರಾಮಗಳ ಮತ್ತು ಜನರ ಸಮಸ್ಯೆಯನ್ನು ಆಲಿಸಿ ಪರಿಹಾರ ಕಂಡುಕೊಳ್ಳುವುದರ ಜೊತೆಗೆ ಅಭಿವೃದ್ಧಿಗೆ ಹಣ ನೀಡುವುದಾದರೆ, ಅಲ್ಲಿಯೇ ಹಣ ಬಿಡುಗಡೆ ಮಾಡಬೇಕು ಮತ್ತು ಪಂಚಾಯಿತಿಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ? ನಾಡ ಕಚೇರಿಗಳಲ್ಲಿ ಜನರ ಕೆಲಸವಾಗುತ್ತಿದೆಯೇ? ಅಲ್ಲಿ ಸಮಸ್ಯೆಗಳು ಏನು? ಎಂಬುದರ ಬಗ್ಗೆ ಅಧಿಕಾರಿಗಳು ಅರಿತು ಕೆಲಸ ಮಾಡಬೇಕು ಎಂದರು.

ಸಂಧ್ಯಾ ಸುರಕ್ಷಾ ಯೋಜನೆಯಡಿ ವೃದ್ಧರಿಗೆ ನೀಡಲಾಗುವ ಮಾಸಿಕ ಪಿಂಚಣಿಯನ್ನು ಮುಂದೆ ಫಲಾನುಭವಿಗಳ ಮನೆಗೇ ತಲುಪಿಸಲಾಗುವುದು. ಇದಕ್ಕಾಗಿ ಫಲಾನುಭವಿಗಳು ಆಧಾರ್ ಕಾರ್ಡ್ ಹಾಗೂ ಬ್ಯಾಂಕ್ ಪಾಸ್ ಬುಕ್ ಒದಗಿಸಿದರೆ ಸಾಕು ಎಂದು ಅಶೋಕ್ ಇದೇ ಸಂದರ್ಭದಲ್ಲಿ ಹೇಳಿದ್ದಾರೆ. ವಯೋಮಾನ ಪ್ರಮಾಣ ಪತ್ರ, ವಾಸಸ್ಥಳದ ಧೃಢೀಕರಣ ಸೇರಿದಂತೆ ಹಲವು ದಾಖಲೆಗಳನ್ನು ಕೇಳುತ್ತಾ ಅಧಿಕಾರಿಗಳು ಜನರನ್ನು ಅಲೆದಾಡಿಸುತ್ತಿದ್ದರು.ಆದರೆ ಇನ್ನು ಮುಂದೆ ಇದು ನಡೆಯುವುದಿಲ್ಲ ಎಂದರು.

ಈ ಯೋಜನೆಗೆ ಜನವರಿ ಇಪ್ಪತ್ತೇಳರಂದು ಮುಖ್ಯಮಂತ್ರಿಗಳು ಚಾಲನೆ ನೀಡಲಿದ್ದಾರೆ ಎಂದರು. ಕಂದಾಯ ಇಲಾಖೆಗೆ 2072 ಸರ್ವೇಯರ್ ಗಳ ಹುದ್ದೆಯನ್ನು ಭರ್ತಿ ಮಾಡಲು ತೀರ್ಮಾನಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

## ಷೇರು ಸೂಚ್ಯಂಕ

**(1ನೇ ಪುಟದಿಂದ)** ಕಂಡಿವೆ. ಇದರಿಂದಾಗಿ ಷೇರು ಪೇಟೆ ಅಂತಿಮವಾಗಿ 49,624.76ರಲ್ಲಿ ಅಂತ್ಯಗೊಂಡಿದೆ.

ಒ.ಎನ್.ಜಿ.ಸಿ. ಅತಿ ಹೆಚ್ಚಿನ ಶೇ.4ರ ಕುಸಿತ ಕಂಡಿದೆ. ಭಾರತಿ ಏರ್‌ಟೆಲ್, ಎಸ್.ಬಿ.ಐ., ಇಂಡಸ್ ಇಂಡ್ ಬ್ಯಾಂಕ್, ಎನ್.ಟಿ.ಪಿ.ಸಿ., ಸನ್ ಫಾರ್ಮಾ ಹಾಗೂ ಐ.ಟಿ.ಸಿ.ಗಳು ಕುಸಿತ ಕಂಡಿವೆ. ಮತ್ತೊಂದೆಡೆ ಬಜಾಜ್ ಫೈನಾನ್ಸ್, ಬಜಾಜ್ ಆಟೋ, ರಿಲೈಯನ್ಸ್ ಇಂಡಸ್ಟ್ರೀಸ್, ಬಜಾಜ್ ಫಿನ್‌ಸರ್ವ್ ಹಾಗೂ ಏಷಿಯನ್ ಪೇಂಟ್‌ಗಳ ಷೇರುಗಳು ಏರಿಕೆ ಕಂಡಿವೆ. ಫ್ಯೂಚರ್ ರಿಟೇಲ್ ಜೊತೆ ರಿಲೈಯನ್ಸ್ ಮಾಡಿಕೊಂಡಿರುವ 24,713 ಕೋಟಿ ರೂ.ಗಳ ಒಪ್ಪಂದಕ್ಕೆ ಷೇರು ಪೇಟೆ ಒಪ್ಪಿಗೆ ನೀಡಿದೆ. ಇದರಿಂದಾಗಿ ರಿಲೈಯನ್ಸ್ ಶೇ.2.09ರ ಏರಿಕೆ ಕಂಡಿದೆ.

## ಗ್ರಾಮಾಂತರದಲ್ಲಿ ನಾಳೆ ವಿದ್ಯುತ್ ಇಲ್ಲ

ದಾವಣಗೆರೆ, ಜ.21- ಶಿವಾಲಿ, ವಿಜಯ ನಗರ, ವಾಟರ್‌ವರ್ಕ್ಸ್, ಕರೂರು ಇಂಡಸ್ಟ್ರಿಯಲ್, ಕೋಡಿ ಹಳ್ಳಿ, ಎನ್.ಜೆ. ನೀಲಾನಹಳ್ಳಿ, ಅಮೃತ ನಗರ, ಶನೇಶ್ವರ, ಯರಗುಂಟೆ, ಕಮರ್ಷಿಯಲ್, ಎಸ್.ಜೆ.ಎಂ. ಬೂದಿಹಾಳು ಎಸ್‌ಟಿಪಿ ಮಾರ್ಗಗಳಲ್ಲಿ ನಾಡಿದ್ದು ದಿನಾಂಕ 23 ರ ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

## ಪುಣೆಯ ಸೆರಮ್ ತಾಣದಲ್ಲಿ ಬೆಂಕಿ: ಐವರ ಸಾವು

**ಲಸಿಕೆ ಉತ್ಪಾದನೆಗೆ ತೊಡಕಾಗದು ಎಂದ ಪೂನಾವಾಲಾ**

ಪುಣೆ, ಜ. 21 – ಕೊರೊನಾ ಲಸಿಕೆ ಉತ್ಪಾದಿಸುತ್ತಿರುವ ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್.ಐ.ಐ.) ಮಂಜರಿಯಲ್ಲಿ ಹೊಂದಿರುವ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು ಐವರು ಸಾವನ್ನಪ್ಪಿದ್ದಾರೆ ಹಾಗೂ ಕಟ್ಟಡದಿಂದ ಒಂಭತ್ತು ಜನರನ್ನು ತೆರವುಗೊಳಿಸಲಾಗಿದೆ.

ಈ ಬೆಂಕಿಯ ಕಾರಣದಿಂದಾಗಿ ಕೊವಿಶೀಲ್ಡ್ ಲಸಿಕೆಯ ಉತ್ಪಾದನೆಗೆ ಹೊಡೆತ ಬೀಳುವುದಿಲ್ಲ ಎಂದು ಸೆರಮ್ ಮುಖ್ಯಸ್ಥ ಅದರ್ ಪೂನಾವಾಲಾ ಹೇಳಿದ್ದಾರೆ.

ನಿರ್ಮಾಣ ಹಂತದಲ್ಲಿದ್ದ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಈ ಕಟ್ಟಡವು ಕೊವಿಶೀಲ್ಡ್ ಉತ್ಪಾದನಾ ಘಟಕಕ್ಕಿಂತ ಒಂದು ಕಿ.ಮೀ. ದೂರದಲ್ಲಿದೆ ಎಂದು ಮೂಲಗಳು ಹೇಳಿವೆ.

ಲಸಿಕೆ ಉತ್ಪಾದನೆಗಾಗಿ ಹಲವು ಕಟ್ಟಡಗಳನ್ನು ಹೊಂದಲಾಗಿದೆ. ಹೀಗಾಗಿ ಲಸಿಕೆ ಉತ್ಪಾದನೆಗೆ ನಷ್ಟವಾಗುವುದಿಲ್ಲ ಎಂದು ಸರ್ಕಾರ ಹಾಗೂ ಸಾರ್ವಜನಿಕರಿಗೆ ತಿಳಿಸುವುದಾಗಿ ಪೂನಾವಾಲಾ ಹೇಳಿದ್ದಾರೆ.

ಅಪಘಾತದಲ್ಲಿ ಕೆಲವರು ಮೃತಪಟ್ಟಿರುವ ದುರಾದೃಷ್ಟಕರ ವರದಿಗಳು ಬಂದಿವೆ. ಮೃತರ ಕುಟುಂಬಗಳ ಬಗ್ಗೆ ನಾವು ಅಪಾರ ಶೋಕ ವ್ಯಕ್ತಪಡಿಸುತ್ತೇವೆ ಎಂದವರು ಹೇಳಿದ್ದಾರೆ.

ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಐವರು ಬೆಂಕಿಗೆ ಸಿಲುಕಿ ಮೃತಪಟ್ಟಿದ್ದಾರೆ ಎಂದು ಪುಣೆಯ ಮೇಯರ್ ಮುರಳೀಧರ ಮೊಹೋಲ್ ಹೇಳಿದ್ದಾರೆ. ಘಟನೆಯ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ ಎಂದು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಹೇಳಿದ್ದಾರೆ.

ಸೆರಮ್‌ನ ಎಸ್.ಇ. ಝಡ್ 3 ಕಟ್ಟಡದ ನಾಲ್ಕು ಹಾಗೂ ಐದನೇ ಮಹಡಿಯಲ್ಲಿ ಮಧ್ಯಾಹ್ನ 2.45ಕ್ಕೆ ಬೆಂಕಿ ಕಾಣಿಸಿಕೊಂಡಿದೆ. ಎರಡು ಗಂಟೆ ನಂತರ ಬೆಂಕಿ ನಿಯಂತ್ರಣಕ್ಕೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**WANTED**

**A well established Software Company looking for dedicated and enthusiastic SALES EXECUTIVE (MALE ONLY)**

Qualification : Any graduate with excellent Communication skills.
Job Responsibilities : Increasing Customer base, Meeting sales target, Assistance in execution of Marketing and sales Promotion activities. Candidates must be willing to travel.

**Interested Candidates can E-mail to updated C.V.to hardsoftdvg@gmail.com or Call us : 97312 18567**

**ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ ನಿಯಮಿತ**

#3371/27-56/ಪಿ2, 'ರತ್ನಾ', ಒಂದನೇ ಮಹಡಿ, ಯಮಹಾ ಶೋ ರೂಂ ಮೇಲ್ಭಾಗ, ತೆಲಗಿ ಉಜ್ಜಪ್ಪ ಲೇಔಟ್, ವಿನಾಯಕ ನಗರ, ಪಿ.ಬಿ. ರಸ್ತೆ, ದಾವಣಗೆರೆ-577 006.
E-mail:rpmukiuwmipdavanagere@gmail.com

ಸಂ. ಕೆಯುಐಡಿಎಫ್‌ಸಿ-ಕ್ವಿಮಪ್/ಆರ್‌ಪಿಎಂಯು-ಡಿವಿಜಿ/ಆಡಳಿತ/ಮಾನವ ಸಂಪನ್ಮೂಲ/2020-21/2ನೇ ಕರೆ/3977 ದಿ: 20/01/2021

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕೆಯುಐಡಿಎಫ್‌ಸಿ-ಕೆಐಯುಡಬ್ಲ್ಯುಎಂಐಪಿ, ಆರ್‌ಪಿಎಂಯು ದಾವಣಗೆರೆ ಹಾಗೂ ಅದರ ಅಧೀನ ಕಛೇರಿಗಳಿಗೆ (ದಾವಣಗೆರೆ, ಹರಿಹರ, ರಾಣೇಬೆನ್ನೂರು ಹಾಗೂ ಬ್ಯಾಡಗಿ) ಅವಶ್ಯವಿರುವ ಮಾನವ ಸಂಪನ್ಮೂಲ ಸೇವೆಗಳನ್ನು (ಆಫೀಸ್ ಬಾಯ್-05, ರಾತ್ರಿ ಕಾವಲುಗಾರ-01 ಹಾಗೂ ಸ್ವಚ್ಛತಾ ಕಾರ್ಮಿಕ-01) ಒದಗಿಸಲು ಕಟಿಪಿಪಿ ಕಾಯ್ದೆ 1999 ರನ್ವಯ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನ ಒಟ್ಟು ಮೊತ್ತ ಅಂದಾಜು ರೂ. 11.50 ಲಕ್ಷಗಳಾಗಿದ್ದು, ಇಎಂಡಿ ಮೊತ್ತ ರೂ. 58,000/- ಗಳಾಗಿರುತ್ತದೆ. ಟೆಂಡರ್‌ನ ವಿವರವಾದ ದಾಖಲೆಯನ್ನು ಅಂತರ್ಜಾಲದ https://eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಆಸಕ್ತಿಯುಳ್ಳ ನೋಂದಾಯಿತ ಮಾನವ ಸಂಪನ್ಮೂಲ ಸೇವೆ ಒದಗಿಸುವ ಸಂಸ್ಥೆಯವರು ದಿನಾಂಕ: 04/02/2021 ರ ಸಂಜೆ 4.30 ಗಂಟೆಯೊಳಗಾಗಿ ತಮ್ಮ ಟೆಂಡರ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ದಿನಾಂಕ: 05/02/2021 ರ ಸಂಜೆ 5.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಕೆಯುಐಡಿಎಫ್‌ಸಿ-ಕೆಐಯುಡಬ್ಲ್ಯುಎಮ್‌ಐಪಿ
ಆರ್‌ಪಿಎಂಯು, ದಾವಣಗೆರೆ

ವಾಸಾಇ/ದಾವಣಗೆರೆ/595/ಎಂಸಿಎ/2020-21

**ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ.**

ಆಡಳಿತ ಕಚೇರಿ: 79/2, ರಜತ ಮಹೋತ್ಸವ ಕಟ್ಟಡ, ಪೂನಾ-ಬೆಂಗಳೂರು ರಸ್ತೆ, ದಾವಣಗೆರೆ. ದೂರವಾಣಿ ಸಂಖ್ಯೆ: 08192 270407/272572

**ಸ್ಥಿರಾಸ್ತಿಯ ಬಹಿರಂಗ ಹರಾಜು ಪ್ರಕಟಣೆ**

**ಸೆಕ್ಯೂರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002ರ ಅಡಿಯಲ್ಲಿ ದತ್ತವಾಗಿರುವ ಅಧಿಕಾರದಂತೆ.**

**ಸಾಲಗಾರರ ಹೆಸರು :** ಶ್ರೀ ತುಳಜಾಭವಾನಿ ಬಿಜಿನೆಸ್, ನಂ.6/198, "ಬಿ" ಬ್ಲಾಕ್, ಎಪಿಎಂಸಿ ಯಾರ್ಡ್, ದಾವಣಗೆರೆ-577003.
**ಜಾಮೀನುದಾರರು:** 1) ಶ್ರೀ ಕೆ.ಟಿ. ಗಣೇಶ್ ಬಿನ್ ಕೆ.ತಿಪ್ಪಣ್ಣ, ಡೋರ್ ನಂ.751/1, 4ನೇ ಮೇನ್ 2ನೇ ಕ್ರಾಸ್, ಕೆ.ಟಿ. ಜಂಬಣ್ಣ ಬಡಾವಣೆ, ದಾವಣಗೆರೆ.
2) ಶ್ರೀ ರವೀಂದ್ರ ಬಿನ್ ರಾಮಪ್ಪ, ಡೋರ್ ನಂ.135, ಬಸವರಾಜ್ ಪೇಟೆ,ದಾವಣಗೆರೆ.

**ಹರಾಜು ನಡೆಯುವ ಸ್ಥಳ :** ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ತಿಯ ಮುಂಭಾಗದಲ್ಲಿ.
**ಹರಾಜು ನಡೆಯುವ ದಿನಾಂಕ :** 22/01/2021.
**ಶುಕ್ರವಾರ ಬೆಳಿಗ್ಗೆ :** 11.30 ಘಂಟೆಗೆ.
**ಸ್ಥಿರಾಸ್ತಿಯ ಕಾಯ್ದಿಟ್ಟ ಮೊತ್ತ** :ರೂ. 31.85 ಲಕ್ಷಗಳು.

**ಸ್ಥಿರಾಸ್ತಿಯ ವಿವರ ಈ ಕೆಳಕಂಡಂತೆ:-**
1. ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ಆನೆಕೊಂಡ ಗ್ರಾಮದ ರೀ. ಸರ್ವೆ ನಂ.43/1 ಮತ್ತು 50ರಲ್ಲಿ ಬರತಕ್ಕ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟ ಸೈಟ್ ನಂ.49, 50, 51 ಮತ್ತು 70 ಇವುಗಳ ಡೋರ್ ನಂಬರ್ ಕ್ರಮವಾಗಿ 406/5-49, 406/5-50, 406/5-51 ಮತ್ತು 406/5-70.
2. ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ಆನೆಕೊಂಡ ಗ್ರಾಮದ ರೀ. ಸರ್ವೆ ನಂ.43/1 ಮತ್ತು 50ರಲ್ಲಿ ಬರತಕ್ಕ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟ ಸೈಟ್ ನಂ.1 ಡೋರ್ ನಂಬರ್ 406/1/1.
3. ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ಆನೆಕೊಂಡ ಗ್ರಾಮದ ರೀ. ಸರ್ವೆ ನಂ.43/1 ಮತ್ತು 50ರಲ್ಲಿ ಬರತಕ್ಕ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟ ಸೈಟ್ ನಂ.31 ಡೋರ್ ನಂಬರ್ 406/3/31.

**ಬಹಿರಂಗ ಹರಾಜಿನ ಷರತ್ತುಗಳು:** 1) ಹರಾಜಿನಲ್ಲಿ ಭಾಗವಹಿಸಲು ಇಚ್ಛೆವುಳ್ಳ ಬಿಡ್‌ದಾರರು ರೂ.25,000/- ಠೇವಣಿಯನ್ನು ತುಂಬಿ ಭಾಗವಹಿಸತಕ್ಕದ್ದು. 2)ಅಂತಿಮ ಯಶಸ್ವಿ ಬಿಡ್‌ದಾರರು ಹರಾಜು ಮೊತ್ತದ ಶೇಕಡಾ 25 ರಷ್ಟನ್ನು ಹರಾಜು ಸ್ಥಳದಲ್ಲಿಯೇ ತಕ್ಷಣವೇ ಅಧಿಕೃತ ಅಧಿಕಾರಿಗೆ ಪಾವತಿ ಮಾಡತಕ್ಕದ್ದು. ಉಳಿದ ಹರಾಜು ಮೊತ್ತವನ್ನು ಮಾರಾಟ ಧೃಢೀಕರಣದ ದಿವಸದಿಂದ 15ನೇ ದಿವಸದ ಒಳಗೆ ಅಧಿಕೃತ ಅಧಿಕಾರಿಗೆ ಪಾವತಿ ಮಾಡತಕ್ಕದ್ದು, ತಪ್ಪಿದ್ದಲ್ಲಿ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರು ಹರಾಜು ಮಾಡಲಾಗುವುದು. ಪೂರ್ವ ಖರೀದಿದಾರರಿಗೆ ಹರಾಜು ಆಸ್ತಿಯ ಮೇಲೆ ಯಾವುದೇ ತರಹದ ಅಧಿಕಾರ ಇರುವುದಿಲ್ಲ. 3) ಬಿಡ್ ಮೊತ್ತವನ್ನು ಒಪ್ಪುವ ಅಥವಾ ಯಾವುದೇ ಕಾರಣವನ್ನು ನೀಡದೇ ತಿರಸ್ಕರಿಸುವ ಅಧಿಕಾರವು ಅಧಿಕೃತ ಅಧಿಕಾರಿಗೆ ಇರುತ್ತದೆ. 4) ಅಧಿಕೃತ ಅಧಿಕಾರಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

ಸ್ಥಳ: ದಾವಣಗೆರೆ.
ದಿನಾಂಕ:16/12/2020.
ಸಹಿ/-
(ಎಂ. ಶಿವಲಿಂಗಸ್ವಾಮಿ)
ಅಧಿಕೃತ ಅಧಿಕಾರಿ ಹಾಗೂ ಪ್ರಧಾನ ವ್ಯವಸ್ಥಾಪಕರು

ನಮೂನೆ -XII ನಿಯಮ 14(3)

**ಚುನಾವಣಾ ಸೂಚನೆ**

**ಶ್ರೀ ಶಿವಕುಮಾರ ಸ್ವಾಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ. ದಾವಣಗೆರೆ. ಇದರ ಆಡಳಿತ ಮಂಡಳಿಗೆ ಮುಂದಿನ ಐದು (5) ವರ್ಷಗಳ ಅವಧಿಗೆ ಚುನಾವಣೆ ನಡೆಸಲು ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು, ದಾವಣಗೆರೆ ಜಿಲ್ಲೆ ದಾವಣಗೆರೆ ಇವರ ಆದೇಶ ಸಂಖ್ಯೆ :ಡಿಆರ್/ಡಿವಿಜಿ/ಜಿ.ಚು./ಆ.ಅ/ರಿಆನೇ/ಆಮಂ/206/2020-21 ದಿ: 13.11.2020ರನ್ವಯ ಸಂಘದ ಆಡಳಿತ ಮಂಡಳಿ ಚುನಾವಣೆಯನ್ನು ದಿನಾಂಕ : 07.02.2021ರ ಭಾನುವಾರದಂದು ಶ್ರೀ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯ ಅನುಭವ ಮಂಟಪ ದಾವಣಗೆರೆ ಇದರ ಆವರಣದಲ್ಲಿ ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 4.00 ಗಂಟೆವರೆಗೆ ನಿಗದಿಪಡಿಸಲಾಗಿದೆ ಹಾಗೂ ಸಂಘದ ನಿರ್ದೇಶಕರುಗಳ ಆಯ್ಕೆಗಾಗಿ ನಡೆಯಲಿರುವ ಚುನಾವಣೆಯ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.**

**ಚುನಾಯಿಸತಕ್ಕ ನಿರ್ದೇಶಕರುಗಳ ಒಟ್ಟು 13 ಸ್ಥಾನಗಳು. ಇದರಲ್ಲಿ ಸಾಮಾನ್ಯ -07, ಪರಿಶಿಷ್ಟ ಜಾತಿ-01, ಪರಿಶಿಷ್ಟ ಪಂಗಡ-01, ಹಿಂದುಳಿದ ವರ್ಗ ಪ್ರವರ್ಗ 'ಎ' -01 ಮತ್ತು 'ಬಿ'-01 ಹಾಗೂ ಮಹಿಳಾ ಮೀಸಲಾತಿ -02.**

**ಚುನಾವಣಾ ವೇಳಾಪಟ್ಟಿ**

| ಕ್ರ.ಸಂ. | ಚುನಾವಣಾ ಕಾರ್ಯಸೂಚಿ | ದಿನಾಂಕ, ವಾರ, ಸಮಯ | ವಿವರ ಮತ್ತು ಸ್ಥಳ |
|---|---|---|---|
| 1 | ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸ್ವೀಕರಿಸಲು ಆರಂಭದ ಮತ್ತು ಕೊನೆಯ ದಿನಾಂಕ | ದಿನಾಂಕ : 23.01.2021ನೇ ಶನಿವಾರದಿಂದ ದಿನಾಂಕ : 30.01.2021ರ ಶನಿವಾರದವರೆಗೆ. ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆಯವರೆಗೆ | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ/ಸಹಾಯಕ ರಿಟರ್ನಿಂಗ್ ಅಧಿಕಾರಿಗಳಿಗೆ |
| 2 | ರಿಟರ್ನಿಂಗ್ ಅಧಿಕಾರಿಗಳಿಂದ ನಾಮಪತ್ರಗಳ ಪರಿಶೀಲನೆ | ದಿನಾಂಕ : 31.01.2021ನೇ ಭಾನುವಾರ ಬೆಳಿಗ್ಗೆ 11 ರಿಂದ | ಸಂಘದ ಕಛೇರಿಯಲ್ಲಿ |
| 3 | ರಿಟರ್ನಿಂಗ್ ಅಧಿಕಾರಿಗಳಿಂದ ಕ್ರಮಬದ್ಧವಾಗಿ ನಾಮನಿರ್ದೇಶನಗೊಂಡ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿನಾಂಕ : 31.01.2021ನೇ ಭಾನುವಾರ ನಾಮಪತ್ರಗಳ ಪರಿಶೀಲನೆ ನಂತರ | ಸಂಘದ ಸೂಚನಾ ಫಲಕದಲ್ಲಿ |
| 4 | ಸ್ಪರ್ಧಿಸಿರುವ ಅಭ್ಯರ್ಥಿಗಳಿಂದ ನಾಮಪತ್ರವನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ | ದಿನಾಂಕ : 01.02.2021ನೇ ಸೋಮವಾರ ಮಧ್ಯಾಹ್ನ 3.00 ಗಂಟೆಯೊಳಗೆ | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ/ ಸಹಾಯಕ ರಿಟರ್ನಿಂಗ್ ಅಧಿಕಾರಿಗಳಿಗೆ |
| 5 | ರಿಟರ್ನಿಂಗ್ ಅಧಿಕಾರಿಗಳಿಂದ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿ ಉಳಿದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿನಾಂಕ : 01.02.2021ನೇ ಸೋಮವಾರ ಮಧ್ಯಾಹ್ನ 3.00 ಗಂಟೆಯ ನಂತರ | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ |
| 6 | ರಿಟರ್ನಿಂಗ್ ಅಧಿಕಾರಿಗಳಿಂದ ಅವಶ್ಯವಿದ್ದಲ್ಲಿ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ಹಂಚಿಕೆ ಮಾಡುವುದು | ದಿನಾಂಕ : 01.02.2021ನೇ ಸೋಮವಾರ ಮಧ್ಯಾಹ್ನ 04.30 ಗಂಟೆಗೆ | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ |
| 7 | ಸ್ಪರ್ಧಿಸಿರುವ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣಾ ಚಿಹ್ನೆಯೊಂದಿಗೆ ಪ್ರಕಟಿಸುವುದು | ದಿನಾಂಕ : 03.02.2021ನೇ ಬುಧವಾರ ಬೆಳಿಗ್ಗೆ 11.00 ಗಂಟೆಗೆ | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ |
| 8 | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ 07.02.2021ನೇ ಭಾನುವಾರ ಬೆಳಿಗ್ಗೆ 09.00 ರಿಂದ ಮಧ್ಯಾಹ್ನ 4.00 ಗಂಟೆಯವರೆಗೆ. | ಶ್ರೀ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯ ಇದರ ಆವರಣದಲ್ಲಿ |
| 9 | ಮತಗಳ ಎಣಿಕೆ ದಿನಾಂಕ ಮತ್ತು ಸಮಯ | ದಿನಾಂಕ 07.02.2021ನೇ ಭಾನುವಾರ ಮತದಾನದ ನಂತರ | ಶ್ರೀ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯ ಇದರ ಆವರಣದಲ್ಲಿ |
| 10 | ರಿಟರ್ನಿಂಗ್ ಅಧಿಕಾರಿಗಳಿಂದ ಚುನಾವಣೆ ಫಲಿತಾಂಶ ಪ್ರಕಟಣೆ | ದಿನಾಂಕ 07.02.2021ನೇ ಭಾನುವಾರ ಮತ ಎಣಿಕೆ ನಂತರ | ಶ್ರೀ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯ ಇದರ ಆವರಣದಲ್ಲಿ |

**ಸೂಚನೆಗಳು :** 1. ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗದ ಸ್ಥಾನಗಳಿಗೆ ಸ್ಪರ್ಧಿಸುವ ಅಭ್ಯರ್ಥಿಯು ಸಕ್ಷಮ ಪ್ರಾಧಿಕಾರದಿಂದ ಜಾತಿ ಪ್ರಮಾಣ ಪತ್ರವನ್ನು ನಾಮಪತ್ರದೊಂದಿಗೆ ಲಗತ್ತಿಸತಕ್ಕದ್ದು. **(ಹಿಂದುಳಿದ ವರ್ಗದ ಸ್ಥಾನಗಳಿಗೆ ಸ್ಪರ್ಧಿಸುವ ಅಭ್ಯರ್ಥಿಯು ಸಕ್ಷಮ ಪ್ರಾಧಿಕಾರದಿಂದ ಚುನಾವಣಾ ಉದ್ದೇಶಕ್ಕಾಗಿ ನೀಡುವ ಜಾತಿ ಪ್ರಮಾಣ ಪತ್ರವನ್ನು ನಾಮಪತ್ರದೊಂದಿಗೆ ಲಗತ್ತಿಸಿದಲ್ಲಿ ಮಾತ್ರ ಅಂಗೀಕರಿಸಲಾಗುವುದು)**
2. ನಾಮಪತ್ರ ಸಲ್ಲಿಸುವಾಗ ಚುನಾವಣಾ ಠೇವಣಿ ಬಾಬ್ತು ರೂ. 2000.00ಗಳನ್ನು ನಗದಾಗಿ ಅಥವಾ ಪೇ ಆರ್ಡರ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಸಲ್ಲಿಸತಕ್ಕದ್ದು. ಪರಂತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಮೇಲೆ ನಮೂದಿಸಿದ ಚುನಾವಣಾ ಠೇವಣಿಯಲ್ಲಿ ಶೇ. 50ರಷ್ಟು ವಿನಾಯಿತಿ ಇರುತ್ತದೆ.
3. ಹೆಚ್ಚಿನ ವಿವರಗಳಿಗಾಗಿ ಸಂಘದ ಕಾರ್ಯದರ್ಶಿಯವರನ್ನು ಸಂಪರ್ಕಿಸಬಹುದು.

**ಸ್ಥಳ : ದಾವಣಗೆರೆ**
**ದಿನಾಂಕ : 20.01.2021**

ಸಹಿ/- **(ಜಯಪ್ರಕಾಶ್ ಕೆ.ಜಿ.)** ರಿಟರ್ನಿಂಗ್ ಅಧಿಕಾರಿ,
ಶ್ರೀ ಶಿವಕುಮಾರ ಸ್ವಾಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ದಾವಣಗೆರೆ. ಹಾಗೂ
ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ ದಾವಣಗೆರೆ ಜಿಲ್ಲೆ, ದಾವಣಗೆರೆ.

# ಕುಂದವಾಡ ಕೆರೆ ಅಭಿವೃದ್ಧಿ ಏಕೆ ? ಹೇಗೆ ?...

**(3ನೇ ಪುಟದಿಂದ)** ಹಾಕಿ ನಂತರ ಮರಳನ್ನು ಹರಡುವುದು, ಅದರ ಮೇಲೆ ವಿವಿಧ ಗ್ರೇಡ್‌ನ ಜಲ್ಲಿಯನ್ನು ಉಪಯೋಗಿಸಿ ಫಿಲ್ಟರ್ ಮಿಡಿಯ ಒದಗಿಸುವುದು, ಇದರ ಮೇಲೆ ಇರುವ ಕಲ್ಲನ್ನು ಮತ್ತು ಹೊಸ ಕಲ್ಲನ್ನು ಉಪಯೋಗಿಸಿ ಕಲ್ಲು ಕಟ್ಟಡ ಮಾಡುವುದು.

ಏರಿಯ ಮೇಲೆ ಹೊಸ ಗೊರಸು ಮಣ್ಣನ್ನು ಹಾಕಿ ಓಡಾಡುವ ಹಾದಿ, ಸೈಕಲ್ ಟ್ರ್ಯಾಕ್ ಮಾಡಲಾಗುವುದು. ಒಟ್ಟು 16.61 ಮೀಟರ್ ಅಗಲ ಏರಿಯ ಮೇಲ್ಭಾಗದಲ್ಲಿ ಇರುತ್ತದೆ. ಪ್ರಮುಖವಾಗಿ ಈಗ ಇರುವ ಮರ, ಗಿಡಗಳನ್ನು ಉಳಿಸಿಕೊಳ್ಳುವುದು ಇದರಲ್ಲಿನ ಆದ್ಯ ಕರ್ತವ್ಯವಾಗಿದೆ.

ಏರಿಯ ಮುಂಭಾಗದಿಂದ (2m + 0.20 (kerb) ) ಇರುವ ಮರಗಳಿಗೆ ಸುತ್ತಲೂ ಜಾಗವನ್ನು ಬಿಟ್ಟು, 2.5 ಮೀಟರ್ ಅಗಲದ ಸೈಕಲ್ ಟ್ರ್ಯಾಕ್ ನಿರ್ಮಿಸಲಾಗುತ್ತದೆ. ಸೈಕಲ್ ಟ್ರ್ಯಾಕ್ ಗೊರಸು ಮಣ್ಣಿನ ಮೇಲ್ಭಾಗದಲ್ಲಿ ಜಲ್ಲಿಕರಣ ಮಾಡಿ ಡಾಂಬರಿಕರಣ ಮಾಡಲಾಗತ್ತದೆ. ನಂತರ 0.20 (kerb) +4.81+ 0.20 (kerb) = 5.41 ಮೀಟರ್ ನಡೆದಾಡುವ ಹಾದಿ (Walking path) ಮಾಡಲಾಗುತ್ತಿದೆ. ನಂತರ ಕೆರೆಯ ಒಳಭಾಗದಲ್ಲಿ ಈಗ ಇರುವ ಮರಗಳನ್ನು ಉಳಿಸಿಕೊಳ್ಳಲು ಏರಿಯ ಸುತ್ತಲೂ 1.5 ಮೀಟರ್ ಅಗಲವಾಗಿ ಜಾಗವನ್ನು ಬಿಡಲಾಗಿದೆ. ನಂತರ 2.5ಮೀ ನಡೆದಾಡುವ ಹಾದಿ ನಿರ್ಮಿಸಲಾಗುತ್ತಿದೆ. ಅದಾದ ನಂತರ 0.2 mm (kerb) + 2.5m + 0.2m = 2.9 m ಹೂವಿನ ಹಾಸಿಗೆ ನಿರ್ಮಿಸಲಾಗುತ್ತದೆ. ಮಧ್ಯಂತರಗಳಲ್ಲಿ ಕುಳಿತುಕೊಳ್ಳಲು ಸಾದರಹಳ್ಳಿ ಕಲ್ಲಿನ ಬೆಂಚ್‌ಗಳನ್ನು ಹಾಕಲಾಗುತ್ತದೆ. ನಂತರ ಸುತ್ತಲು ಯಾರೂ ಕೆರೆಯ ನೀರಿಗೆ ಇಳಿಯದಂತೆ ಮಾಡಲು ಸುಂದರವಾದ ಬೇಲಿಯನ್ನು ನಿರ್ಮಿಸಲಾಗುತ್ತದೆ. ಇದರ ಜೊತೆಯಲ್ಲಿ ಮಣ್ಣಿನ ಮೇಲೆ 24 watts 348 LED (ಹುಲ್ಲಿನ ಹೊದಿಕೆ) ಮಾಡಲಾಗುತ್ತದೆ. ಕಸ ಹಾಕಲು UV Stabilized Polyethelene ಕಸದ ತೊಟ್ಟಿಗಳನ್ನು ಇಡಲಾಗುತ್ತದೆ. ಹೊಸ kerb Stoneಗಳನ್ನು ಹಾಕುವುದರೊಂದಿಗೆ ಏರಿಯನ್ನು ಸಂಪೂರ್ಣವಾಗಿ ಅಲಂಕರಿಸಲಾಗುತ್ತದೆ.

ಈ ಮೊದಲು ಸೋಲಾರ ಬೀದಿ ದೀಪಗಳನ್ನು ಅಳವಡಿಸಲಾಗಿದ್ದು, ಅವುಗಳು ಸಂಪೂರ್ಣವಾಗಿ ಹಾಳಾಗಿದ್ದು, ಕಾರ್ಯನಿರ್ವಹಿಸುತ್ತಿರುವುದಿಲ್ಲ. ಆದ ಕಾರಣ ಹೊಸದಾಗಿ 24 watts 348 LED ಬೀದಿ ದೀಪಗಳನ್ನು ಹಾಕಲಾಗುತ್ತದೆ. HDPE ಪೈಪುಗಳ ಮೂಲಕ HDPEನ್ನು ಅಳವಡಿಸಲಾಗುತ್ತಿದೆ. ರಾತ್ರಿ ಪೂರ್ತಿ ಬೆಳಕು ಇರುವುದರಿಂದ ಯಾವುದೇ ರೀತಿಯ ಅನೈತಿಕ ಚಟುವಟಿಕೆಗಳು ನಡೆಯದಂತೆ ತಡೆಯಲು ಸಾಧ್ಯವಾಗುತ್ತದೆ. ವಿಶೇಷವಾಗಿ ಕೆರೆಯ ಏರಿಯ ಹೊರಭಾಗದಲ್ಲಿ ಮಳೆ ನೀರು ಚರಂಡಿಗಳನ್ನು ನಿರ್ಮಿಸಲಾಗುತ್ತಿದೆ. ಚರಂಡಿಯನ್ನು ಕಾಂಕ್ರೀಟ್ ಸ್ಲಾಬ್‌ಗಳಿಂದ ಮುಚ್ಚಲಾಗುವುದು ಮತ್ತು ಚರಂಡಿಯ ಸುತ್ತಲೂ ಕಾಂಕ್ರೀಟ್ ಪ್ಲಾಂಗಿಗ್ ಮಾಡಲಾಗುತ್ತಿದೆ ಮತ್ತು ಬೇರೆ ಯಾವುದೇ ಕಾಂಕ್ರೀಟೀಕರಣ ಇರುವುದಿಲ್ಲ.

ಮೆ॥ ಸೌಹಾರ್ದ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು. ಇವರು ಈ ಕಾಮಗಾರಿಯ ಗುತ್ತಿಗೆಯನ್ನು ಪಡೆದಿರುತ್ತಾರೆ. 12 ತಿಂಗಳ ಅವಧಿಯಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂಬ ಕರಾರಿನೊಂದಿಗೆ ಗುತ್ತಿಗೆ ನೀಡಿರುತ್ತದೆ. ಯಶಸ್ವಿಯಾಗಿ ಈ ಕಾಮಗಾರಿ ಪೂರ್ಣಗೊಳ್ಳಲೆಂದು ಹಾರೈಸೋಣ.

# ಖಾತೆ ಕ್ಯಾತೆ

**(1ನೇ ಪುಟದಿಂದ)** ಸಚಿವರುಗಳು ಕಣ್ಣಿಟ್ಟಿದ್ದರು. ಆದರೆ ಆ ಎಲ್ಲಾ ಖಾತೆಗಳನ್ನು ಮುಖ್ಯಮಂತ್ರಿಯವರು ತಮ್ಮ ಬಳಿ ಇಟ್ಟುಕೊಂಡಿದ್ದಾರೆ.

ಇನ್ನು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಕಳೆದುಕೊಂಡ ಕೆ. ಗೋಪಾಲಯ್ಯ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಕಳೆದುಕೊಂಡ ನಾರಾಯಣಗೌಡ ಮತ್ತು ಮಾಧು ಸ್ವಾಮಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅದರಲ್ಲೂ ಗೋಪಾಲಯ್ಯ ಮತ್ತು ನಾರಾಯಣಗೌಡ ತಮ್ಮ ಅಸಮಾಧಾನವನ್ನು ಮುಖ್ಯಮಂತ್ರಿಯವರ ಬಳಿ ತೋಡಿಕೊಂಡು, ಖಾತೆ ಬದಲಾವಣೆಗೆ ಪಟ್ಟು ಹಿಡಿದಿದ್ದಾರೆ.

ಇತ್ತೀಚೆಗೆ ಸಂಪುಟ ಸೇರಿದ ಹೊಸಕೋಟೆ, ಎಂಟಿಬಿ ನಾಗರಾಜ, ತಮಗೆ ಅಬಕಾರಿ ಇಲಾಖೆ ಹೊಣೆಗಾರಿಕೆ ಬೇಡ, ಜನಪರ ಕೆಲಸ ಮಾಡುವ ಅಧಿಕಾರ ನೀಡಿ ಎಂದು ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದಾರೆ.

## ಸಚಿವರಿಗೆ ಖಾತೆ ಹಂಚಿಕೆಯ ಪಟ್ಟಿ ಇಂತಿದೆ

| | |
|---|---|
| ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ | : ಹಣಕಾಸು, ಇಂಧನ, ಮೂಲಭೂತ ಸೌಕರ್ಯ, ಬೆಂಗಳೂರು ಅಭಿವೃದ್ಧಿ, ಡಿಪಿಎಆರ್, ಸಂಪುಟ ವ್ಯವಹಾರ, ಗುಪ್ತಚರ, ಯೋಜನಾ ಇಲಾಖೆ |
| ಉಮೇಶ್ ಕತ್ತಿ | : ಆಹಾರ ಮತ್ತು ನಾಗರಿಕ ಪೂರೈಕೆ |
| ಬಸವರಾಜ್ ಬೊಮ್ಮಾಯಿ | : ಗೃಹ ಹಾಗೂ ಕಾನೂನು ಮತ್ತು ಸಂಸದೀಯ |
| ಸಿ.ಪಿ.ಯೋಗೇಶ್ವರ್ | : ಸಣ್ಣ ನೀರಾವರಿ |
| ಆರ್. ಶಂಕರ್ | : ಪೌರಾಡಳಿತ ಮತ್ತು ರೇಷ್ಮೆ |
| ಎಂಟಿಬಿ ನಾಗರಾಜ್ | : ಅಬಕಾರಿ |
| ಮುರುಗೇಶ್ ನಿರಾಣಿ | : ಗಣಿಗಾರಿಕೆ |
| ಎಸ್. ಅಂಗಾರ | : ಮೀನುಗಾರಿಕೆ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆ |
| ಅರವಿಂದ ಲಿಂಬಾವಳಿ | : ಅರಣ್ಯ |
| ನಾರಾಯಣಗೌಡ | : ಯುವಜನ, ಕ್ರೀಡೆ, ಹಜ್ ಮತ್ತು ವಕ್ಫ್ |
| ಕೆ. ಗೋಪಾಲಯ್ಯ | : ತೋಟಗಾರಿಕೆ ಮತ್ತು ಸಕ್ಕರೆ |
| ಆನಂದ್ ಸಿಂಗ್ | : ಪ್ರವಾಸೋದ್ಯಮ, ಪರಿಸರ |
| ಶಿವರಾಂ ಹೆಬ್ಬಾರ್ | : ಕಾರ್ಮಿಕ |
| ಪ್ರಭು ಚವ್ಹಾಣ್ | : ಪಶುಸಂಗೋಪನೆ |
| ಕೆ.ಸುಧಾಕರ್ | : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ |
| ಜೆ.ಸಿ. ಮಾಧುಸ್ವಾಮಿ | : ವೈದ್ಯಕೀಯ ಶಿಕ್ಷಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| ಸಿ.ಸಿ. ಪಾಟೀಲ್ | : ಸಣ್ಣ ಕೈಗಾರಿಕೆ, ವಾರ್ತೆ |
| ಕೋಟ ಶ್ರೀನಿವಾಸ ಪೂಜಾರಿ | : ಮುಜರಾಯಿ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ |

# ಭದ್ರಾ ಯೋಜನೆಗೆ 2.4 ಟಿಎಂಸಿ ನೀರು




**(1ನೇ ಪುಟದಿಂದ)** ನಿ.ನೌ.ಸಂಘದ ತಾಲ್ಲೂಕು ಅಧ್ಯಕ್ಷ ಎ.ಪಾಲಯ್ಯ ಮಾತನಾಡಿ, ತಾಲ್ಲೂಕಿನಲ್ಲಿ 1600 ಕ್ಕೂ ಅಧಿಕ ನಿವೃತ್ತ ನೌಕರರಿದ್ದು, ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಅವರಿಗೆ ಆರೋಗ್ಯ ಸಂಜೀವಿನಿ ಯೋಜನೆ ಸೇರಿದಂತೆ ಇತರೆ ಸೌಲಭ್ಯಗಳನ್ನು ಶೀಘ್ರ ಒದಗಿಸಬೇಕು ಎಂದು ಮನವಿ ಮಾಡಿದರು.

ನೌಕರರು ನಿವೃತ್ತಿಯ ನಂತರ ನಿರುತ್ಸಾಹಗೊಳ್ಳುತ್ತಾರೆ. ಇನ್ನು ಕೆಲ ಇಲಾಖೆಗಳಲ್ಲಿ ಅವರಿಗೆ ಗೌರವ ನೀಡದೆ ಬೀಳ್ಕೊಡುತ್ತಾರೆ. ಈ ದೆಸೆಯಿಂದ ಆತ್ಮಸ್ಥೈರ್ಯ ತುಂಬಲು ಸಾಂಸ್ಕೃತಿಕ ಹಾಗೂ ಕ್ರೀಡೆಗಳನ್ನು ಆಯೋಜಿಸಿ ವೇದಿಕೆಗಳಲ್ಲಿ 75 ವರ್ಷ ಪೂರೈಸಿದವರಿಗೆ ಸನ್ಮಾನಿಸಿ ಗೌರವಿಸಲಾಗುವುದು ಎಂದರು.

ಜಿಪಂ ಸದಸ್ಯ ಎಸ್.ಕೆ. ಮಂಜುನಾಥ್, ಪ.ಪಂ. ಅಧ್ಯಕ್ಷ ಆರ್.ತಿಪ್ಪೇಸ್ವಾಮಿ, ನೌಕರರ ಸಂಘದ ಅಧ್ಯಕ್ಷ ಅಜ್ಜಪ್ಪ ನಾಡಿಗರ, ಎಸ್.ಬಿ.ಐ. ಬ್ಯಾಂಕ್ ವ್ಯವಸ್ಥಾಪಕ ಕೃಷ್ಣರಾಜ್, ಬಿಇಓ ವೆಂಕಟೇಶ್, ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ಸಿ.ತಿಪ್ಪೇಸ್ವಾಮಿ, ಸಂಘದ ಗೌರವಾಧ್ಯಕ್ಷ ಓಂಕಾರಪ್ಪ, ಪ್ರಧಾನ ಕಾರ್ಯದರ್ಶಿ ಕೃಷ್ಣಪ್ಪ, ಪದಾಧಿಕಾರಿಗಳಾದ ನಾರಪ್ಪ, ಬಸವನಗೌಡ, ನಜೀರ್ ಅಹಮ್ಮದ್. ಟಿ.ಕೆ. ಮಂಜುನಾಥ್, ಪಿ.ಮಲ್ಲಿಕಾರ್ಜುನ್, ಮಹಮ್ಮದ್ ಇಸ್ಮಾಯಿಲ್ ಸಾಬ್, ವಸಂತರೆಡ್ಡಿ, ಚಂದ್ರಶೇಖರ್, ಬಸವರಾಜಪ್ಪ, ಹುಚ್ಚಲಿಂಗಯ್ಯ, ಸತ್ಯಪ್ಪ, ಸುಧಾದೇವಿ, ಉಮಾದೇವಿ, ಶಿಖರಗೌಡ ಮುಂತಾದವರು ಭಾಗವಹಿಸಿದ್ದರು.

# ಅಂಬಿಗರ ಚೌಡಯ್ಯ ಜಯಂತಿ ಸರಳ ಆಚರಣೆ



ಹರಿಹರ, ಜ21- ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಇಂದು ಆಚರಿಸಲಾಯಿತು. ಈ ಸಂದರ್ಭದಲ್ಲಿ ತಹಶೀಲ್ದಾರ ಕೆ. ಬಿ. ರಾಮಚಂದ್ರಪ್ಪ, ಸಿಬ್ಬಂದಿಗಳಾದ ಉಮೇಶ್, ಜಗದೀಶ್, ಮಂಜುನಾಥ್, ಶ್ರೀನಿವಾಸ್ ಷರೀಫ್ ಸಾಬ್, ಸಂಗೀತಾ, ಭಾರತಿ ಮುಂತಾದವರು ಹಾಜರಿದ್ದರು.

# ಜಲ ಜೀವನ್ ಮಿಷನ್ ಗ್ರಾಮೀಣರಿಗೆ ಹೊರೆ

**(1ನೇ ಪುಟದಿಂದ)** ದುಬಾರಿಯಾಗಲಿದ್ದು, ಗ್ರಾಮೀಣ ಪ್ರದೇಶದ ಜನರು ನೀರಿಗಾಗಿಯೇ ದುಡಿಯಬೇಕಾದ ಪರಿಸ್ಥಿತಿ ಎದುರಾಗಲಿದೆ ಎಂಬ ಆತಂಕ ವ್ಯಕ್ತಪಡಿಸಿದರಲ್ಲದೇ, ಗ್ರಾಮೀಣದಲ್ಲಿ ಈ ಯೋಜನೆಯಲ್ಲಿ ರಿಯಾಯಿತಿ ನೀಡುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕೆಂದರು. ಇದಕ್ಕೆ ಧ್ವನಿಗೂಡಿಸಿದ ಸದಸ್ಯೆ ಆಶಾ ಮುರುಳಿ, ಮುರುಗೇಂದ್ರಪ್ಪ ಮತ್ತಿತರರು, ರಸ್ತೆಗಳನ್ನು ಕಿತ್ತು ಹೊಸದಾಗಿ ಪೈಪ್ ಲೈನ್ ಸಂಪರ್ಕ ಕಲ್ಪಿಸಲು ಪ್ರತಿ ಮೀಟರ್ ಅಳವಡಿಕೆಗೆ 15 ಸಾವಿರ ರೂ ವೆಚ್ಚವಾಗುತ್ತದೆ. ಇದು ಗ್ರಾಮೀಣರಿಗೆ ಅನಾನುಕೂಲ ಎಂದು ಆಕ್ಷೇಪಿಸಿದರು.

ಕುಡಿಯುವ ನೀರು ಸರಬರಾಜು ಇಲಾಖೆಯ ಇಂಜಿನಿಯರ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶೇ. 45ರಷ್ಟು ತಲಾ ಅನುದಾನದ ಜೊತೆಗೆ ಗ್ರಾಮ ಪಂಚಾಯತಿಯ ಶೇ. 10ರಷ್ಟು ಜನರ ವಂತಿಕೆ ಅನುದಾನ ಸೇರಿದ್ದು, ಹೊರೆಯಾಗದು. ಭವಿಷ್ಯದಲ್ಲಿ ನೀರು ಸಂರಕ್ಷಿಸುವ ಸಲುವಾಗಿ ಈ ಯೋಜನೆ ಜಾರಿಗೆ ಬಂದಿದೆ. ಜಾನುವಾರುಗಳಿಗೆ ನೀರಿನ ವ್ಯವಸ್ಥೆಗಾಗಿ ಪ್ರತ್ಯೇಕ ತೊಟ್ಟಿ ನಿರ್ಮಾಣ ಮಾಡಿಕೊಡಲಾಗುವುದು. ಶುಲ್ಕ ಪಾವತಿಸಲಾಗದ ಕುಟುಂಬಗಳಿಗೆ ರಿಯಾಯಿತಿ ನೀಡಲು ಯೋಜನೆಯಲ್ಲಿ ಅವಕಾಶ ಇದೆ ಎಂದರು.

**ಸಬ್ ರಿಜಿಸ್ಟರ್ ಕಚೇರಿಯಲ್ಲಿನ ಅವ್ಯವಸ್ಥೆಗೆ ಅಸಮಾಧಾನ:** ರಾಜ್ಯದಲ್ಲೇ ಅತ್ಯಂತ ಹೆಚ್ಚು ಆದಾಯ ತಂದುಕೊಡುವ ತಾಲ್ಲೂಕು ವ್ಯಾಪ್ತಿಯ ದಾವಣಗೆರೆಯ ಸಬ್ ರಿಜಿಸ್ಟರ್ ಕಚೇರಿಗೆ ಪ್ರತಿ ದಿನ ಸಾರ್ವಜನಿಕರು, ವೃದ್ಧರು, ಅಂಗವಿಕಲರು, ರೈತರು ಹೀಗೆ ಸಾವಿರಾರು ಸಂಖ್ಯೆಯಲ್ಲಿ ಕಚೇರಿಗೆ ನಾನಾ ಕೆಲಸದ ನಿಮಿತ್ತ ಆಗಮಿಸಿದಾಗ ನೀರು, ಆಸನ ಮತ್ತು ನೆರಳಿನ ವ್ಯವಸ್ಥೆ ಸೇರಿದಂತೆ ಕನಿಷ್ಠ ಮೂಲಭೂತ ಸೌಕರ್ಯ ಇಲ್ಲದೆ ಅವ್ಯವಸ್ಥೆಯ ಆಗರವಾಗಿದೆ. ಇನ್ನೂ ಹಳೇ ಕಾಲದ ಕಂಪ್ಯೂಟರ್ ಇದ್ದು, ಸರ್ವರ್ ಸಮಸ್ಯೆ ಉದ್ಭವಿಸುತ್ತಿದ್ದು, ಕೆಲಸ ಕಾರ್ಯ ವಿಳಂಬ ಮಾಡಲಾಗುತ್ತಿದೆ. ಜನರು ದಿನಗಟ್ಟಲೇ ಕಾಯಬೇಕಾಗಿದೆ. ಎಂದು ಪಂಚಾಯತ್ ಸದಸ್ಯ ಮುರುಗೇಂದ್ರಪ್ಪ ಅಸಮಾಧಾನ ವ್ಯಕ್ತಪಡಿಸಿದರಲ್ಲದೇ, ಈ ಬಗ್ಗೆ ಕ್ರಮಕ್ಕೆ ಸರ್ಕಾರಕ್ಕೆ ಪತ್ರ ಬರೆಯುವಂತೆ ಒತ್ತಾಯಿಸಿದರು.

ಬಹುತೇಕ ಸದಸ್ಯರು ಇದಕ್ಕೆ ಧ್ವನಿಗೂಡಿಸಿ, ನೋಂದಣಾಧಿಕಾರಿಯನ್ನು ಸಭೆಗೆ ಕರೆಯಿಸಿ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತೆ ಸೂಚಿಸುವಂತೆ ಆಗ್ರಹಿಸಿದರು.

ತಾ.ಪಂ. ಸಿಇಓ ದಾರುಕೇಶ್ ಮಾತನಾಡಿ, ಸರ್ವರ್ ಸಮರ್ಪಕವಾಗಿ ಕೆಲಸ ನಿರ್ವಹಿಸಲು ಬಿಎಸ್‌ಎನ್‌ಎಲ್‌ನಲ್ಲೇ ಬಿಬಿಎಂಎಲ್ ವಿಭಾಗ ಪ್ರತ್ಯೇಕವಾಗಿದ್ದು, ಅದು ಸರ್ವರ್ ನಿರ್ವಹಣೆ ಮಾಡಲಿದ್ದು, ಮುಂದಿನ ದಿನಗಳಲ್ಲಿ ಈ ಸಮಸ್ಯೆ ಪರಿಹಾರವಾಗುತ್ತದೆ. ಈ ಬಗ್ಗೆ ಅಧಿಕಾರಿ ಕರೆಸಿ ಕ್ರಮಕ್ಕೆ ಸೂಚಿಸಲಾಗುವುದೆಂದರು.

**ಆರ್‌ಟಿಇ ಅಡಿ ಮಕ್ಕಳಿಗೂ ಶುಲ್ಕ ಪಾವತಿಗೆ ಒತ್ತಡ:** ಆರ್‌ಟಿಇ ಅಡಿ ಶಾಲೆಗೆ ದಾಖಲಾದ ಮಕ್ಕಳ ಪೋಷಕರಿಗೆ ಶುಲ್ಕ ಭರಿಸುವಂತೆ ಕೆಲ ಖಾಸಗಿ ಶಾಲೆಗಳಲ್ಲಿ ಒತ್ತಡ ಹಾಕಲಾಗುತ್ತಿದೆ. ಶುಲ್ಕ ಪಾವತಿ ಮಾಡುವವರೆಗೂ ತರಗತಿಗೆ ಸೇರಿಸುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದು ನನಗೂ ಸ್ವತಃ ಅನುಭವವಾಗಿದೆ. ಇಂತಹ ಶಾಲೆಗಳ ವಿರುದ್ಧ ಕ್ರಮ ಜರುಗಿಸುವಂತೆ ಸದಸ್ಯೆ ಆಶಾ ಮುರುಳಿ ಶಿಕ್ಷಣ ಇಲಾಖೆಗೆ ಒತ್ತಾಯಿಸಿದರು.

ದಾವಣಗೆರೆ ದಕ್ಷಿಣ ವಲಯ ಶಿಕ್ಷಣಾಧಿಕಾರಿ ನಿರಂಜನಮೂರ್ತಿ ಮಾತನಾಡಿ, ಆರ್‌ಟಿಇ ಮಕ್ಕಳ ಪೋಷಕರು ಶುಲ್ಕ ಭರಿಸುವಂತಿಲ್ಲ. ಸರ್ಕಾರವೇ ಶುಲ್ಕ ನೀಡುತ್ತದೆ. ಒಂದು ವೇಳೆ ಶಾಲೆಯವರು ಈ ರೀತಿ ಮಾಡಿದ್ದಲ್ಲಿ ಅವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು.

ಖಾಸಗಿ ಶಾಲೆಗಳು ಮಕ್ಕಳಿಗೆ ಪೂರ್ಣ ಶುಲ್ಕ ಕಟ್ಟುವಂತೆ ಒತ್ತಡ ಹಾಕುವಂತಿಲ್ಲ. ಶಿಕ್ಷಣ ಸಚಿವ ಸುರೇಶ್ ಕುಮಾರ್ ಅವರು ಈ ವಿಚಾರವಾಗಿ ತಂಡ ರಚನೆ ಮಾಡಿದ್ದು, ಶುಲ್ಕ ನಿಗದಿ ಬಗ್ಗೆ ಒಂದೆರಡು ದಿನಗಳಲ್ಲಿ ನಿರ್ಧಾರ ಕೈಗೊಳ್ಳಲಿದ್ದಾರೆ. ನಂತರ ಈ ಬಗ್ಗೆ ಎಲ್ಲ ಶಾಲೆಗಳಿಗೆ ಸುತ್ತೋಲೆ ಹೊರಡಿಸಲಾಗುವುದೆಂದರು.

ತೋಟಗಾರಿಕೆ ಇಲಾಖೆ ಅಧಿಕಾರಿ ಶಶಿಕಲಾ, ರೇಷ್ಮೆ ಇಲಾಖೆ ಅಧಿಕಾರಿ ಮಂಜುನಾಥ ಸೇರಿದಂತೆ ಇತರೆ ಇಲಾಖೆಗಳ ಅಧಿಕಾರಿಗಳು ಯೋಜನೆಗಳ ಮಾಹಿತಿ ನೀಡಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಮೀನಾ ಶ್ರೀನಿವಾಸ್, ಸ್ಥಾಯಿ ಸಮಿತಿ ಅಧ್ಯಕ್ಷೆ ಮಂಜುಳಾ ಅಣಬೇರು ಶಿವಮೂರ್ತಿ, ಸದಸ್ಯರಾದ ಆಲೂರು ಲಿಂಗರಾಜ್, ಎಂ. ಮಂಜಪ್ಪ ಚರ್ಚೆಯಲ್ಲಿ ಭಾಗವಹಿಸಿದ್ದರು.

# ತೆಲಂಗಾಣದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ

**(1ನೇ ಪುಟದಿಂದ)** ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮೀಸಲಾತಿ ಕಲ್ಪಿಸುವ ಅಗತ್ಯವಿದೆ.

ಈಗಾಗಲೇ ಮೀಸಲಾತಿ ಸೌಲಭ್ಯ ಅನುಭವಿಸುತ್ತಿರುವವರಿಗೆ, ಆ ಸೌಲಭ್ಯ ಮುಂದುವರೆಸುತ್ತಲೇ ಆರ್ಥಿಕವಾಗಿ ಹಿಂದುಳಿದವರಿಗೆ ಸೌಲಭ್ಯ ನೀಡುತ್ತೇವೆ ಎಂದು ಚಂದ್ರಶೇಖರ್ ರಾವ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಪ್ರಸಕ್ತ ಶೇ.50ರ ಮೀಸಲಾತಿ ಇದೆ. ಹೆಚ್ಚುವರಿ ಮೀಸಲಾತಿಯಿಂದಾಗಿ ಒಟ್ಟು ಮೀಸಲಾತಿ ಪ್ರಮಾಣ ಶೇ.60ಕ್ಕೆ ತಲುಪಲಿದೆ.

## ಶ್ರೀ ಶಿವಕುಮಾರ ಸ್ವಾಮೀಜಿಯವರಿಗೆ ನಮನ

ಎಂಥ ಜೀವನ ಅದೆಂಥ ಸಾಧನೆ
ಸಂತರೆಂದರೆ ಇವರೇನೆ
ಚಿಂತಿಸಿ ಸಕಲರ ಏಳಿಗೆಯನ್ನೇ
ಸತತ ದುಡಿದವರಿವರೇನೆ

ನೂರಾಹನ್ನೊಂದು ವರುಷದ ಬದುಕು
ಪೂರಾ ಸಾರ್ಥಕತೆಯ ಬದುಕು
ನೂರಾರು ಸಾವಿರ ಶಿಷ್ಯವೃಂದಕು
ತಾರಾಬಲವಾಗಿದ್ದರು ನಿಜಕು

ಬಡವರ ಕಷ್ಟಕೆ ಕಾರಣ ಅರಿಯುತ
ತಡಮಾಡದೆ ಹಸಿವನು ನೀಗಿಸುತ
ಹೊಡೆದೋಡಿಸಿ ಅಜ್ಞಾನವ ಕಳೆಯುತ
ನೀಡಿದರು ವಿದ್ಯೆಯ ಎಬ್ಬಿಸುತ

ಮಕ್ಕಳ ಜವಾಬ್ದಾರಿಯನು ಹೊತ್ತು
ಅಕ್ಕರೆಯಲಿ ಶಿಸ್ತನು ಬಿತ್ತು
ಚಿಕ್ಕ ವಯಸ್ಸಿನಲೆ ತಿದ್ದಿ ತೀಡುತ
ಹಕ್ಕಿಗಳಂತೆ ಹಾರಿಸುತ

ಇಲ್ಲಿ ಕಲಿತವರು ಸತ್ಪ್ರಜೆಗಳಾದರು
ಎಲ್ಲಾ ರೀತಿಲಿ ಉತ್ತಮರಾದರು
ಸಲ್ಲದ ನಡತೆಯ ಬಿಟ್ಟವರಾದರು
ಗೆಲ್ಲುವ ಛಲವನು ತೊಟ್ಟವರಾದರು

ವಿದ್ಯಾಲಯಗಳನೇಕ ತೆಗೆದರು
ಹೃದಯದಿ ಆಶೀರ್ವದಿಸಿದರು
ಅದಮ್ಯ ತಳಹದಿಯ ಹಾಕಿದರು
ಉದಾರ ಗುರುಗಳು ಬೆಳೆಸಿದರು

ಇವರೇ ನಮ್ಮ ಸಿದ್ಧಗಂಗಾ ಶ್ರೀಗುರು
ಶಿವಕುಮಾರ ಸ್ವಾಮೀಜಿ ಯವರು
ಭವದ ಬಂಧನಗಳ ಮುಗಿಸಿದರು
ಬವಣೆಯ ಕಳೆದ ಕಲ್ಪತರು

ನಮಿಸುವೆ ನಿಮಗೆ ಗುರುಶ್ರೇಷ್ಠರೆ
ಅಮಿತ ಸುಜ್ಞಾನದ ಆಗರರೆ
ಸಮವಿಲ್ಲದ ಶಕ್ತಿಯ ಸಾಗರರೆ
ಅಮರರಾದ ಯತಿಪುಂಗವರೆ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್


**ಸೈಟುಗಳು ಮಾರಾಟಕ್ಕಿವೆ ಮನೆ ಬಾಡಿಗೆಗೆ ಇವೆ**
ವಿದ್ಯಾನಗರ, ವಿನಾಯಕ ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ ಎಸ್.ಎಸ್. ಬಡಾವಣೆ, ಸಪ್ತಗಿರಿ ಸ್ಕೂಲ್ ಹತ್ತಿರ, ಬನಶಂಕರಿ ಬಡಾವಣೆಗಳಲ್ಲಿ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆಗಳು ಮಾರಾಟಕ್ಕಿವೆ**
40x60 North 3 ಬೆಡ್ ರೂಂ ಮನೆ ಕುವೆಂಪು ಬಡಾವಣೆಯಲ್ಲಿ ಎಸ್.ಎಸ್ 'ಬಿ' ಬ್ಲಾಕ್‌ನಲ್ಲಿ 35x46 North East corner ಮನೆ 3 ಬೆಡ್ ರೂಂ
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

**ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ**
ಹೊಸ ಬಿಸಲೇರಿ ರಸ್ತೆಯಲ್ಲಿ ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ.94489 66128

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ 30x40 ದಕ್ಷಿಣ, ಬನಶಂಕರಿ ಬಡಾವಣೆಯಲ್ಲಿ 50x50 ಕಾರ್ನರ್ ಉತ್ತರ ಪೂರ್ವ, ಎಸ್.ಎಸ್. ಬಡಾವಣೆ, ಬೂಸ್ನೂರು ಸ್ಕೂಲ್ ಹತ್ತಿರ 30x40 ಪಶ್ಚಿಮ
ಧನ್ಯಕುಮಾರ ಶಾಮನೂರು
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
40x60 East, ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 30x32 South 30x32 Corner, 30x50 west
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

* BASIC - 800/-
* PHOTOSHOP - 800/-
* TALLY - 1800/-
ಉದ್ಯೋಗ ಕೊಡಿಸುತ್ತೇವೆ
DOOR TO DOOR COACHING
97426 10385

**LADY ACCOUNTANT ಬೇಕಾಗಿದ್ದಾರೆ**
ಗಾರ್ಮೆಂಟ್ಸ್ Factoryಯಲ್ಲಿ ಕೆಲಸ ಮಾಡಲು Lady Candidate ಬೇಕಾಗಿದ್ದಾರೆ. ಸಂಪರ್ಕಿಸಿ :
ಪ್ರಶಾಂತ್ ಕ್ಲಾತ್ ಸೆಂಟರ್
ಅಶೋಕ ರಸ್ತೆ, ದಾವಣಗೆರೆ.

**RENT**
RCC Godown at APMC 28x95 18ft Height
94480 13082
87470 06444

**ವಾಸ್ತು ಮನೆ & ಶಾಪ್ ಬಾಡಿಗೆಗೆ**
ಶಾಪ್ ಮತ್ತು ಪೂರ್ವ ಮುಂಬಾಗಿಲಿನ ಗ್ರೌಂಡ್ ಫ್ಲೋರ್ ಮನೆ 2/3 ಬೆಡ್‌ರೂಂ, ಡೈನಿಂಗ್ ಹಾಲ್, ನೀರಿನ ಸೌಕರ್ಯ, ಪಾರ್ಕಿಂಗ್, ಮನೆ ಬಾಡಿಗೆಗೆ ಸಮೃದ್ಧಿ ನಿಲಯ # 408, 8ನೇ ಮುಖ್ಯ ರಸ್ತೆ, 8ನೇ ಅಡ್ಡ ರಸ್ತೆ, ಪಿ.ಜೆ. ಬಡಾವಣೆ, ಮೋದಿ ಕಾಂಪೌಂಡ್ ಹತ್ತಿರ
95386 41980, 93807 97651

**ಮನೆ ಲೀಸ್‌ಗೆ ಇದೆ**
ಬನಶಂಕರಿ ಬಡಾವಣೆಯಲ್ಲಿ 2 ಬೆಡ್‌ರೂಮ್, ಕಾರ್ ಪಾರ್ಕಿಂಗ್, ಬೋರ್ ಮತ್ತು ಮುನ್ಸಿಪಲ್ ನೀರು, ಪೂರ್ವ ದಿಕ್ಕಿನ ಮನೆ ಲೀಸ್‌ಗೆ ಇದೆ.
99646 13790

**ಮಾರಾಟಕ್ಕಿದೆ**
ಹೆಚ್.ಎಂ.ಟಿ ಟ್ರ್ಯಾಕ್ಟರ್ 4022, 2016ನೇ ಮಾಡೆಲ್ ಹಾಗೂ ಟ್ರ್ಯಾಕ್ಟರ್ ಟ್ರ್ಯಾಲಿ ಮಾರಾಟಕ್ಕಿದೆ. ಸಂಪರ್ಕಿಸಿ :
91085 59008

**ಬೇಕಾಗಿದ್ದಾರೆ**
ಆನಗೋಡು ಹತ್ತಿರವಿರುವ BPCL ಪೆಟ್ರೋಲ್ ಬಂಕ್‌ನಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸಲು ಬೇಕಾಗಿದ್ದಾರೆ. ಸಂಪರ್ಕಿಸಿ:
99001 42052

**ಮನೆ ಕೆಲಸದವರು ಬೇಕಾಗಿದ್ದಾರೆ**
ನಗರದ ತ್ರಿಶೂಲ್ ಟಾಕೀಸ್ ಹತ್ತಿರದ ಮನೆಯಲ್ಲಿ ಬೆಳಿಗ್ಗೆ 7 ರಿಂದ 10 ರವರೆಗೆ (3 ಗಂಟೆ) ಮನೆ ಕೆಲಸ (ಕಸ, ನೆಲ, ಪಾತ್ರೆ, ಬಟ್ಟೆ ಒಗೆಯುವವರು) ಮಾಡುವವರು ಬೇಕಾಗಿದ್ದಾರೆ.
ಮೊ. 98807 39392

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಹುಡುಗರು ಹಾಗೂ ಕ್ಲೀನಿಂಗ್ ಮತ್ತು ಸಪ್ಲೈ ಕೆಲಸಕ್ಕೆ ಬೇಕಾಗಿದ್ದಾರೆ. ಉಚಿತ ಊಟ ಹಾಗೂ ವಸತಿ ಇದೆ, ಸಂಬಳ ರೂ.8000-10000 ವರೆಗೆ
80739 86139
63624 48360

**ಉತ್ತಮ ಜಲ್ಲಿ ದೊರೆಯುತ್ತದೆ**
20mm, 40mm, M-ಸ್ಯಾಂಡ್ P- ಸ್ಯಾಂಡ್ ದೊರೆಯುತ್ತದೆ.
ಸಿಗಂಧೂರೇಶ್ವರಿ ಬಿಲ್ಡಿಂಗ್ ಮೆಟೀರಿಯಲ್ ಸಪ್ಲೈಯರ್ಸ್, ದಾವಣಗೆರೆ.
85533 73710
91646 69272

**ಸಿಮೆಂಟ್ ಇಟ್ಟಿಗೆ ಮಾಡುವ ಮಷೀನ್ ಮತ್ತು ಫ್ಯಾನ್ ಮಿಕ್ಸರ್ ಮಷೀನ್ ಮಾರಾಟಕ್ಕಿದೆ.**
ಸಂಪರ್ಕಿಸಿ :
91085 59008

**ಬೇಕಾಗಿದ್ದಾರೆ**
ಸರ್ಜಿಕಲ್ ಹಾಗೂ ಫಾರ್ಮದಲ್ಲಿ ಅನುಭವವುಳ್ಳ ವಿವಾಹಿತ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 99004 51968

**ಓಮ್ನಿ ಮಾರಾಟಕ್ಕಿದೆ**
8 ಆಸನಗಳನ್ನು ಹೊಂದಿರುವ ಪೆಟ್ರೋಲ್ ಮತ್ತು ಗ್ಯಾಸ್ ಸೌಲಭ್ಯ ಹೊಂದಿರುವ ಓಮ್ನಿ ವಾಹನ ಮಾರಾಟಕ್ಕಿದೆ. ಕೂಡಲೇ ಸಂಪರ್ಕಿಸಿ: #77/19ಎ, 5ನೇ ಮುಖ್ಯರಸ್ತೆ, ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ.
98451 40948, 98804 36414

**ಬೇಕಾಗಿದ್ದಾರೆ**
ಬೆಂಗಳೂರಿನ ಸುಪ್ರಸಿದ್ಧ ಉತ್ತರ ಕರ್ನಾಟಕದ ಹೋಟೆಲ್‌ನಲ್ಲಿ ಕೆಲಸ ಮಾಡಲು MALE & FEMALE ಅಡುಗೆ ಕೆಲಸದವರು, ಸಪ್ಲೈಯರ್ಸ್, ಊಟ, ವಸತಿಯೊಂದಿಗೆ ಉತ್ತಮ ಸಂಬಳ ಕೊಡಲಾಗುವುದು. ಸಂಪರ್ಕಿಸಿ:
73495 67221
73497 65221

**Innova 2011 Model**
Total 1, 31000 KM white Board, sliver colour G Model Rs 7,71,000
99646 13790

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಬಾಯ್ಸ್ ಅಂಡ್ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ರಾಜ್‌ಹಂಸ್ ಕಲೆಕ್ಷನ್ಸ್
ಚಾಮರಾಜಪೇಟೆ, ದಾವಣಗೆರೆ.
94816 72542

**ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ**
2-3 ವರ್ಷ ಅನುಭವವುಳ್ಳ ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ. ಆಸಕ್ತರು ವಿಚಾರಿಸಿ (ಸಂಪರ್ಕಿಸುವ ಸಮಯ ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ)
99865 38099

**2 ಮಳಿಗೆಗಳು ಲೀಸ್‌ಗೆ ಇವೆ**
22x15 ಮತ್ತು 15x8 ಅಳತೆಯ 2 ಮಳಿಗೆಗಳು ಹಳೇ ಪಿ.ಬಿ. ರಸ್ತೆ, ಮಹಾವೀರ ಗೋಶಾಲೆ ಎದುರು, ದಾವಣಗೆರೆ. ಸಂಪರ್ಕಿಸಿರಿ :
91085 59008

**ಬೇಕಾಗಿದ್ದಾರೆ**
ಶಾಲೆಯಲ್ಲಿ ಕೆಲಸ ಮಾಡಲು ಆಯಾ ಮತ್ತು ಕನ್ನಡ ಶಿಕ್ಷಕರು ಹೈಸ್ಕೂಲ್ ವಿಭಾಗಕ್ಕೆ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ:
ಎಂ.ಇ.ಎಸ್. ಕಾನ್ವೆಂಟ್
9ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ.
98451 40948, 98804 36414

**Wanted Teacher**
Qualifiction : B.Ed (English) 01
B.PEd 01
97405 84669
80734 81049

**WANTED**
Cashier, Sales girls
Computer Operator
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಶ್ರೀ ನಿಧಿ ಎಜುಕೇಷನಲ್ ಟ್ರಸ್ಟ್- ದಾವಣಗೆರೆ.**
ಪ್ರಿನ್ಸ್ ದೂರ ಶಿಕ್ಷಣ ಕಾಲೇಜ್
(Distance Education) (UGC, DEB, & AICTE Approved university)
SSLC, PUC, B.A, B.Com, B.Sc, B.C.A, M.A, M.Com, M.Sc, M.S.W, MBA, MCA, Diploma, B.E, LLB, LLM, Ph.D & all Coursses
97408 51555, 97405 52555

**ಪ್ರೊಫೆಷನಲ್ ಮೇಕಪ್ ಆರ್ಟಿಸ್ಟ್ ತರಬೇತಿ**
50% ಆಫರ್ ಫೀನಲ್ಲಿ ನಡೆಯುತ್ತದೆ. ಮೊದಲ ಬಂದ 10 ಜನರಿಗೆ ಮಾತ್ರ ಅವಕಾಶ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
CS ಮೇಕಪ್ ಸ್ಟುಡಿಯೋ
ವಿನೋಬನಗರ, ದಾವಣಗೆರೆ.
70190 73324

**ಕ್ಲಿನಿಕ್ ನಲ್ಲಿ ಕೆಲಸ ನಿರ್ವಹಿಸಲು ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ.**
ವಿಳಾಸ: ಡಾ. ಎನ್.ಹೆಚ್.ಕೃಷ್ಣ, ಜೈನ್ ಲ್ಯಾಬ್ ಕೆಳಗೆ, ಮೋತಿವೀರಪ್ಪ ಕಾಲೇಜು ಹಿಂಭಾಗ, ಪಿ.ಜೆ. ಬಡಾವಣೆ, ದಾವಣಗೆರೆ

**ಹಾಲ್ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಮೇನ್ ರೋಡ್, ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ. ಸಂಪರ್ಕಿಸಿ:
82177 72482

**ಕೆಲಸಕ್ಕೆ ಬೇಕಾಗಿದ್ದಾರೆ**
18-30 ವಯಸ್ಸಿನ ಅನುಭವವುಳ್ಳ ಯುವಕರು ಅಂಗಡಿ ಕೆಲಸಕ್ಕೆ ತಕ್ಷಣವೇ ಬೇಕಾಗಿದ್ದಾರೆ. ಸಂಪರ್ಕಿಸಿ:
ಧನಲಕ್ಷ್ಮಿ ಸ್ಟೋರ್ಸ್
ವಸಂತ ಟಾಕೀಸ್ ರಸ್ತೆ, ದಾವಣಗೆರೆ.
ಮೊ: 94495 69627

**ಶ್ರೀ ಮಂಜುನಾಥ ಸ್ವಾಮಿ ಜೋತಿಷ್ಯರು**
ಪಂಡಿತ್ ಮಂಜುನಾಥ ಭಟ್
ಇವರು ರಾಜ್ಯದಲ್ಲಿ ನಂ 1 ವಶೀಕರಣ ಸ್ಪೆಷಲಿಸ್ಟ್, (ಸ್ತ್ರೀ-ಪುರುಷ ವಶೀಕರಣ ಕೇವಲ 3 ದಿನದಲ್ಲಿ ಪರಿಹಾರ ಮಾಡುತ್ತಾರೆ) ವಿದ್ಯೆ, ಉದ್ಯೋಗ, ಆರೋಗ್ಯ, ಮಾಟ ಮಂತ್ರ ನಿಮ್ಮ ಯಾವುದೇ ಸಮಸ್ಯೆ ಇದ್ದರೆ ಅತೀ ಶೀಘ್ರ ಪರಿಹಾರ ಶತಸಿದ್ಧ. ಕೊಳ್ಳೆಗಾಲ, ಕೇರಳ ರೀತಿಯಲ್ಲಿ ಪರಿಹಾರ ತಿಳಿಸುತ್ತಾರೆ.
94497 96933

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**Offer Price Anu Solar**
200 ಲೀ Rs 16,700
5 years warranty
99645-11172
99646 13790

**ನಿಮ್ಮ ಗಮನಕ್ಕೆ**
ನಿಮ್ಮ ದೇಹದ ತೂಕ ಕಡಿಮೆ/ ಹೆಚ್ಚಿಸಿಕೊಳ್ಳಿ (ಉಚಿತ ತಪಾಸಣೆ ಇರುತ್ತದೆ)
ಇಂದೇ ಕರೆ ಮಾಡಿ
90970 70333

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿ ಕೊಳ್ಳಿ, ಕಡಿಮೆ ದರದಲ್ಲಿ
72046 33302

**ಗ್ಲೋಬಲ್ ಹೆಲ್ಪ್‌ಲೈನ್ ನಿರುದ್ಯೋಗ ನಿವಾರಣಾ ಸಂಘ (ರಿ.)**
ಯುವಕ/ಯುವತಿಯರೇ, ಕೆಲಸವಿಲ್ಲ ಎಂದು ಕೊರಗಬೇಡಿ... ನಿಮ್ಮ ವಿದ್ಯಾರ್ಹತೆಗೆ ತಕ್ಕ ಕೆಲಸಗಳನ್ನು ನಮ್ಮ ಸಂಘದ ವತಿಯಿಂದ ಕೊಡಿಸುತ್ತೇವೆ.
ಉದ್ಯೋಗ ಮಾಹಿತಿ ಕೇಂದ್ರ
81470 12999, 89512 72999

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮನೆ ಲೀಸ್/ಬಾಡಿಗೆಗೆ ಇದೆ**
ನಗರದ ಮಧ್ಯಭಾಗದಲ್ಲಿರುವ ಮಂಡಿ ಪೇಟೆಯ # 699/1 2 ಬೆಡ್‌ರೂಮಿನ ಮನೆ ಬಾಡಿಗೆಗೆ/ಲೀಸ್‌ಗೆ ಇದೆ. ಬೋರ್‌ವೆಲ್ ಹಾಗೂ ಕಾರ್ಪೊರೇಷನ್ ನೀರಿನ ವ್ಯವಸ್ಥೆ ಇದೆ. ಸಂಪರ್ಕಿಸಿ
87626 76076

**ಬೇಕಾಗಿದ್ದಾರೆ**
ಪಾಂಪ್ಲೆಟ್ಸ್ ಹಂಚಲು ಯುವಕರು ಬೇಕಾಗಿದ್ದಾರೆ. ಸೈಕಲ್/ಬೈಕ್ ಇದ್ದವರಿಗೆ ಆದ್ಯತೆ. ವೇತನ 5000/- ಸಂಪರ್ಕಿಸಿ:
86602 35013
ದಾವಣಗೆರೆ

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**REQUIRED**
B.Com Graduate with Tally Knowledge.
Contact Between 11 AM to 6 PM
M : 96861 39621

**ಶ್ರೀ ದುರ್ಗಾದೇವಿ ಜ್ಯೋತಿಷ್ಯ ಕೇಂದ್ರ**
ಪಂಡಿತ್ ನೀಲಕಂಠ ಜೋಶಿ
ಇವರು ರಾಜ್ಯದಲ್ಲಿ ನಂ 1 ವಶೀಕರಣ ಸ್ಪೆಷಲಿಸ್ಟ್, (ಸ್ತ್ರೀ-ಪುರುಷ ವಶೀಕರಣ ಕೇವಲ 24 ಗಂಟೆಯಲ್ಲಿ ಪರಿಹಾರ ಮಾಡುತ್ತಾರೆ) ವಿದ್ಯೆ, ಉದ್ಯೋಗ, ಆರೋಗ್ಯ, ಮಾಟ ಮಂತ್ರ ನಿಮ್ಮ ಯಾವುದೇ ಸಮಸ್ಯೆ ಇದ್ದರೆ ಅತೀ ಶೀಘ್ರ ಪರಿಹಾರ ಶತಸಿದ್ಧ. ಕೊಳ್ಳೆಗಾಲ, ಕೇರಳ ರೀತಿಯಲ್ಲಿ ಪರಿಹಾರ ತಿಳಿಸುತ್ತಾರೆ.
94815 76026

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**SSLC/PUC CORRESPONDENCE**
ಸುವರ್ಣ ಅವಕಾಶ
ಸಿಂಚನ ಅಕಾಡೆಮಿ
SBI ATM ಹತ್ತಿರ, ರಾಂ & ಕೋ. ಸರ್ಕಲ್ ದಾವಣಗೆರೆ.
85532 78258, 86601 95955

**ಜ್ಯೋತಿಷ್ಯ**
ಶ್ರೀ ಕ್ಷೇತ್ರ ಶಿರಡಿಯಿಂದ ನೇರ ಫೋನಿನ ಮೂಲಕ ಪರಿಹಾರ. ನಿಮ್ಮ ಸಮಸ್ಯೆಗಳು ಏನೇ ಇರಲಿ ಶಿರಡಿಯ ಬ್ರಾಹ್ಮಣ ಗುರುಗಳಿಂದ ವಿಶೇಷ ಪರಿಹಾರ.
ಪಂಡಿತ್ ಶೇಷಗಿರಿ ಭಟ್ (ಶಿರಡಿ)
ಮೊ. : 97417 65669

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

**SAHYADRI PARAMEDICAL COLLEGE**
SSLC ಪಾಸ್, PUC ಪಾಸ್/ಫೇಲ್
Course DHI
Diploma Health Inspector
ಕೆಲವೇ ಸೀಟುಗಳು ಮಾತ್ರ, SBI ATM ಹತ್ತಿರ ರಾಂ & ಕೋ. ಸರ್ಕಲ್, ದಾವಣಗೆರೆ.
90195 80600, 86601 95955

**ಕೆಲ್ಸಬೇಕಾ.Com**
kelsabeka.com, job Consultancy
Be professional & Be Educated
ನೀವು ಕೆಲಸಕ್ಕಾಗಿ ಹುಡುಕಾಟ ನಡೆಸಿದ್ದೀರಾ? ಕೆಲಸ ಇಲ್ಲವೇ, ಕೆಲಸವಿಲ್ಲದೇ ಚಿಂತೆಯಲ್ಲಿದ್ದೀರಾ? ಹಾಗಾದರೆ ಇಂದೇ ಬನ್ನಿ ನಿಮ್ಮ ವಿದ್ಯಾರ್ಹತೆಗೆ ತಕ್ಕಂತೆ ಉದ್ಯೋಗ ನಮ್ಮಲ್ಲಿವೆ. We Provide all Types of Job
96869 58555, 96869 49555

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**DIPLOMA & BE TUITIONS**
For All Branches
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

# ವೀರಶೈವ ಮಹಾಸಭಾದಿಂದ ಸಿದ್ಧಗಂಗಾ ಶ್ರೀಗಳ ಪುಣ್ಯ ಸ್ಮರಣೆ



ದಾವಣಗೆರೆ, ಜ. 21- ಅಖಿಲ ಭಾರತ ವೀರಶೈವ ಮಹಾಸಭಾದ ವತಿಯಿಂದ ಕಾಯಕ ಯೋಗಿ ಶ್ರೀ ಶಿವಕುಮಾರ ಸ್ವಾಮಿಗಳ ಎರಡನೇ ವರ್ಷದ ಪುಣ್ಯ ಸ್ಮರಣೆಯನ್ನು ನಗರದ ಗಡಿಯಾರ ಕಂಬದ ಹತ್ತಿರ ನಡೆಸಲಾಯಿತು.

ಮುಕ್ತಿಮಂದಿರದ ಶ್ರೀ ವಿಮಲ ರೇಣುಕಾ ವೀರ ಮುಕ್ತಿ ಮುನಿ ಶಿವಾಚಾರ್ಯ ಸ್ವಾಮೀಜಿ, ಡಾ.ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಚನ್ನ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷರೂ ಆಗಿರುವ ನಗರ ಪಾಲಿಕೆ ಸದಸ್ಯ ದೇವರಮನೆ ಶಿವಕುಮಾರ್, ರಾಷ್ಟ್ರೀಯ ಯುವ ಘಟಕದ ಉಪಾಧ್ಯಕ್ಷ ಸಂದೀಪ್, ಕಾರ್ಯಕಾರಿಣಿ ಸದಸ್ಯ ಶಿವನಗೌಡ ಪಾಟೀಲ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಉಮಾ ರಮೇಶ್, ಪ್ರಧಾನ ಕಾರ್ಯದರ್ಶಿ ದ್ರಾಕ್ಷಾಯಿಣಿ, ನಗರ ಘಟಕದ ಅಧ್ಯಕ್ಷರಾದ ಪುಷ್ಪ ವಾಲಿ, ನಗರ ಘಟಕದ ಪದಾಧಿಕಾರಿಗಳಾದ ಮಂಗಳ, ಗಂಗಾ, ಸುಮಾ ಮಲ್ಲಿಕಾರ್ಜುನ, ಸುನೀತ, ಮಂಜುಳ, ಸುಜಾತ, ಅನ್ನಪೂರ್ಣ, ಮಂಜುಳ ಗದಿಗೇಶ್, ಶಕುಂತಲಮ್ಮ ವೆಂಕಟೇಶ, ಮಂಜುಳ ಮಹಾಂತೇಶ, ರೂಪ ಮರಿಗೌಡರು, ಶಕುಂತಲ, ಆರತಿ ಸೋಗಿ, ಯುವ ಘಟಕದ ಅಧ್ಯಕ್ಷ ಶಂಭು ಉರೇಕೊಂಡಿ, ಪ್ರಧಾನ ಕಾರ್ಯದರ್ಶಿ ಶ್ರೀಕಾಂತ ನೀಲಗುಂದ, ಉಪಾಧ್ಯಕ್ಷರಾದ ಅಭಿಷೇಕ್ ಪಿ.ಎಳೆಹೊಳೆ, ಕೊಂಡಜ್ಜಿ ಶಿವಕುಮಾರ್, ಶಿವರಾಜ್ ದೇವರಮನೆ, ಟಿಂಕರ್ ಮಂಜಣ್ಣ, ಶಿವಾನಂದ ಬೆನ್ನೂರು, ಎಳನೀರು ಮುತ್ತಣ್ಣ, ಬಿ.ಎಸ್. ರಾಘವೇಂದ್ರ ಶೆಟ್ಟಿ, ಪಿ.ಎನ್. ಚಂದ್ರಶೇಖರ್, ಜಯಪ್ರಕಾಶ್ ಮಾಗಿ ಇತರರು ಉಪಸ್ಥಿತರಿದ್ದರು.

## ಮಲೇಬೆನ್ನೂರು : ಅಂಬಿಗರ ಚೌಡಯ್ಯ ಜಯಂತಿ



ಮಲೇಬೇನ್ನೂರು, ಜ.21- ಇಲ್ಲಿನ ಪುರಸಭೆ ಮತ್ತು ನಾಡ ಕಛೇರಿಯಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಆಚರಿಸಲಾಯಿತು.

ಪುರಸಭೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಂಗಾಮತ ಸಮಾಜದ ಹಿರಿಯರಾದ ಮಾಗಾನಹಳ್ಳಿ ಹಾಲಪ್ಪ ಮಾತನಾಡಿ, 12ನೇ ಶತಮಾನದಲ್ಲಿ ನಾಡು ಕಂಡ ದಾರ್ಶನಿಕರಲ್ಲಿ ಅಂಬಿಗರ ಚೌಡಯ್ಯನವರೂ ಒಬ್ಬರಾಗಿದ್ದು, ಅವರ ತಮ್ಮ ನಡವಳಿಕೆಗಳಿಂದಾಗಿಯೇ ನಿಜಶರಣ ಎಂಬ ಹೆಸರು ಪಡೆದಿದ್ದರು. ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಾವೆಲ್ಲರೂ ನಡೆಯೋಣ ಎಂದರು.

ಆದಾಪುರ ವಿಜಯಕುಮಾರ್ ಮಾತನಾಡಿ, ಇಂದಿನ ಯುವ ಪೀಳಿಗೆಗೆ ದಾರ್ಶನಿಕರ ಪರಿಚಯ ಮಾಡಿಕೊಡುವ ಜವಾಬ್ದಾರಿ ನಮ್ಮ ಮೇಲಿದ್ದು, ಜಯಂತಿ ಆಚರಣೆ ಜೊತೆಗೆ ದಾರ್ಶನಿಕರ ಪುಸ್ತಕಗಳನ್ನು ಮಕ್ಕಳಿಗೆ ಕೊಟ್ಟು ಓದಿಸಬೇಕೆಂದರು.

ಪುರಸಭೆ ಸದಸ್ಯ ಬಿ. ಸುರೇಶ್, ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಗಂಗಾಮತ ಸಮಾಜದ ಮುಖಂಡರಾದ ಗೌಡ್ರ ಮಂಜುನಾಥ್, ಕಣ್ಣಾಳ್ ಧರ್ಮಣ್ಣ, ಎಂ.ಎನ್. ಮಂಜುನಾಥ್, ಆರ್.ಹೆಚ್. ಬಸವರಾಜ್ ಮಾತನಾಡಿದರು.

ಪುರಸಭೆ ಅಧ್ಯಕ್ಷೆ ಶ್ರೀಮತಿ ನಾಹೀದಾ ಅಂಜುಂ ಸೈಯದ್ ಇಸ್ರಾರ್ ಅಧ್ಯಕ್ಷತೆ ವಹಿಸಿದ್ದರು. ಪುರಸಭೆ ಮುಖ್ಯಾಧಿಕಾರಿ ಧರಣೇಂದ್ರಕುಮಾರ್ ಉಪ ತಹಶೀಲ್ದಾರ್ ಆರ್. ರವಿ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಂತೇಶ್ ಸ್ವಾಮಿ, ಪುರಸಭೆ ಸದಸ್ಯರಾದ ಸುಬ್ಬಿರಾಜಪ್ಪ, ಎ.ಆರೀಫ್ ಅಲಿ, ಯೂಸೂಫ್, ಮಾಸಣಗಿ ಶೇಖರಪ್ಪ, ಮಹಾಲಿಂಗಪ್ಪ, ಎಂ.ಬಿ. ಫೈಜು, ಭೋವಿಕುಮಾರ್, ಫಕ್ರುದ್ದೀನ್ ಅಹಮದ್, ಪ್ರಕಾಶ್‌ಚಾರ್, ಪಟ್ಟಣದ ತಳಸದ ಬಸವರಾಜ್, ಬೆಣ್ಣೆಹಳ್ಳಿ ಬಸವರಾಜ್, ಬಿ. ಚಂದ್ರಪ್ಪ, ಪೂಜಾರ್ ಗಂಗಾಧರ್, ಎ.ಕೆ. ಸುರೇಶ್, ಗಂಗಾಮತ ಸಮಾಜದ ಬಾರ್ಕಿ ಬಸವರಾಜ್, ಜಿ. ಗದಿಗೆಪ್ಪ, ನಿಟ್ಟೂರ ರಾಮಚಂದ್ರಪ್ಪ, ಹಳೇಮನಿ ಕುಮಾರ್, ಕರಡಿ ಸೋಮಶೇಖರ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್ ಮತ್ತಿತರರು ಭಾಗವಹಿಸಿದ್ದರು.

## 25 ರಂದು ಮತದಾರರ ದಿನ

ದಾವಣಗೆರೆ, ಜ.20- ಮಹಾನಗರ ಪಾಲಿಕೆ ಆವರಣದಲ್ಲಿ ಇದೇ ದಿನಾಂಕ 25 ರ ಸೋಮವಾರ ಬೆಳಿಗ್ಗೆ 10.30 ಕ್ಕೆ 11 ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳ ಲಾಗಿದೆ ಎಂದು ಪಾಲಿಕೆ ಉಪ ಆಯುಕ್ತರು ಹಾಗೂ ಮತ ದಾರರ ನೋಂದಣಾಧಿಕಾರಿ ಗಳು ತಿಳಿಸಿದ್ದಾರೆ.

# ಬಾಂಗ್ಲಾ -ನೇಪಾಳಕ್ಕೆ 30 ಲಕ್ಷ ಲಸಿಕೆ ರವಾನೆ

ನವದೆಹಲಿ, ಜ. 21 – ಮಿತ್ರ ದೇಶಗಳಿಗೆ ಕೊರೊನಾ ಲಸಿಕೆ ಒದಗಿಸುವುದರ ಭಾಗವಾಗಿ ಬಾಂಗ್ಲಾದೇಶಕ್ಕೆ 20 ಲಕ್ಷ ಹಾಗೂ ನೇಪಾಳಕ್ಕೆ 10 ಲಕ್ಷ ಲಸಿಕೆಗಳನ್ನು ಭಾರತ ಒದಗಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಬಾಂಗ್ಲಾದೇಶದ ವಿದೇಶಾಂಗ ಸಚಿವ ಡಾ. ಎ.ಕೆ. ಅಬ್ದುಲ್ ಮೊಮೆನ್, 1971ರ ಬಾಂಗ್ಲಾ ವಿಮೋಚನಾ ಸಮರದ ಸಮಯದಲ್ಲಿ ಭಾರತ ಬಾಂಗ್ಲಾದೇಶದ ಜೊತೆ ನಿಂತಿತ್ತು. ಈಗ ಲಸಿಕೆ ನೀಡುವುದರ ಮೂಲಕ ಜೊತೆಯಾಗಿದೆ ಎಂದಿದ್ದಾರೆ.

ನೆರೆಹೊರೆಯವರಿಗೆ ಆದ್ಯತೆ ನೀಡುವ ಯೋಜನೆಯ ಅಂಗವಾಗಿ ನೇಪಾಳಕ್ಕೆ 10 ಲಕ್ಷ ಲಸಿಕೆಗಳನ್ನು ನೀಡಲಾಗಿದೆ. ನೇಪಾಳದಲ್ಲಿರುವ ಭಾರ ತದ ರಾಯಭಾರಿ ವಿನಯ್ ಮೋಹನ್ ಅವರು ನೇಪಾಳದ ಪ್ರಧಾನ ಮಂತ್ರಿ ಕೆ.ಪಿ. ಶರ್ಮ ಓಲಿ ಅವರಿಗೆ ಲಸಿಕೆಗಳನ್ನು ಹಸ್ತಾಂತರಿಸಿದ್ದಾರೆ.

ಬುಧವಾರದಂದು ಭೂತಾನಕ್ಕೆ 1.5 ಲಕ್ಷ ಹಾಗೂ ಮಾಲ್ಡೀವ್ಸ್‌ಗೆ 1 ಲಕ್ಷ ಲಸಿಕೆಗಳನ್ನು ಕಳಿಸಲಾಗಿತ್ತು. ಭಾರತದ ವಿಶ್ವದ ಅತಿ ದೊಡ್ಡ ಔಷಧ ಉತ್ಪಾದಕ ದೇಶವಾಗಿದೆ. ಕೊರೊನಾ ವೈರಸ್ ಲಸಿಕೆಗಳಿಗಾಗಿ ಹಲವು ದೇಶಗಳು ಭಾರತವನ್ನು ಸಂಪರ್ಕಿಸಿವೆ.

## ತುಮಕೂರು ಲಸಿಕಾ ಪ್ರಹಸನ: ಡಿಸಿ ಸ್ಪಷ್ಟನೆ

ಬೆಂಗಳೂರು, ಜ. 21 – ತುಮಕೂರಿನ ಆರೋಗ್ಯಾಧಿಕಾರಿಗಳು ಕೊರೊನಾ ಲಸಿಕೆ ತೆಗೆದುಕೊಂಡಂತೆ ಪ್ರಹಸನ ನಡೆಸಿದ್ದಾರಾದರೂ, ಅವರು ಲಸಿಕೆ ತೆಗೆದುಕೊಂಡಿಲ್ಲ ಎಂದು ಆರೋಪಿಸುವ ವಿಡಿಯೋ ವೈರಲ್ ಆಗಿದೆ. ಆದರೆ, ಲಸಿಕೆ ಪಡೆದಿರುವುದಾಗಿ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ.

ಆರೋಗ್ಯಾಧಿಕಾರಿಗಳು ಲಸಿಕೆ ತೆಗೆದುಕೊಂಡಿಲ್ಲ ಎಂಬ ವಿಡಿಯೋ ನಕಲಿ ಹಾಗೂ ತಪ್ಪು ಅರ್ಥ ಕಲ್ಪಿಸುವಂಥದ್ದಾಗಿದೆ ಎಂದು ತುಮಕೂರು ಜಿಲ್ಲಾಧಿಕಾರಿ ಡಾ. ರಾಕೇಶ್ ಕುಮಾರ್ ತಿಳಿಸಿದ್ದಾರೆ.

ತುಮಕೂರಿನ ಸರ್ಕಾರಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲೆ ಡಾ. ರಜನಿ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗೇಂದ್ರಪ್ಪ ಅವರು ನರ್ಸ್ ಒಬ್ಬರಿಂದ ಲಸಿಕೆ ತೆಗೆದುಕೊಂಡಂತೆ ಮಾಡುವ ದೃಶ್ಯ ವೈರಲ್ ಆಗಿತ್ತು. ಈ ವಿಡಿಯೋದಲ್ಲಿ ಉಭಯರು ಲಸಿಕೆಯ ಚುಚ್ಚುಮದ್ದು ಪಡೆಯದೇ, ಕೇವಲ ಲಸಿಕೆ ಪಡೆದುಕೊಂಡ ರೀತಿ ಫೋಟೋ ತೆಗೆಸಿಕೊಂಡಿದ್ದು ಕಂಡು ಬಂದಿತ್ತು.

ಜನವರಿ 16ರಂದು ಉಭಯರೂ ಸೇರಿದಂತೆ ಹಲವಾರು ಆರೋಗ್ಯ ಕಾರ್ಯಕರ್ತರಿಗೆ ಭಾರತ್ ಬಯೋಟೆಕ್‌ನ ಕೊವ್ಯಾಕ್ಸಿನ್ ಲಸಿಕೆ ನೀಡಲಾಗಿತ್ತು. ಕೆಲ ಪತ್ರಕರ್ತರಿಗೆ ಲಸಿಕೆ ಪಡೆಯುವ ದೃಶ್ಯ ದೊರೆತಿರಲಿಲ್ಲ. ಹೀಗಾಗಿ ಮತ್ತೆ ಲಸಿಕೆ ತೆಗೆಸಿಕೊಳ್ಳುವ ರೀತಿ ತೋರಿಸುವಂತೆ ಕೇಳಲಾಗಿತ್ತು. ಆಗ ಈ ಘಟನೆ ನಡೆದಿದೆ ಎಂದು ಜಿಲ್ಲಾಧಿಕಾರಿ ರಾಕೇಶ್ ಕುಮಾರ್ ಹೇಳಿದ್ದಾರೆ.

# ಫುಟ್ ಪಾತ್ ಮೇಲಿನ ಅಂಗಡಿಗಳ ವಿಸ್ತರಣೆ ತೆರವು

ದಾವಣಗೆರೆ, ಜ.21- ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ನಿಮಿತ್ತ ಉತ್ತರ ಸಂಚಾರ ಪೊಲೀಸ್ ಠಾಣೆಯ ಪಿಎಸ್‌ಐ ಇಮ್ರಾನ್ ನೇತೃತ್ವದ ತಂಡ ನಗರದ ವಿಜಯಲಕ್ಷ್ಮಿ ರಸ್ತೆಯಲ್ಲಿ ಇಂದು ಫುಟ್ ಪಾತ್ ಮೇಲೆ ಹೆಚ್ಚುವರಿಯಾಗಿ ವಿಸ್ತರಣೆಯಾಗಿದ್ದ ಅಂಗಡಿಗಳ ತೆರವು ಕಾರ್ಯಾಚರಣೆ ನಡೆಸಿತು.

ಅಂಗಡಿ ಮಾಲೀಕರುಗಳಿಗೆ ಮತ್ತು ಇತರೆ ವ್ಯಾಪಾರಿಗಳಿಗೆ ಫುಟ್ ಪಾತ್ ಅನ್ನು ಅಕ್ರಮಿಸದಂತೆ ಪಿಎಸ್‌ಐ ಇಮ್ರಾನ್ ಸೂಚನೆ ನೀಡಿದರು. ಫುಟ್ ಪಾತ್ ಮೇಲೆ ವ್ಯಾಪಾರ ಮಾಡುವವರ ಹಾಗೂ ಅಂಗಡಿಗಳ ವಿರುದ್ಧ 15 ಪಿಟ್ಟಿ ಕೇಸ್‌ಗಳನ್ನು ದಾಖಲಿಸಲಾಗಿದೆ.

ಫುಟ್‌ಪಾತ್ ಮೇಲೆ ಅಂಗಡಿಗಳ ಸರಕುಗಳನ್ನು ಇಡಬಾರದು ಎಂದು ಈಗಾ ಗಲೇ ನೋಟಿಸ್ ನೀಡಿದ್ದು, ಇದಕ್ಕೆ ಸ್ಪಂದಿಸ ದವರ ಮೇಲೆ ದೂರು ದಾಖಲಿಸಲಾಗುತ್ತಿದೆ. ಇದೀಗ ಆರಂಭಿಸಿರುವ ತೆರವು ಕಾರ್ಯಾಚರಣೆಯು ಮುಂದುವರೆಯಲಿ ದ್ದು, ಕೆ.ಆರ್.ರಸ್ತೆ, ಎಂ.ಜಿ. ರಸ್ತೆ ಮತ್ತಿತರೆ ರಸ್ತೆಗಳಲ್ಲೂ ಕಾರ್ಯಾಚರಣೆ ನಡೆಯಲಿದೆ ಎಂದು ಪಿಎಸ್‌ಐ ಇಮ್ರಾನ್ ತಿಳಿಸಿದ್ದಾರೆ.



## ನಗರದಲ್ಲಿ ಉತ್ಸವಾಂಬ ದೇವಿ ಜಾತ್ರಾ ಮಹೋತ್ಸವ



ದಾವಣಗೆರೆ, ಜ. 21 - ನಗರದ ವಸಂತ ರಸ್ತೆಯ ಹಾಲಸ್ವಾಮಿ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಬದೇವಿ, ಶ್ರೀ ಚೌಡೇಶ್ವರಿದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ ಜಾತ್ರಾ ಮಹೋತ್ಸವವು ಇದೇ ದಿನಾಂಕ 26 ರಿಂದ 28 ರವರೆಗೆ ನಡೆಯಲಿದೆ. ಇದೇ ದಿನಾಂಕ 28ರ ಗುರುವಾರ ಬೆಳಗಿನ ಜಾವ 4.30 ಕ್ಕೆ ಅಮ್ಮನವರಿಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ವಿಶೇಷ ಪುಷ್ಪಾಲಂಕಾರ ಪೂಜೆ, ಬೆಳಿಗ್ಗೆ 9.30 ಕ್ಕೆ ಭಕ್ತಾದಿಗಳಿಂದ ಉಡಿ ಅಕ್ಕಿ ಸೇವೆ ನಂತರ ಮಧ್ಯಾಹ್ನ 12.30 ರಿಂದ ಪ್ರಸಾದ ವಿನಿಯೋಗ ವಿರುತ್ತದೆ. ಸಂಜೆ 5.30 ಕ್ಕೆ ಶ್ರೀ ಉತ್ಸವಾಂಬ ದೇವಿಯ ಮೆರವಣಿಗೆ ನಡೆಯುವುದು.

## ಕೊಟ್ಟೂರಿನಲ್ಲಿ ಅಂಬಿಗರ ಚೌಡಯ್ಯ ಜಯಂತಿ ಆಚರಣೆ



ಕೊಟ್ಟೂರು, ಜ.21 - ತಾಲ್ಲೂಕು ಕಛೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ತಹಶೀಲ್ದಾರ್ ಅನಿಲ್‌ಕುಮಾರ್ ಜಿ. ತಾಲ್ಲೂಕು ಗಂಗಾಮತ ಸಮಾಜದ ಅಧ್ಯಕ್ಷ ಬಿ. ಗೋಣಿ ಬಸವರಾಜ್, ಮೀನುಗಾರರ ಸಹಕಾರ ಸಂಘದ ಅಧ್ಯಕ್ಷ ಜಿ. ಹಾಲೇಶಪ್ಪ, ನಾಗಲಿಂಗಪ್ಪ, ಕೊಟ್ರೇಶ್, ಬಸವರಾಜ್, ನಾಗರಾಜ, ರಮೇಶ್, ಪರಮೇಶ್, ಡಿ.ಟಿ. ಅನ್ನದಾನೇಶ್, ಬಿ. ಪತ್ತಾರ್, ಲೀಲಾ, ಗುರುಬಸವರಾಜ್, ಗೌರಮ್ಮ, ಮಂಜಮ್ಮ ಯು.ಎಂ. ಸುನೀತಾ ಮತ್ತಿತರರು ಭಾಗವಹಿಸಿದ್ದರು.

## ಕನಕ ಪೀಠದ ಶ್ರೀಗಳಿಗೆ ಮಾಜಿ ಶಾಸಕ ಶಿವಶಂಕರ್ ಗೌರವಾರ್ಪಣೆ



ಹರಿಹರ, ಜ.21- ಕುರುಬ ಸಮಾಜಕ್ಕೆ ಸರ್ಕಾರ ಎಸ್.ಟಿ. ಸೌಲಭ್ಯಗಳನ್ನು ನೀಡುವಂತೆ ಆಗ್ರಹಿಸಿ ಕಾಗಿನೆಲೆ ಕನಕ ಗುರುಪೀಠದಿಂದ ಬೆಂಗಳೂರಿನವರೆಗೆ ಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ ಹಮ್ಮಿಕೊಂಡಿರುವ ಪಾದಯಾತ್ರೆಗೆ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರು ಶ್ರೀಗಳನ್ನು ಸನ್ಮಾನಿಸಿ, ಗೌರವಿಸುವ ಮೂಲಕ ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕುರುಬ ಸಮಾಜದ ಮುಖಂಡರಾದ ಸುರೇಶ್ ಚಂದಾಪೂರ್, ಜಗದೀಶ್ ಚೂರಿ, ಕುಣೆಬೆಳಕೆರೆ ದೇವೇಂದ್ರಪ್ಪ, ಜೆಡಿಎಸ್ ಪಕ್ಷದ ಅಡಿಕಿ ಕುಮಾರ್, ಮೌನೇಶ್ ಹಾಗು ಇತರರು ಹಾಜರಿದ್ದರು.


ಸನ್‌ಶೈನ್ ಪುರಂತರ್ ಹಾಸ್ಪಿಟಲ್
SUNSHINE PURANTAR HOSPITAL
3rd Main, MCC 'A' Block, Davangere - 577 002.
REQUIREMENT
1. Duty Doctors - 3
2. Ward Nurse : GNM & ANM - 10
3. OT Nurses + OT Technician - 5
4. ICU Nursing - 5
5. X-Ray Technician - 2
6. Receptionist - 2
7. Ward Boy - 5
8. Anaesthesia Technician - 2
Attractive salary Based on Eligibility & Experience
Apply with : Biodata, Recent Colour Photo, Address Proof , Degree Certificate.
SUNSHINE PURANTAR HOSPITAL
CONTACT : 94489 55667, 88846 14545


## ರಾಣೇಬೆನ್ನೂರು: ಫುಟ್ಬಾಲ್ ಪಂದ್ಯ

ರಾಣೇಬೆನ್ನೂರು, ಜ.21- ಖನ್ನೂರ ಫುಟ್ಬಾಲ್ ಅಕಾಡೆಮಿ ವತಿಯಿಂದ ಹುಣಸಿಕಟ್ಟೆ ರಸ್ತೆಯ ವಿದ್ಯಾನಿಕೇತನ ಶಾಲೆಯಲ್ಲಿ ನಾಡಿದ್ದು ದಿನಾಂಕ 23 ಮತ್ತು 24 ರಂದು ರಾಜ್ಯ ಮಟ್ಟದ ಫುಟ್ಬಾಲ್ ಪಂದ್ಯಾವಳಿ ನಡೆಯಲಿದೆ ಎಂದು ಅಕಾಡೆಮಿ ಅಧ್ಯಕ್ಷರಾದ ಡಾ. ಶೈಲಶ್ರೀ ಖನ್ನೂರ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ. ಪುರುಷ ಹಾಗೂ ಮಹಿಳೆಯರ ಮುಕ್ತ ಪಂದ್ಯಾವಳಿ ಮತ್ತು 14 ವರ್ಷಕ್ಕೂ ಕಡಿಮೆ ವಯಸ್ಸಿನ ಬಾಲಕರ ಈ ಪಂದ್ಯಾವಳಿಗೆ ರಾಜ್ಯದ ವಿವಿಧೆಡೆಯಿಂದ 52 ತಂಡಗಳು ತಮ್ಮ ಹೆಸರು ನೋಂದಾಯಿಸಿವೆ. ಅಕಾಡೆಮಿ ಜಿಲ್ಲಾ ಅಭಿವೃದ್ಧಿ ಅಧಿಕಾರಿ ರಂಜಿತ ಪಂದ್ಯ ಉದ್ಘಾಟಿಸಲಿದ್ದು, ವಿದ್ಯಾಸಂಸ್ಥೆ ಅಧ್ಯಕ್ಷ ಎಂ.ಎಂ. ಖನ್ನೂರ, ಪಂದ್ಯದ ಕನಸುಗಾರ ಅನುರಾಗ ಖನ್ನೂರ ಭಾಗವಹಿಸುವರು ಎಂದು ಎಂ.ಡಿ. ಡಾ. ಪ್ರವೀಣ ಖನ್ನೂರ ವಿವರಿಸಿದ್ದಾರೆ.ವ

## ಹಳೇಬಾತಿಗೆ ಇಂದು ಶಾಸಕ ರವೀಂದ್ರನಾಥ್

ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಸಕರ ಅನುದಾನದಡಿಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ 2 ಕೊಠಡಿಗಳ ಉದ್ಘಾಟನಾ ಸಮಾರಂಭವು ಇಂದು ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ.

ಶಾಸಕ ಎಸ್.ಎ.ರವೀಂದ್ರನಾಥ್ ಅವರು ಈ ಕೊಠಡಿಗಳನ್ನು ಉದ್ಘಾಟಿಸಲಿದ್ದಾರೆ. ಎಂದು ಗ್ರಾ.ಪಂ. ಸದಸ್ಯ ಎಸ್. ಆರ್. ಸಿದ್ದೇಶ್ ತಿಳಿಸಿದ್ದಾರೆ.

## ನಗರದ ವಿವಿಧೆಡೆ ಇಂದು ವಿದ್ಯುತ್ ವ್ಯತ್ಯಯ

ಕೆ.ಬಿ. ಬಡಾವಣೆ, ಲಾಯರ್ ರಸ್ತೆ, ದೀಕ್ಷಿತ್ ರಸ್ತೆ, ಬಿಲಾಲ್ ಕಾಂಪೌಂಡ್, ಪಿ.ಬಿ. ರಸ್ತೆಯ (ಗಾಂಧಿ ಸರ್ಕಲ್ ನಿಂದ ಈರುಳ್ಳಿ ಮಾರ್ಕೆಟ್ ವರೆಗೆ). ನಿಟುವಳ್ಳಿ ಹಾಗು ನಿಟುವಳ್ಳಿ ಹೊಸಬಡಾವಣೆ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, 60 ಅಡಿ ರಸ್ತೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು. ಇ.ಎಸ್.ಐ ಫೀಡರ್ ಇ.ಎಸ್.ಐ ಆಸ್ಪತ್ರೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು ಎಸ್. ನಿಜಲಿಂಗಪ್ಪ ಫೀಡರ್‌ನ ವ್ಯಾಪ್ತಿಯ ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್, ಕುಂದವಾಡ ರಸ್ತೆ, ಯಲ್ಲಮ್ಮ ನಗರ, ವಿನೋಬನಗರ 4ನೇ ಮೇನ್ 3ನೇ ಮೇನ್ ಹಾಗೂ ಸುತ್ತ ಮುತ್ತಲ ಪ್ರದೇಶಗಳು.


ಬಾಪೂಜಿ ಬ್ಯಾಂಕ್ (ಹದಡಿ ರಸ್ತೆ), ಬಾಪೂಜಿ ಡೆಂಟಲ್ ಕಾಲೇಜ್ ಮತ್ತು ಬಾಪೂಜಿ ಆಸ್ಪತ್ರೆ, ಜೆ.ಜೆ.ಎಮ್. ಮೆಡಿಕಲ್ ಕಾಲೇಜ್, ಚಿಗಟೇರಿ ಜಿಲ್ಲಾ ಆಸ್ಪತ್ರೆ ಮತ್ತು ವಸತಿ ಗೃಹಗಳು, ಮ್ಯಾಕ್ಸ್ ಷೋ ರೂಂ, ಬಿ.ಎಸ್ ಚನ್ನಬಸಪ್ಪ ಎಕ್ಸಕ್ಲೂಸಿವ್ ಷೋರೂಂ , ಕೆ. ಎಫ್.ಸಿ., ಡಿ.ಆರ್.ಎಮ್ ಕಾಲೇಜ್, ಎ.ಆರ್.ಜಿ ಕಾಲೇಜ್ ಹಾಗೂ ಸುತ್ತಮುತ್ತಲ ಪ್ರದೇಶಗಳು.

ಅಶೋಕ ರಸ್ತೆ, ಮಹಿಳಾ ಸಮಾಜ ಕಾಂಪ್ಲೆಕ್ಸ್, ಆರ್.ಹೆಚ್. ಚೌಲ್ಟ್ರಿ, ಬಿ.ಎಸ್.ಎನ್.ಎಲ್. ಎಕ್ಸ್‌ಚೇಂಜ್ ಕಾಮತ್ ಹೋ ಟೆಲ್ ಏರಿಯಾ, ರೈಲ್ವೆ ನಿಲ್ದಾಣ, ಜೋಯಾಲು ಕ್ಯಾಸ್, ಬಿಗ್ ಬಜಾರ್, ಆಕ್ಸಿಸ್ ಬ್ಯಾಂಕ್, ರೇಣುಕಾ ಮಂದಿರ, ಬೀರಲಿಂಗೇಶ್ವರ ಕಾಂ ಪೌಂಡ್, ಮಹಾನಗರ ಪಾಲಿಕೆ ಕಛೇರಿ, ಸಾಯಿ ಹೋಟೆಲ್, ಶಾಂತಿ ಕಂಫರ್ಟ್ಸ್, ಹೈಸ್ಕೂಲ್ ಫೀಲ್ಡ್ ಮತ್ತು ಹಳೆ ಬಸ್ ನಿಲ್ದಾಣ ಹಾಗು ಸುತ್ತ ಮುತ್ತ ಪ್ರದೇಶಗಳು, ಹಳೆ ಮಟನ್ ಮಾರ್ಕೆಟ್, ಶಿವಾಜಿ ನಗರ, ಎಂ.ಬಿ.ಕೆರೆ, ಚಲವಾದಿ ಕೆರೆ, ಶಿವಾಲಿ ಟಾಕೀಸ್, ದುರ್ಗಾಂಬಿಕ ದೇವಸ್ಥಾನ ಹಾಗು ಸುತ್ತ ಮುತ್ತ ಪ್ರದೇಶಗಳಲ್ಲಿ ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


ಹೃತ್ಪೂರ್ವಕ ಕೃತಜ್ಞತೆಗಳು



ಎ.ಎಸ್. ದಯಾನಂದಪ್ಪ
ಅಧ್ಯಕ್ಷರು, ಕಳವೂರು.



ಎಸ್.ಕೆ. ಜಯಪ್ಪ
ಉಪಾಧ್ಯಕ್ಷರು, ಹಿರೇತೊಗಲೇರಿ,

ಈಚಘಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಈಚಘಟ್ಟ, ದಾವಣಗೆರೆ ತಾ|| ಇದರ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯು ದಿನಾಂಕ 21.01.2021 ರಂದು ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲು ಸಹಕರಿಸಿದ ಚುನಾವಣಾಧಿಕಾರಿಗಳಾದ ಶ್ರೀ ಜಿ.ಎಸ್. ಸುರೇಂದ್ರರವರಿಗೂ ಹಾಗೂ ಸಿಇಓ ಅರ್ಜುನ್ ನಾಯ್ಕ್‌ರವರಿಗೂ, ಶ್ರೀ ಟಿ.ಜಿ. ಜೀವನ್‌ಪ್ರಕಾಶ್ ಮಾಜಿ ಅಧ್ಯಕ್ಷರು, ಶ್ರೀ ಧರ್ಮೇಂದ್ರ ನಾಯ್ಕ್ ಮಾಜಿ ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಾದ ಎ.ಬಿ. ಉದಯ ಕುಮಾರ್, ಹೆಚ್.ಜಿ. ಮಲ್ಲಿಕಾರ್ಜುನ್, ವಿ.ಆರ್. ಶಿವಮೂರ್ತಿ, ಹೆಚ್.ಶಾಂತಕುಮಾರ್, ಕೆ.ಬಿ.ಲಿಂಗಮೂರ್ತಿ, ಬಿ. ಓ. ರಾಜು, ಶ್ರೀಮತಿ ಶಾರದಮ್ಮ, ಶ್ರೀಮತಿ ಲತಾ, ಎನ್. ನಾಗರಾಜ್ ಕ್ಷೇತ್ರಾಧಿಕಾರಿ ಡಿಸಿಸಿಬಿ ಬ್ಯಾಂಕ್ ಹಾಗೂ ಈಚಘಟ್ಟ, ಹನುಮನಹಳ್ಳಿ, ಹಿರೇತೊಗಲೇರಿ, ಚಿಕ್ಕತೊಗಲೇರಿ, ಕಳವೂರು ಗ್ರಾಮಗಳ ಎಲ್ಲಾ ಹಿರಿಯರಿಗೂ, ಗ್ರಾಮದ ಎಲ್ಲಾ ಸದಸ್ಯರಿಗೂ, ಹೃತ್ಪೂರ್ವಕ ಕೃತಜ್ಞತೆಗಳು.








ಘನ ಹಿರಿಯ ದಿವಾಣಿ ನ್ಯಾಯಾಲಯ, ದಾವಣಗೆರೆ

ಪಿ.ಅಂಡ್ ಎಸ್.ಸಿ. ನಂ 02/2021
ಅರ್ಜಿದಾರರು:

1. ಶ್ರೀ ಮಹೇಶ್ ಜೆ.ಎಂ ದಿ|| ಜಾನೇಶ್ವರ್ ಮಾಲ್‌ವಾಡೆ, ವಯಸ್ಸು ಸುಮಾರು 46 ವರ್ಷ, ವಾಸ: ನಂ 4300/51, 7ನೇ ಅಡ್ಡ ರಸ್ತೆ ಹೇಮಾವತಿ ಹಾಸ್ಟೆಲ್ ಹತ್ತಿರ, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
2. ಶ್ರೀ ಹರೀಶ್. ಜೆ.ಎಂ ದಿ|| ಜಾನೇಶ್ವರ್ ಮಾಲ್‌ವಾಡೆ, ವಯಸ್ಸು ಸುಮಾರು 46 ವರ್ಷ, ವಾಸ: ನಂ 4300/51, 7ನೇ ಅಡ್ಡ ರಸ್ತೆ ಹೇಮಾವತಿ ಹಾಸ್ಟೆಲ್ ಹತ್ತಿರ, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
3. ಶ್ರೀಮತಿ ವೀಣಾ ಎಂ.ಆರ್. ಬಿನ್ ದಿ|| ಜಾನೇಶ್ವರ್ ಮಾಲ್‌ವಾಡೆ, ವಾಸ: 3173/2, 10ನೇ ಮುಖ್ಯ ರಸ್ತೆ, 2 ರಸ್ತೆ ಎದುರು, ಎಸ್.ಎಸ್ ರೆಸ್ಟಂಟ್, ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ.

ವಿರುದ್ದ

ಎದುರುದಾರರು: ಯಾರು ಇಲ್ಲ

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಾಣಿಸಿದ ಅರ್ಜಿದಾರರುಗಳು ತಾವು ದಾವಣಗೆರೆ ನಗರದ ಸಿದ್ದವೀರಪ್ಪ ಬಡಾವಣೆ ಮತ್ತು ಎಂ.ಸಿ.ಸಿ 'ಬಿ' ಬ್ಲಾಕ್ ನ ದಿವಂಗತ ಶ್ರೀ ಜ್ಞಾನೇಶ್ವರ ಮಾಲ್‌ವಾಡೆ ಮತ್ತು ದಿವಂಗತ ಕುಸುಮಾವತಿ ವಾರಸುದಾರರೆಂದು ಮತ್ತು ಸದರಿ ಶ್ರೀ ಜ್ಞಾನೇಶ್ವರ ಮಾಲ್‌ವಾಡೆ ಮತ್ತು ದಿವಂಗತ ಕುಸುಮಾವತಿ ಇವರು ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ದಾವಣಗೆರೆ ಖಾಯಂ ಠೇವಣಿ ಮತ್ತು ಉಳಿತಾಯ ಖಾತೆ ಹಾಗೂ ಇತರೆ ಸೌಲಭ್ಯಗಳಿಗೆ ತಾವೇ ವಾರಸುದಾರರೆಂದು ಘೋಷಿಸಿ ವಾರಸುಪತ್ರ ನೀಡಬೇಕೆಂದು ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿಗೆ ಸಂಬಂಧಪಟ್ಟಂತೆ ಯಾರದ್ದಾದರೂ ತಕರಾರು ಇದ್ದರೆ ದಿನಾಂಕ 01.02.2021 ರಂದು ಬೆಳಿಗ್ಗೆ 11.00 ಗಂಟೆಗೆ ವೈಯುಕ್ತಿಕವಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಈ ಅರ್ಜಿಯನ್ನು ತೀರ್ಮಾನಿಸಲಾಗುವುದು.

ದಿನಾಂಕ 18.01.2021 ರಂದು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ನೀಡಿದೆ.

ಶ್ರೀ ಕೆ.ಜಿ.ಕೆ ಸ್ವಾಮಿ, ಶ್ರಿ ಎಸ್.ಜಿ. ಮಹಾವೀರ್
ಅರ್ಜಿದಾರರ ಪರ ನ್ಯಾಯವಾದಿಗಳು
'ಲಾ ಸೆಲ್ಯೂಷನ್', ನಂ. 714/4ಎ, 4ಬಿ, ಬೆನಕೇಶ್ ಪ್ಲಾಜಾ, ಒಂದನೇ ಮಹಡಿ, ಜನತಾವಾಣಿ ಪ್ರೆಸ್ ಎದುರು, ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ.

ಶಿರಸ್ತೇದಾರರು
2ನೇ ಹೆಚ್ಚುವರಿ ಹಿರಿಯ ಮತ್ತು ಜೆಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ.



## ಕುಂದುವಾಡ ಕೆರೆಯಲ್ಲಿ ಹೂಳು ಎಲ್ಲಿದೆ ?

ಕುಂದುವಾಡ ಕೆರೆಯನ್ನು ಅಭಿವೃದ್ಧಿ ಹೆಸರಿನಲ್ಲಿ ಬರಿದು ಮಾಡಲಾಗಿದೆ. ಕೆರೆಯಲ್ಲಿನ ಹೂಳು ತೆಗೆಯಲಾಗುವುದು ಎಂದು ತಿಳಿಸಲಾಗಿದೆ. ನದಿ ನೀರು ಪೈಪ್‌ಗಳ ಮೂಲಕ ಬರುತ್ತಿರುವಾಗ ಹೂಳಿನ ಸಮಸ್ಯೆಯೇ ಇಲ್ಲ. ಬರಿದಾಗಿರುವ ಕೆರೆಯ ಮಧ್ಯೆ ಜನರು ಸೆಲ್ಫಿ ತೆಗೆಯುತ್ತಾ ಅಡ್ಡಾಡುತ್ತಿದ್ದಾರೆ. ಅದು ಮಣ್ಣಿನ ಗಟ್ಟಿ ನೆಲವಾಗಿದೆ. ಹೂಳು ಇದ್ದಿದ್ದರೆ ಕೆಸರಿನಲ್ಲಿ ಜನ ಸಿಲುಕಬೇಕಿತ್ತು. ಕೆರೆಯಲ್ಲಿ ಇಲ್ಲದ ಹೂಳು ತೆಗೆಯುವುದೇ ಅಭಿವೃದ್ಧಿಯೇ ?

- ಡಾ. ಎಸ್. ಶಿಶುಪಾಲ, ದಾವಣಗೆರೆ

# ಟ್ರಂಪ್ ನೀತಿಗಳನ್ನು ಬದಲಿಸಿದ ಜೋ ಬಿಡೆನ್

**ಮೊದಲ ದಿನವೇ 15 ಪ್ರಮುಖ ನಿರ್ಧಾರ ಪ್ರಕಟಿಸಿದ ಅಮೆರಿಕಾ ನೂತನ ಅಧ್ಯಕ್ಷ**

ವಾಷಿಂಗ್ಟನ್, ಜ. 21 – ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಮೊದಲ ದಿನವೇ ಜೋ ಬಿಡೆನ್ 15 ಕಾರ್ಯಕಾರಿ ಆದೇಶಗಳನ್ನುಹೊರಡಿಸಿದ್ದು, ಹಿಂದಿನ ಡೊನಾಲ್ಡ್ ಟ್ರಂಪ್ ಆಡಳಿತದ ಪ್ರಮುಖ ನೀತಿಗಳನ್ನು ಬದಲಿಸಿದ್ದಾರೆ.

ಪರಿಸರ ಬದಲಾವಣೆ ಕುರಿತು ಪ್ಯಾರಿಸ್ ಒಪ್ಪಂದಕ್ಕೆ ಸೇರ್ಪಡೆಯಾಗುವುದರಿಂದ ಹಿಡಿದು ವಿಶ್ವ ಆರೋಗ್ಯ ಸಂಘಟನೆಯಿಂದ ಅಮೆರಿಕ ಹಿಂದೆ ಸರಿಯುವುದನ್ನು ತಡೆಯುವವರೆಗಿನ ಹಲವಾರು ನಿರ್ಧಾರಗಳನ್ನು ಬದಲಿಸಲಾಗಿದೆ. ಮುಸ್ಲಿಮರ ಮೇಲಿನ ಪ್ರವಾಸ ನಿಷೇಧವನ್ನು ತೆರವುಗೊಳಿಸಿರುವ ಜೊತೆಗೆ ಮೆಕ್ಸಿಕೋ ಗಡಿಯಲ್ಲಿ ಗೋಡೆ ನಿರ್ಮಿಸುವುದಕ್ಕೆ ತಕ್ಷಣವೇ ತಡೆಯಾಜ್ಞೆ ಹೊರಡಿಸಲಾಗಿದೆ.

ಕಾರ್ಯಾಂಗದ ಕ್ರಮಗಳ ಬಗ್ಗೆ ನನಗೆ ಹೆಮ್ಮೆ ಇದೆ. ಅಮೆರಿಕದ ಜನತೆಗೆ ನಾನು ನೀಡಿರುವ ಭರವಸೆಗಳನ್ನು ಈಡೇರಿಸುತ್ತೇನೆ. ನಾವು ಸಾಗುವ ಹಾದಿ ಇನ್ನೂ ದೂರವಿದೆ. ಇವು ಕೇವಲ ಕಾರ್ಯಕಾರಿ ಆದೇಶಗಳು. ಅವು ಪ್ರಮುಖವಾಗಿವೆ. ಆದರೆ, ನಾವು ಶಾಸನಾತ್ಮಕವಾಗಿ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂದು ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಬಿಡೆನ್ ಹೇಳಿದ್ದಾರೆ.

ಮುಂದಿನ ಕೆಲ ದಿನಗಳಲ್ಲಿ ಇನ್ನೂ ಪ್ರಮುಖ ಆದೇಶಗಳನ್ನು ಹೊರಡಿಸಲಾಗುವುದು. ಇಂದಿನಿಂದ ಕೊರೊನಾ ಬಿಕ್ಕಟ್ಟು, ಆರ್ಥಿಕ ಬಿಕ್ಕಟ್ಟು ಹಾಗೂ ಪರಿಸರ ಬಿಕ್ಕಟ್ಟುಗಳು ಮತ್ತು ಜನಾಂಗೀಯ ಸಮಾನತೆಯ ವಿಷಯಗಳ ಕುರಿತು ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ತಿಳಿಸಿದ್ದಾರೆ.

ಬಿಡೆನ್ ತೆಗೆದುಕೊಂಡ ಮೊದಲ ಕ್ರಮಗಳಲ್ಲಿ ಮುಂದಿನ ನೂರು ದಿನಗಳ ಕಾಲ ಮಾಸ್ಕ್ ಧರಿಸುವುದೂ ಸಹ ಸೇರಿದೆ. ಸರ್ಕಾರಿ ಕಚೇರಿ, ಜಾಗಕ್ಕೆ ಭೇಟಿ ನೀಡುವವರು ಹಾಗೂ ಸಾರ್ವಜನಿಕ ಸಾರಿಗೆ ಬಳಸುವವರು ಮಾಸ್ಕ್ ಧರಿಸ ಬೇಕೆಂದು ಆದೇಶ ಹೊರಡಿಸಲಾಗಿದೆ.

# ಬಿಐಇಟಿ 10 ಪ್ರಾಜೆಕ್ಟ್‌ಗಳು ಅತ್ಯುತ್ತಮ : 30 ಲಕ್ಷ ರೂ. ಅನುದಾನ

**ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಾಧನೆಗೆ ಎಸ್ಸೆಸ್, ಎಸ್ಸೆಸ್ಸೆಂ ಶ್ಲಾಘನೆ**

ದಾವಣಗೆರೆ, ಜ.21- ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ವಿದ್ಯಾಲಯದ ವಿವಿಧ ವಿಭಾಗಗಳಿಂದ ಸಲ್ಲಿಸಿದ 15 ಪ್ರಾಜೆಕ್ಟ್‌ಗಳಲ್ಲಿ 10 ಪ್ರಾಜೆಕ್ಟ್‌ಗಳನ್ನು ಅತ್ಯುತ್ತಮ ಎಂದು ಪರಿಗಣಿಸಿದೆ.

ಬಿಐಇಟಿಯ ವಿವಿಧ ವಿಭಾಗಗಳಿಂದ ಒಟ್ಟು 15 ಪ್ರಾಜೆಕ್ಟ್‌ಗಳ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇವುಗಳಲ್ಲಿ 10 ಪ್ರಾಜೆಕ್ಟ್‌ಗಳು ಅತ್ಯುತ್ತಮವೆಂದು ಆಯ್ಕೆಗೊಂಡು ಒಟ್ಟು 30 ಲಕ್ಷ ರೂ.ಗಳ ಅನುದಾನ ಪಡೆದಿವೆ.

ಸಿವಿಲ್, ಕಂಪ್ಯೂಟರ್ ಹಾಗೂ ಐ.ಎಸ್. ವಿಭಾಗದಿಂದ ತಲಾ ಎರಡು, ಕೆಮಿಕಲ್, ಇಲೆಕ್ಟ್ರಿಕಲ್, ಬಿ.ಟಿ. ಮತ್ತು ಮೆಕ್ಯಾನಿಕಲ್ ವಿಭಾಗದಿಂದ ತಲಾ ಒಂದು ಪ್ರಾಜೆಕ್ಟ್‌ಗಳು ಅನುದಾನ ಪಡೆಯಲು ಆಯ್ಕೆಯಾಗಿವೆ.

ಸರ್ಕಾರವು ವಿದ್ಯುನ್ಮಾನ, ಐ.ಟಿ., ಬಿ.ಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವತಿಯಿಂದ ಪ್ರತಿವರ್ಷ ವಿಜ್ಞಾನ ಮತ್ತು ತಂತ್ರಜ್ಞಾನ ವಿದ್ಯಾರ್ಥಿಗಳಿಗೆ ಸ್ವ-ಉದ್ಯಮಶೀಲತೆಗೆ ಸಹಕಾರಿಯಾಗುವ ಪ್ರಾಜೆಕ್ಟ್ ವರ್ಕ್ ಕೈಗೊಳ್ಳಲು ಧನಸಹಾಯ ನೀಡುತ್ತದೆ.

ಸಮಾಜಕ್ಕೆ ಉಪಯುಕ್ತವಾಗುವ ಮತ್ತು ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ಅತ್ಯುತ್ತಮ ಪ್ರಾಜೆಕ್ಟ್‌ಗಳು ಇದಕ್ಕಾಗಿ ಆಯ್ಕೆಗೊಳ್ಳುತ್ತವೆ. ಈ ಆಯ್ಕೆಗಾಗಿ ನಿಗದಿತ ಮಾನದಂಡವಿದ್ದು, ಪ್ರತಿ ಪ್ರಾಜೆಕ್ಟನ್ನು ತಜ್ಞರ ತಂಡ ಸೂಕ್ಷ್ಮವಾಗಿ ಪರಿಶೀಲಿಸಿ, ಆಯ್ಕೆ ಮಾಡುತ್ತದೆ.

ಸರ್ಕಾರವು ಪ್ರತಿವರ್ಷ ಈ ಅನುದಾನ ನೀಡುತ್ತಿದ್ದು, ಇದು ಎರಡನೆಯ ಗುಂಪಿನ ಆಯ್ಕೆಯಾಗಿರುತ್ತದೆ. ಮೊದಲ ಗುಂಪಿನಲ್ಲಿ ಕಾಲೇಜಿನ ಹತ್ತು ಪ್ರಾಜೆಕ್ಟ್‌ಗಳು ಒಟ್ಟು 22 ಲಕ್ಷ ಅನುದಾನದೊಂದಿಗೆ ಆಯ್ಕೆಯಾಗಿದ್ದವು.

ಜಗತ್ತಿನಾದ್ಯಂತ ಕೋವಿಡ್-19 ತಂದಿಟ್ಟ ಈ ಕಠಿಣ ಪರಿಸ್ಥಿತಿಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಈ ಸಾಧನೆಯನ್ನು ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಶಾಮನೂರು ಶಿವಶಂಕರಪ್ಪ, ಜಂಟಿ ಕಾರ್ಯದರ್ಶಿ ಶಾಮನೂರು ಮಲ್ಲಿಕಾರ್ಜುನ್, ಬಿ.ಐ.ಇ.ಟಿ ಪ್ರಾಂಶುಪಾಲ ಡಾ. ಎಚ್. ಬಿ. ಅರವಿಂದ್ ಮತ್ತು ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಅವರು ಅಭಿನಂದಿಸಿದ್ದಾರೆಂದು ಬಿ.ಐ.ಇ.ಟಿ ನೈನ್ ಸೆಂಟರಿನ ಡಾ. ಪೂರ್ಣಿಮಾ ಮತ್ತು ಭರತ್ ತಿಳಿಸಿದ್ದಾರೆ.

## ಹೊದಿಗೆರೆಯಲ್ಲಿ ನಾಳೆ ಷಹಾಜಿ ರಾಜೇ ಭೋಂಸ್ಲೆ ಪುಣ್ಯಾರಾಧನೆ



ದಾವಣಗೆರೆ,ಜ.21- ಶ್ರೀ ಷಹಾಜಿ ರಾಜೇ ಭೋಂಸ್ಲೆ ಅವರ 357ನೇ ಪುಣ್ಯಾರಾಧನೆ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 23ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಚನ್ನಗಿರಿ ತಾಲ್ಲೂಕಿನ ಹೊದಿಗೆರೆ ಗ್ರಾಮದಲ್ಲಿರುವ ರಾಜೇರವರ ಸ್ಮಾರಕದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಶ್ರೀ ಮಂಜುನಾಥ ಸ್ವಾಮಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿದ್ದು, ಸ್ಮಾರಕಕ್ಕೆ ಪೂಜೆ, ವೇದಿಕೆ ಕಾರ್ಯಕ್ರಮ, ಆಶೀರ್ವಚನ, ಭೋಜನ ವ್ಯವಸ್ಥೆ ಮಾಡಲಾಗಿದೆ ಎಂದು ನಗರದ ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷ ಯಶವಂತರಾವ್ ಜಾಧವ್ ತಿಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ನಗರ ಮತ್ತು ತಾಲ್ಲೂಕಿನ ಸಮಾಜ ಬಾಂಧವರು ಭಾಗವಹಿಸಲು ಅನುಕೂಲವಾಗುವಂತೆ ಬಸ್ಸಿನ ವ್ಯವಸ್ಥೆ ಮಾಡಲಾಗಿದ್ದು, ನಾಡಿದ್ದು ದಿನಾಂಕ 23ರ ಶನಿವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ವೀರ ಮದಕರಿ ನಾಯಕ ವೃತ್ತ (ಹೊಂಡದ ಸರ್ಕಲ್) ದಿಂದ ಬಸ್ ಹೊರಡಲಿದೆ ಎಂದು ಸಮಾಜದ ಅಧ್ಯಕ್ಷ ಡಿ.ಮಾಲತೇಶರಾವ್ ಜಾಧವ್ ತಿಳಿಸಿದ್ದಾರೆ.

## ನಿಟುವಳ್ಳಿಯಲ್ಲಿ ಸಿಮೆಂಟ್ ರಸ್ತೆಯನ್ನಾಗಿ ಮಾಡುವ ಕಾಮಗಾರಿಗೆ ಸವಿತಾ ಚಾಲನೆ



ದಾವಣಗೆರೆ,ಜ.21- ನಗರ ಪಾಲಿಕೆಯ 35ನೇ ವಾರ್ಡಿನ ನಿಟುವಳ್ಳಿ ಕಾಲೇಜು ರಸ್ತೆಯನ್ನು ಸಿಮೆಂಟ್ ರಸ್ತೆಯನ್ನಾಗಿ ಮಾಡುವ ಕಾಮಗಾರಿಗೆ ಇಂದು ಚಾಲನೆ ನೀಡಲಾಯಿತು. ಈ ವಾರ್ಡಿನ ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ ಅವರು ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ವಾರ್ಡಿನ ಪ್ರಮುಖರುಗಳಾದ ಕಾಂಗ್ರೆಸ್ ಮುಖಂಡ ಗಣೇಶ್ ಹುಲ್ಲಮನೆ, ಮಾರುತಿ, ದೇವೇಂದ್ರಪ್ಪ, ಸೋಮಶೇಖರ್, ಹರೀಶ್ ಮತ್ತಿತರು ಉಪಸ್ಥಿತರಿದ್ದರು.

## ರಿಲೈಯನ್ಸ್ ಜಿಯೋ ಹೆಸರಿನಲ್ಲಿ ಗೋಧಿ ಹಿಟ್ಟು ಮಾರುತ್ತಿದ್ದವರ ಬಂಧನ

ಅಹಮದಾಬಾದ್, ಜ. 21 – ರಿಲೈಯನ್ಸ್ ಜಿಯೋ ಚಿಹ್ನೆ ಇರುವ ಗೋಣಿ ಚೀಲದಲ್ಲಿ ಗೋಧಿ ಹಿಟ್ಟು ಮಾರಿದ ಆರೋಪದ ಮೇಲೆ ಗುಜರಾತ್‌ನ ಸೂರತ್‌ನಲ್ಲಿ ನಾಲ್ವರನ್ನು ಬಂಧಿಸಲಾಗಿದೆ.

ವ್ಯಾಪಾರಿ ಚಿಹ್ನೆಗಳ ಕಾಯ್ದೆ ಉಲ್ಲಂಘಿಸಿದ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿದೆ. ರಾಧಾಕೃಷ್ಣ ಟ್ರೇಡಿಂಗ್ ಕಂಪನಿಯ ಭಾರತ್ ಗಜೇರಾ ಎಂಬ ವ್ಯಕ್ತಿ ಪ್ರಮುಖ ಆರೋಪಿ ಎಂದು ಇನ್ಸ್‌ಪೆಕ್ಟರ್ ಎ.ಎನ್. ಜಾನಿ ಹೇಳಿದ್ದಾರೆ.

ಜಿಯೋ ಚಿಹ್ನೆಯೊಂದಿಗೆ ಗೋಧಿ ಹಿಟ್ಟು ಮಾರಲು ಗೋಣಿ ಚೀಲಗಳನ್ನು ಪೂರೈಸುತ್ತಿದ್ದ ಹಾಗೂ ಚಿಹ್ನೆಗಳನ್ನು ಮುದ್ರಿಸುತ್ತಿದ್ದ ಇತರೆ ಮೂವರನ್ನು ಬಂಧಿಸಲಾಗಿದೆ. ಟಿವಿ ಸುದ್ದಿಯ ಮೂಲಕ ತನ್ನ ಲೋಗೋ ಅನ್ನು ಅಕ್ರಮವಾಗಿ ಬಳಸುತ್ತಿದ್ದುದು ಕಂಡು ಬಂದ ನಂತರ ರಿಲೈಯನ್ಸ್ ಜಿಯೋ ಪೊಲೀಸರಲ್ಲಿ ದೂರು ದಾಖಲಿಸಿತ್ತು.


**ದಾವಣಗೆರೆ ನಗರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,**

ಆಟೋಮೊಬೈಲ್ಸ್ ಸೊಸೈಟಿ ಬಿಲ್ಡಿಂಗ್, ಪಿ.ಬಿ. ರಸ್ತೆ, ದಾವಣಗೆರೆ-577006.

**ಅರ್ಹ ಅಭ್ಯರ್ಥಿಗಳು ಬೇಕಾಗಿದ್ದಾರೆ**

ಮೇಲೆ ಕಾಣಿಸಿದ ಸಹಕಾರ ಸಂಘದ ಖಾಲಿ ಇರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು (ನೇಮಕಾತಿಗಾಗಿ) ಆಹ್ವಾನಿಸಲಾಗಿದೆ.

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ |
|---|---|---|---|
| 1 | ಲೆಕ್ಕಿಗರು/ ನಗದು ಗುಮಾಸ್ತರು | 02 | ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದ B.Com ಪದವಿ ಹೊಂದಿರಬೇಕು. ಗಣಕಯಂತ್ರದ ಅನುಭವ ಕಡ್ಡಾಯ. |
| 2 | ಜವಾನರು | 01 | ಕನಿಷ್ಠ ದ್ವಿತೀಯ ಪಿಯುಸಿ ಪಾಸಾಗಿರಬೇಕು. |

ವಿಶೇಷ ಸೂಚನೆ : ಮೇಲೆ ಕಾಣಿಸಿದ ಖಾಲಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಅಭ್ಯರ್ಥಿಗಳು ತಮ್ಮ ಮೂಲ ದಾಖಲಾತಿಗಳೊಂದಿಗೆ ದಿನಾಂಕ 30.01.2021ರ ಬೆಳಿಗ್ಗೆ 11.00 ರಿಂದ ಸಂಘದ ಕಛೇರಿಯಲ್ಲಿ ಸಂದರ್ಶನ ಕೊಡಬಹುದು. ಅನುಭವಕ್ಕೆ ಮೊದಲ ಆದ್ಯತೆವುಂಟು. ವೇತನವನ್ನು ಅನುಭವದ ಮೇಲೆ ನಿಗದಿಪಡಿಸಲಾಗುವುದು. ಭದ್ರತಾ ಠೇವಣಿ ಕಡ್ಡಾಯವಾಗಿರುತ್ತದೆ. ಸಂಘದ ನಿಯಮಾವಳಿ ಪ್ರಕಾರ ನೇಮಕ ಮಾಡಿಕೊಳ್ಳಲಾಗುವುದು. ಆಡಳಿತ ಮಂಡಳಿಯ ನಿರ್ಣಯವೇ ಅಂತಿಮ.

ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ದಾವಣಗೆರೆ ನಗರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ,
ದಾವಣಗೆರೆ.


## ಪುರಿ ದೇವಾಲಯಕ್ಕೆ 25 ಸಾವಿರ ಜನರ ಭೇಟಿ

ಪುರಿ, ಜ. 21 – ಪ್ರಸಿದ್ಧ ಪುರಿ ಜಗನ್ನಾಥ ದೇವಾಲಯ ಪ್ರವೇಶಕ್ಕೆ ಕೊರೊನಾ ವರದಿ ಕಡ್ಡಾಯವನ್ನು ತೆರವುಗೊಳಿಸಿದ ಮೊದಲ ದಿನ 25 ಸಾವಿರಕ್ಕೂ ಹೆಚ್ಚು ಭಕ್ತರು ದೇವಾಲಯಕ್ಕೆ ಭೇಟಿ ನೀಡಿದ್ದಾರೆ.

ಕೊರೊನಾ ನೆಗೆಟಿವ್ ವರದಿ ತರುವ ಅಗತ್ಯವಿಲ್ಲದಿದ್ದರೂ ಸಹ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು. ದೇವಾಲಯದ ಆವರಣದಲ್ಲಿ ತಂಬಾಕು ಹಾಗೂ ವೀಳ್ಯದ ಎಲೆ ಅಗಿಯುವುದರ ಮೇಲೆ ನಿರ್ಬಂಧ ಹೇರಲಾಗಿತ್ತು. ದೈಹಿಕ ಅಂತರ ಹಾಗೂ ಸ್ಯಾನಿಟೈಸರ್ ಬಳಕೆ ಕಡ್ಡಾಯಗೊಳಿಸಲಾಗಿತ್ತು. ದೇವಾಲಯಕ್ಕೆ ಸಾಕಷ್ಟು ಜನ ಬರುವುದರಿಂದ ದೇವಾಲಯದ ಸಿಬ್ಬಂದಿಗೆ ಆದ್ಯತೆಯ ಮೇಲೆ ಕೊರೊನಾ ಲಸಿಕೆ ಒದಗಿಸಬೇಕು ಎಂದು ದೇವಾಲಯದ ಆಡಳಿತ ಮಂಡಳಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದೆ.

## ತುರ್ಚಘಟ್ಟದಲ್ಲಿ ಉರುಸ್ ಕಾರ್ಯಕ್ರಮ



ದಾವಣಗೆರೆ, ಜ.21 - ತಾಲ್ಲೂಕಿನ ತುರ್ಚಘಟ್ಟ ಗ್ರಾಮದಲ್ಲಿ ಹಜರತ್ ಸೈಯದ್ ಸಾದತ್ ಷಾವಲಿರವರ 65ನೇ ಉರುಸ್ ಕಾರ್ಯಕ್ರಮವನ್ನು ಸರಳವಾಗಿ ಆಚರಿಸಲಾಯಿತು. ಶಾಸಕ ಡಾ॥ ಶಾಮನೂರು ಶಿವಶಂಕರಪ್ಪ ಉರುಸ್‌ನಲ್ಲಿ ಭಾಗವಹಿಸಿದ್ದರು. ಉರುಸ್ ಸಮಿತಿಯಿಂದ ಶಾಸಕರನ್ನು ಸನ್ಮಾನಿಸಿ, ಗೌರವಿಸಲಾಯಿತು. ಈ ಸಂದರ್ಭದಲ್ಲಿ ಎಸ್.ಬಸವರಾಜಪ್ಪ, ಅನ್ವರ್ ಬಾಷಾ, ಟಿ.ಹೆಚ್.ಕಲ್ಲಪ್ಪ, ರಿಯಾಜ್ ಅಹ್ಮದ್, ಬಿ.ಹನುಮಂತಪ್ಪ, ಕರೀಮ್ ಸಾಬ್, ಎಸ್. ಜೆ.ಸತೀಶ್ ಮತ್ತಿತರರು ಹಾಜರಿದ್ದರು.









JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte